Some examples of the values we should focus on are as follows. These values are at times to be addressed not only through teachings but also permeate the whole curriculum. Either way, they are the basis for the social, intellectual, emotional, spiritual and moral development of the student. Student to consider these values, and thereby to develop the knowledge, skills and attitudes that enable them to develop as reflective learners and grow to be stable, educated and civil adults.

* Respect
* Responsibility
* Tolerance
* Thoughtfulness
* Appreciation
* Honesty
* Empathy
* Positivity
* Unity
* Peace
* Humility

In Value based educational system, students develop a secure sense of self. The become more empowered to take responsibility of their own learning. They develo academic diligence when they are involved with a value based school. They develop rationa trust. They become articulate and able to talk freely and well through silence and quietud in a value based framework. Students can understand much more deeply their wor and their lives. Value based Education also promotes effective learning and underpin continuous improvement of the personal, social, moral and economic well being. It is a investment in individual capability and self responsibility and its product.

As a consequence, students become academically more diligent, the institutio acquire a more peaceful ambience. There would be better student teacher relationship forged. The wellbeing of student and teacher improves and parents are more engaged wi the institution. Explicit teaching of values provides a common ethical language for talkin about interpersonal behaviour. It also provides a mechanism for self-regulated behaviou Both interpersonal behaviour and self-regulated behavior are necessary to a moden student.

Students who inculcate this show an increased attentiveness in class and a greate capacity to work independently. It helps them to assume more responsibility for their ow learning and ask questions and work together more cooperatively. They take greater ca put more effort in their work and take more pride in their efforts. Naturally thei academic diligence which is the need of this hour increases. Such students naturall enhance the ambience of the institution they study there by bringing more harmoniou relationships between all stake holders. This leads to a trusting relationship between student and teacher leading to more democratic classrooms. Students will be patientl listened and responded for their concerns and opinions. Teachers receive collegi support, strong leadership, confidence and knowledge through opportunities fo professional development and through staff collaboration. They re-examine their practice and role. The relationship and trust among staff and between teachers and families g fostered.

To conclude value based education cannot be easily measured but it is evide in the institution's positive ethos and in the personal qualities that students display i the society.



ಶ್ರೀ ರಾಮಚಂದ್ರ ಮಿಶನ್ ಮತ್ತು ಯುನೈಟೆಡ್ ನೇಷನ್ ಇನ್‌ಫಾರ್ಮೇಶನ್ ಸೆಂಟರ್ ಫಾರ್ ಇಂಡಿಯಾ ಮತ್ತು ಭೂತಾನ್ ಇವರ ಆಶ್ರಯದಲ್ಲಿ ನಡೆದ ಅಖಿಲ ಭಾರತ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ.



## ಅಜ್ಞಾನವು ಜ್ಞಾನದ ವೈರಿಯಲ್ಲ ತಾನು ಜ್ಞಾನಿಯೆಂಬ ಭ್ರಮೆಯೇ ಜ್ಞಾನದ ಅತಿ ದೊಡ್ಡ ವೈರಿ

– ಸ್ಟೀಫನ್ ಹಾಕಿಂಗ್

**ಪೀಠಿಕೆ :**

ನಹೀ ಜ್ಞಾನೇನ ಸದೃಶ್ಯಂ ಎಂಬಂತೆ ಜ್ಞಾನಕ್ಕೆ ಸಮನಾದುದು ಬೇರೊಂದಿಲ್ಲ. ಜ್ಞಾನವೆಂಬುದು ನಿಂತ ನೀರಿನಂತೆ ಸ್ಥಗಿತವಾಗಿರದೆ, ನಿರಂತರವಾದದ್ದು. ಮಹತ್ವವುಳ್ಳದ್ದಾಗಿದೆ. ಅಪರಿಮಿತವಾದ ಕತ್ತಲೆಯೊಳಗೆ ವಿಪರೀತವಾದ ಬೆಳಕಿರುವಂತೆ, ಜ್ಞಾನವೂ ಸಹ ಅಜ್ಞಾನದೊಳಗಿರುತ್ತದೆ. ನಾವು ಅಜ್ಞಾನಿಗಳಾದಾಗ ಮಾತ್ರವೇ ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯ. ಇರುಳಿರುವುದರಿಂದಲೇ ನಮಗೆ ಹಗಲಿನ ಮಹತ್ವ ತಿಳಿಯುವುದು. ಹಾಗೆ ಅಜ್ಞಾನವೆಂಬುದು ಹಲವಾರು ಆಯಾಮಗಳನ್ನು ಹೊಂದಿದೆ. ಯಾರೂ ಸಹ ಸಂಪೂರ್ಣ ಜ್ಞಾನಿಗಳಾಗಿರಲು ಸಾಧ್ಯವಿಲ್ಲ. ಆದರೆ ನಾವು ಜ್ಞಾನಿಗಳು ಎಂಬ ಭ್ರಮೆಯಲ್ಲಿ ಬದುಕುತ್ತಿರುತ್ತೇವೆ. ಅಂತಹ ಭ್ರಮೆಯೇ ನಮಗೆ ಜ್ಞಾನವನ್ನು ಪಡೆದುಕೊಳ್ಳಲು ತಡೆಯಾಗಿರುತ್ತದೆ. ಅಜ್ಞಾನವೆಂಬುದು ನಮ್ಮಲ್ಲಿ ಇನ್ನೂ ಹೆಚ್ಚು ಹೆಚ್ಚು ಜ್ಞಾನವನ್ನು ಪಡೆಯಲು ಸಹಕಾರಿಯಾಗಿದೆ. ಆದರೆ ನಾವು ಅಜ್ಞಾನವೆಂಬುದೇ ಜ್ಞಾನದ ಮಹಾವೈರಿ ಎಂದುಕೊಂಡಿದ್ದೇವೆ. ಹಸಿದವರಿಗೆ ಮಾತ್ರವೇ ಅನ್ನದ ಬೆಲೆ ಗೊತ್ತಿರಲು ಸಾಧ್ಯ. ಹಾಗೆ ಯಾರಲ್ಲಿ ಜ್ಞಾನದ ಹಸಿವು ಅಗಾಧವಾಗಿರುತ್ತದೋ ಅವರು ಮಾತ್ರವೇ ಹೆಚ್ಚು ಹೆಚ್ಚು ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯ. ಆದರೆ ನಾವು ಯಾರಲ್ಲಾದರೂ ನಮಗೆ ಗೊತ್ತಿಲ್ಲದಿರುವ ವಿಷಯದ ಬಗ್ಗೆ ಕೇಳಿದರೆ ನಮಗೆ ಅವಮಾನವಾಗುತ್ತದೆ. ನಾವು ಅಜ್ಞಾನಿಗಳಾಗುತ್ತೇವೆ ಎಂಬ ಭ್ರಮೆಯಲ್ಲಿರುತ್ತೇವೆ. ಆದರೆ ಭ್ರಮೆಯೆಂಬುದು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತವೆ. ನಮಗೆ ಸತ್ಯದ ಅರಿವನ್ನು ಅಡಗಿಸುತ್ತದೆ. ತಾನು ಜ್ಞಾನಿ ಎಲ್ಲವನ್ನೂ ತಿಳಿದುಕೊಂಡಿರುವೆ ಎಂದುಕೊಳ್ಳುತ್ತೇವೆ. ಆದರೆ ನಮ್ಮ ಕೊನೆಯುಸಿರು ಇರುವರೆಗೂ ಕಲಿಯುವಂತಹದ್ದು ಇದ್ದೇ ಇರುತ್ತದೆ. ಆದರೆ ಇದನ್ನು ತಿಳಿದುಕೊಳ್ಳದೆ ವಾಸ್ತವದ ಅರಿವಿಲ್ಲದೆ ತಾನೇ ಜ್ಞಾನಿಯೆಂಬ ಭ್ರಮೆಯಲ್ಲಿ ಬದುಕುತ್ತಿದ್ದೇವೆ.

**ವಿಷಯ ಬೆಳವಣಿಗೆ :**

ಮಹಾತ್ಮ ಗಾಂಧಿಯವರು ಹೇಳಿರುವಂತೆ ಕತ್ತಲಿನಿಂದ ಬೆಳಕಿನಡೆಗೆ ಸಾಗುವ ಪಯಣ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ. ಹಾಗೆ ಜ್ಞಾನವೆಂಬುದು ಬೆಳಕಿನಂತೆ ಪ್ರಕಾಶಮಾನವಾದುದು. ನಾವು ಅಜ್ಞಾನವೆಂಬ ಕತ್ತಲಿನಿಂದ ಜ್ಞಾನದ ಬೆಳಕನ್ನು ಪಡೆದುಕೊಳ್ಳಬೇಕು. ಆದರೆ ನಾವು ಅಜ್ಞಾನವೆಂಬುದೇ ಜ್ಞಾನಕ್ಕೆ ಅಡ್ಡಿಯಾಗುತ್ತದೆಂಬ ಭ್ರಮೆಯಲ್ಲಿದ್ದೇವೆ. ಜ್ಞಾನ ಎಂಬುದಕ್ಕೆ ಇಂದು ನಾಳೆಯೆಂಬುದಿಲ್ಲ. ಸರ್ವಕಾಲದಲ್ಲೂ ಸಹ ಮಹತ್ವವುಳ್ಳದ್ದಾಗಿದೆ. ಶಿಕ್ಷಣವೆಂಬುದು ಜ್ಞಾನವನ್ನು ಪಡೆದುಕೊಳ್ಳುವ ಮೊದಲ ಮೆಟ್ಟಿಲು ಎಂದುಕೊಂಡಿದ್ದೇವೆ ನಿಜ. ಆದರೆ ಇಂದು ವಿದ್ಯೆಯೆಂಬುದು ಕೇವಲ ಉದ್ಯೋಗ, ಹಣವನ್ನು ಸಂಪಾದಿಸುವ ಉದ್ದೇಶವನ್ನು ಹೊಂದಿದೆ. ಅದರಲ್ಲಿರುವ ಮಾನವೀಯ ಗುಣಗಳೇ ಮರೆಯಾಗಿವೆ. ಇಂದು ವಿದ್ಯೆಯನ್ನು ಪಡೆದಂತವರು ಎಷ್ಟೋ ಜನ ತಮಗೆ ಸರಿಯಾದ ಉದ್ಯೋಗ ಸಿಕ್ಕಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಂದರೆ ಅವರಿಗೆ ತಾವು ಸಮಾಜದಲ್ಲಿನ ಅಡತಡೆಗಳನ್ನು ಪರಿಹರಿಸಿಕೊಂಡು ಜೀವನವನ್ನು ಹೇಗೆ ಕಟ್ಟಿಕೊಳ್ಳಬೇಕೆಂಬ ಜ್ಞಾನವಿಲ್ಲದೆ, ಇಂದು ಇಂತಹ ಮಾರ್ಗವನ್ನು ಕಂಡುಕೊಂಡಿದ್ದಾರೆ. ಹೀಗೆ ಇಂದು ವಿದ್ಯಾವಂತರೆನಿಸಿಕೊಂಡವರೇ ಅಜ್ಞಾನಿಗಳಂತೆ ಅವಿದ್ಯಾವಂತರಂತೆ ವರ್ತಿಸುತ್ತಿದ್ದಾರೆ.

# ಬದಲಾವಣೆ ಜಗದ ನಿಯಮ

ಡಾ. ಉಮೇಶ ಅಂಗ...
ಉಪನ್ಯಾಸಕರು, ಕನ್ನಡ ವಿ...



ಯಾವುದೇ ಸನ್ನಿವೇಶ ಅದೆಷ್ಟೇ ನೋವು ನೀಡುತ್ತಿರಲಿ ಅದೆಷ್ಟೇ ಒತ್ತಡ ಉಂಟು ಮಾಡುತ್ತಿರಲಿ, ನಿರಾಶಾದಾಯಕ ಎಂದು ಮೇಲ್ನೋಟಕ್ಕೆ ಅನಿಸುತ್ತಿರಲಿ, ಅದು ಸುಂದರವಾದ ಬದಲಾವಣೆಗೆ ಕಾಯುತ್ತಿರುತ್ತದೆ. ಹಿಂದೆ ಯಾವುದಿತ್ತೋ ಅದು ಸಂಪೂರ್ಣವಾಗಿ ಬದಲಾಗುತ್ತಿರುತ್ತದೆ.

ನೀವು ಬದಲಾವಣೆಯನ್ನು ಸ್ವೀಕರಿಸಬಲ್ಲಿರಾ.....? ನೀವು ಕೆಲಸಮಾಡುವ ಕಛೇರಿಯ ವಾತಾವರಣ ಇರಬಹುದು ನಿಮ್ಮ ಆತ್ಮೀಯ ಸ್ನೇಹಿತರು ನಿಮ್ಮನ್ನು ಬಿಟ್ಟು ಹೋಗಿರುವ ಸಮಯ ಇರಬಹುದು ಇದು ಹೃದಯ ಹಿಂಡುವಂತದ್ದು. ಆದರೆ ಮಾನಸಿಕ ಒತ್ತಡ ನಿಮ್ಮ ಪ್ರೀತಿ ಪಾತ್ರರಿಗೆ ಋಣಾತ್ಮಕ (Negativ... ಸಂದೇಶ ಕಳುಹಿಸುತ್ತದೆ ಹಾಗೂ ನಿಮ್ಮ ಮಾನಸಿಕ ಚಂಚಲತೆಯನ್ನು ತೋರಿಸುತ್ತದೆ. ಅದರ ಬದಲು ಸುಮ್ಮನೆ ... ಮನದಲ್ಲಿ ಎದ್ದಿರುವ ಬಿರುಗಾಳಿಯನ್ನು ತಣ್ಣಗಾಗಿಸಿರಿ ಇಂತಹ ಅನೇಕ ಘಟನೆಗಳು ಸಂಭವಿಸಬಹುದು. ಆಗೆಲ್ಲಾ ಗುಣಾ... (Qualitative) ಮನೋಭಾವವನ್ನು ಬೆಳಸಿಕೊಂಡು ಮಾನಸಿಕ ಸದೃಢರಾಗಿ.

ಈ ಮಧ್ಯ ಬದಲಾವಣೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿರಿ. ಎಲ್ಲವನ್ನು ಪರೀಕ್ಷಿಸುವ ಏಕೈಕ ಉದ್ದೇಶದಿ... ಬದಲಾವಣೆ ಬರುತ್ತಿರುತ್ತದೆ. ಪ್ರತಿಯೊಂದು ಒಳ್ಳೆಯ ಉದ್ದೇಶಕ್ಕೆ ಬದಲಾವಣೆ ಆಗುವುದು ಸಹಜ ಎಂಬ ವಿಚಾರ... ಪದೇ ಪದೇ ಮನನ ಮಾಡಿಕೊಳ್ಳಿ. ಹೀಗೆ ಮಾಡುವುದರಿಂದ ಬಾಹ್ಯ ಪರಿಸ್ಥಿತಿಗಳ ಜೊತೆ ನಮ್ಮ ಮನ... ಹೊಂದಿಕೊಳ್ಳುತ್ತದೆ. ಮನಸ್ಸು ಹಾಗೂ ದೇಹದ ತುಂಬೆಲ್ಲಾ ಸಮಾಧಾನ ಪಸರಿಸುತ್ತದೆ.

ಮನದೊಳಗಿನ ಒತ್ತಡ ಕರಗಿ ಹೋಗುತ್ತದೆ. ಹೊಸ ಬೆಳಕು ಮೂಡುತ್ತದೆ. ಕಂಬಳಿ ಹುಳು ತನ್ನ ಜಗ... ಬದಲಾಗುತ್ತಿದೆ ಎಂದು ಅಳಬಹುದು. ಆದರೆ ಅದು ಸುಂದರ ಪಾತರಗಿತ್ತಿಯಾಗಿ ಬದಲಾಗುತ್ತಿರುತ್ತದೆ. ... ಬದಲಾವಣೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಮುಂದಾಗುವುದರ ಬಗ್ಗೆ ಯೋಜನಾ ಶಕ್ತಿಯ... ಬೆಳಸಿಕೊಳ್ಳಿ. "ಹೂವು ಅರಳಬೇಕು. ಗಿಡ ಬೆಳೆಯಬೇಕು" ಮತ್ತು ಪಾತರಗಿತ್ತಿ ಹಾರಾಡಬೇಕು ಎಂದು ಅಂದುಕೊ...

ಚಿತ್ರಗಾರನೊಬ್ಬ ತನ್ನ ಮೈಮೇಲೆ ಬಣ್ಣ ತುಂಬಿದಂತೆ ಬ್ರೆಷ್ ಆಡಿಸಲಿ ಎಂದು ಬಿಳಿಯ ಹಾಳೆ ಕಾಯುತ್ತಿರು... ಆದರೆ ಆ ಬಿಳಿಯ ಹಾಳೆ ಬದಲಾವಣೆಗೆ ಭಯಪಡುವುದಿಲ್ಲ. ಅದು ಬದಲಾವಣೆಯನ್ನು ಸ್ವೀಕರಿಸುತ್ತದೆ. ತನ್ನ ಮ... ಸುಂದರ ಚಿತ್ರ ಮೂಡಲಿ ಎಂದು ಬಿಳಿಹಾಳೆ ಬಯಸುತ್ತದೆ.

ಯಾವುದೇ ಸಮಸ್ಯೆಯ ಹಿಂದೆ ಅಡಗಿರುವ ಬದಲಾವಣೆ ಶಕ್ತಿಯ ಅರಿವು ನಮಗೆ ಇರುವುದಿಲ್ಲ. ಅದರ ಹಿ... ಇರುವ ದೊಡ್ಡ ಚಿತ್ರಣವನ್ನು ನಾವು ಗಮನಿಸುವುದಿಲ್ಲ. ಭಯ ಹುಟ್ಟಿಸುವ ಭಾವನೆಗಳನ್ನು ತಲೆಯಲ್ಲಿ ತುಂಬಿಕೊಂ... ಅದರಲ್ಲಿ ಮುಳುಗಿರುತ್ತೇವೆ. ಟೀ ಕಪ್‌ನಲ್ಲಿ ಮುಳಗಿ ಒದ್ದಾಡುವ ನೊಣದಂತೆ ಮಿಡುಕಾಡುತ್ತೇವೆ.

ಮೊದಲು ಭಾವನೆಗಳಿಂದ ಹೊರಬರಬೇಕು. ನಾವು ಟೀ ಕಪ್‌ನಲ್ಲಿರುವ ನೊಣವಲ್ಲ. ಸುಂದರ ಚಿತ್ರ... ಕಾಯುತ್ತಿರುವ ಬಿಳಿಯ ಹಾಳೆ ಅಂದುಕೊಳ್ಳಬೇಕು. ಈ ರೀತಿಯ ಬದಲಾವಣೆಗಳು ಬರಬೇಕಾದರೆ ನಮ್ಮ ದೃಷ್ಟಿಕೋ... ಬದಲಾಗಬೇಕು. ಈ ಬದಲಾವಣೆಗೆ ನಾವು ಸಾಕ್ಷಿಯಾಗಬೇಕಾದರೆ ಭಾವನೆಗಳಿಂದ ಹೊರಬರಬೇಕು. ನಮ್ಮ ಕಣ್ಣೀರ... ಒರಸಿಕೊಂಡು ನಮ್ಮ ಮಬ್ಬಾದ ದೃಷ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬೇಕಾಗಿದೆ.

ಯಾವುದೇ ಸನ್ನಿವೇಶದಿಂದ ನಾವು ಭಾವನಾತ್ಮಕವಾಗಿ ಹೊರ ಬಂದಷ್ಟು ನಮ್ಮಲ್ಲಿ ಶಾಂತಿ ತಾಳ್ಮೆ ಹೆಚ್ಚಾಗು... ಹೊಸದಾದ ಒಂದು ಜಗತ್ತು ಸೃಷ್ಟಿಯಾಗುತ್ತದೆ. ಶಾಂತಿ ತಾಳ್ಮೆಯಿಂದ ನಮ್ಮಲ್ಲಿನ ಭಯ ದೂರವಾಗುತ್ತದೆ. ಹಾಗೆಯೇ ನಾವು ಬದಲಾವಣೆಗೆ ಸಿದ್ಧರಾಗುತ್ತೇವೆ. ನಾವು ಅಂದುಕೊಂಡಂತೆ ಎಲ್ಲವೂ ನಡೆಯಬೇಕು ಅಂದುಕೊಂಡಾಗ ನಮ್ಮಲ್ಲಿ ಭಯ ಉಂಟಾಗುವುದು ಸಹಜ. ಆಗ ಮನಸ್ಸನ್ನು ಸಮಾಧಾನಪಡಿಸಬೇಕು. ಶಾಂತವಾಗಿರುವಂತೆ ನೋಡಿಕೊಳ್ಳಬೇಕು. ಆಗ ನಮ್ಮಲ್ಲಿ ಹೊಸ ಶಕ್ತಿ ಮೂಡುತ್ತದೆ. ಅದು ಮುಂದಿನ ಅವಕಾಶಗಳೆಡೆಗೆ ಯೋಚಿಸುವಂತೆ ಮನಸ್ಸನ್ನು ಪ್ರೇರೇಪಿಸುತ್ತದೆ.

ಮನಸ್ಸಿಗೆ ಮುದ ನೀಡುವ ಸಂಗೀತವನ್ನು ಕೇಳುವುದೋ, ಅತಿ ಮಧುರವಾದಂತ ಘಟನೆಗಳನ್ನು ಮೆಲುಕು ಹಾಕುವುದೋ, ರಾತ್ರಿ ಆಕಾಶದಲ್ಲಿನ ಚುಕ್ಕಿಗಳನ್ನು ನೋಡುತ್ತಾ ಮನಸ್ಸನ್ನು ಮೃದುವಾಗಿಸಬೇಕು. ಮೃದುತ್ವ ಪಡೆದಂತೆ ಮನಸ್ಸು ನಮ್ಮನ್ನು ನಗುವಂತೆ ಮಾಡುತ್ತದೆ. ಹಾಡುವಂತೆ ಮಾಡುತ್ತದೆ. ಈ ಹಾಡುವ ಮನಸ್ಸು ತನ್ನಲ್ಲೇ ಸೃಜನಶೀಲತೆಯನ್ನು ಬೆಳಸಿಕೊಳ್ಳುತ್ತದೆ. ಸೃಜನಶೀಲತೆ ಎಂದರೆ ಅರಳಲು ಕಾಯುವ ಪ್ರೀತಿ ಹಾಗೂ ಮೊಗ್ಗಿನ ಹಾಗೆ ಸೃಜನಶೀಲ ಬೀಜ ಬಿತ್ತಲು ಕಾಯುತ್ತಿರುವ ಭೂಮಿಯ ಹಾಗೆ.

ಸೃಜನಶೀಲತೆಯೊಂದಿಗೆ ಹೊಡದಾಡುವುದು ಬೇಡ ಏಕೆಂದರೆ ಪ್ರೀತಿಸುವ ಅರಳುವ ಗುಣಪಡಿಸಿಕೊಳ್ಳುವ ಸಾಮರ್ಥ್ಯವನ್ನು ನಾವು ಕಳೆದುಕೊಂಡಂತೆ ಎಷ್ಟೇ ನೋವಿನ ವಾತಾವರಣವನ್ನು ನಾವು ಕಳೆದುಕೊಂಡಂತೆ ಎಷ್ಟೇ ನೋವಿನ ವಾತಾವರಣವಿದ್ದರೂ ಹೇಳಿಕೊಳ್ಳಲಾಗದ ಘಟನೆಗಳಿದ್ದರೂ ಹೊಂದಿಕೊಳ್ಳುವ ಮೂಲಕ ಬದಲಾವಣೆ ಮೂಲಕ ಸಂಪೂರ್ಣ ಪರಿವರ್ತನೆಯಾಗಿರಿ..... ಹೊಸ ಚೈತನ್ಯ ಕಾಣಿರಿ.

## ಜೋಕ್ಸ್ :

* ಬ್ರಿಟಿಷಿನವನೊಬ್ಬ ಭಾರತೀಯನು ಮನೆಗೆ ಬಂದು ಊಟ ಮಾಡಿ ಕೇಳಿದ :
ಅಡುಗೆ ತುಂಬಾ ರುಚಿಯಾಗಿದೆ... ಇಂದು ಏನಾದರೂ ವಿಶೇಷವಿದೆಯೇ ?

ಭಾರತೀಯ : ಇಂದು ನನ್ನ ತಂದೆಯ ತಿಥಿ.
ಬ್ರಿಟಿಷಿನವನು : ತಗೋ 5 ಸಾವಿರ ರೂಪಾಯಿ ನಾಳೆ ನನ್ನ ತಿಥಿಯನ್ನು ಮಾಡು.

– * –

ಟೀಚರ್ : ಮೊಟ್ಟೆಯೊಳಗಿನಿಂದ ಮರಿ ಹೊರಗೆ ಬರುತ್ತೆ ಎಷ್ಟು ವಿಚಿತ್ರ ಅಲ್ವಾ ?
ಕಿಟ್ಟು : ಟೀಚರ್, ವಿಚಿತ್ರ ಮೊಟ್ಟೆಯೊಳಗಿನಿಂದ ಮರಿ ಹೊರಗೆ ಬರೋದು ಅಲ್ಲ,
ಅದರೊಳಗೆ ಮರಿ ಹೇಗೆ ಹೋಯ್ತು ಅನ್ನೋದು....!

–*––*–

ಪೊಲೀಸ್ : ಈ ಮಧ್ಯರಾತ್ರಿಯಲ್ಲಿ ಎಲ್ಲಿಗೆ ಹೋಗ್ತಿದ್ದಿಯಾ ?
ಕುಡುಕ : ಕುಡಿತದ ದುಷ್ಪರಿಣಾಮದ ಬಗ್ಗೆ ಭಾಷಣ ಕೇಳೋದಕ್ಕೆ.
ಪೊಲೀಸ್ : ಈ ಮಧ್ಯರಾತ್ರಿಯಲ್ಲಿ ಯಾರಯ್ಯ ಭಾಷಣ ಮಾಡ್ತಾರೆ ?
ಕುಡುಕ : ನನ್ನ ಹೆಂಡತಿ ಸಾರ್.

–– * ––

ಲಕ್ಚರ್ : ಸ್ಟೂಡೆಂಟ್ಸ್ ಕರ್ತವ್ಯ ಪ್ರಜ್ಞೆಗೂ ಭ್ರಮೆಗೂ ಇರುವ ವ್ಯತ್ಯಾಸವೇನು ?
ಸ್ಟೂಡೆಂಟ್ : ಸಾರ್ ! ನೀವು ಪಾಠ ಮಾಡುವುದು ನಿಮ್ಮ ಕರ್ತವ್ಯ, ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ ಎಂತ ತಿಳ್ಕೋಳೋದು ನಿಮ್ಮ ಭ್ರಮೆ.

**ಸಂಗ್ರಹ – ಹೇಮ ವಿ.**
ಪ್ರಥಮ ಬಿ.ಎಸ್ಸಿ., (ಪಿ.ಎಂ.ಇ.)

## From the Classrooms of DVS to Corporate Boardrooms ! - My Journey

**Ranghanath Kempanahally (R**
B.Sc., (PME), Senior Stude



Graduated in B.Sc., in Electronics from DVS College, Shimoga in 1995-96. Currently working as Senior Vice President at MOSCHIP Semiconductor Technologies, heading the Semiconductor Business Unit for Europe and USA operations.

**About Moschip Company :**

Moschip Semiconductor Technology Ltd is a public listed semiconductor desig services company with a unique combination of product development experise and ove a decade of deep knowledge on competencies ranging from ASIC / SOC / FPGA Design, Embedeed software and system designs catering to the defence, consume Electronics, Automotive, Medical, Telecommunications, Mobile and LOT industries.

My heartfelt wishes and Congratulations to the teaching and non-teaching sta of the College on this momentous occasion of the DVS Institute's golden Jubile celebrations. On this joyous occasion with great pleasure, I would like to share m journey from the Classrooms of DVS to Corporate boardrooms !

Coming from a humble village in the outskirts of Davanagere, graduating i Electronics with good grades was simply the one and only aim with a vision that goo grades will open up good opportunities. Unlike students of this day and age, it wa unclear what those opportunities might be. I had a hope that lecturers and my fello students would surely guide me on the next steps. Although grades/marks were t measure of your understanding of the subject, I was lucky to be guided by erudi lecturers like Mr. Dasharathi who through his unconventional methods of teaching not o made sure we achieve our grades but also helped us to develop a passion for the subje He planted a seed of passion for the subject in me through a series of practic examples. One such example I can recall was the mechanism of frequency and tuning Bhadravathi Radio Station which is still etched in my memory. This example I cou say was very instrumental at the time to help me understand the practical elements a developing a true love for the subject and urged me to learn more.

Three years of my graduation was filled with the usual campus fun every colle student would easily cherish as the golden days of one's life. I have plenty of su



memories with my friends and classmates and lecturers which I fondly recall. Fun and games aside, I cherish the three years at DVS as it carved out the future engineer in me - thanks to the lecturers like Sunanda B N and Umesh S D, not only for their classroom teaching but also preparing me for the future with their encouraging words, motivation and guidance. By the final year of my graduation, I was not studying just for grades but for true love of the subject. I chose to pursue a Master's in Electronics further to quench my thirst for the subject. The foundation of the subject laid during my DVS days helped me-excel in my masters and soon enter the practical world of being an Embedded Hardware Engineer and applying all that was learnt in my day to day working environment.

Soon after I realized, my learning at college was only a starting point and there is a huge ocean of knowledge to gain. I continued to be a student- only just building on the strong foundation laid during my DVS days. After 12 years of graduation I studied to achieve a Master's in Business Administration (MBA) from Cranfield School of Management, in the UK. To be a student again after many years brought back some fond memories from DVS. Again it was the passion to learn business skills after having spent significant number of years in the techinical field which led me to pursue an MBA Degree. This opened up several options to carve my career. Equipped with the business acumen and technical foundation I harped on the path to be an Entrepreneur and established my own IP and services company offering skilled engineers to clients in India, Europe and USA. Learning continued - just a different kind ! Learning from experiences, people clients, employees has been an exciting and enriching experience. Despite the challenges and hurdles faced during this journey from the Campus to Corporate world, the attitude to learn continually has helped me to excel in being a people and technical leader in various organizations that I have worked in.

I can relate to the students relief of clearing exams and graduating. However, one must continue to be a learner even after having gained academic degrees. The mantra to success may well be hidden in the famous words by Ramakrishna Paramahamsa who said : "As long as I live, so long do I learn". For those who are studying and starting the journey; your learning journey has just begun and I can proudly say it will be a strong foundation to your career ahead!

## Dr.D S.Seetharam a,A lum nusofDVS –
# Star of the Month in Louisiana, Monroe, USA

**- *Prof. D.S. Manjunat***
Alumnus of DV

D.S. Seetharama who obtained B.Sc. Degree in 1984 from D.V.S. College, Shivamog was nominated as the Star of the Month during September 2009 by the University of Louisia at Monroe, USA. This is a feather in the cap of not only D.S. Seetharama but also D.V.S. Colleg Hailing from a tiny village called Nagarakodige in Hosanagara taluk, D.S. Seetharama joine D.V.S. College in the academic year 1981-82 for his B.Sc. (PCM). Throughout his educati career he maintained distinction and even in his M.Sc. Degree in Physics at Mysore Universi he secured third rank. Having served in Bapuji Engineering College for a brief period he join Indian Institute of Science, Bangalore and obtained Ph.D. in Molecular Bio-Physics. Though h was an ardent student of Physics, academic pressures and demands pushed him to chemistry.

D.S. Seetharama was selected as the post-doctoral scholar in the field of pharmaceutic chemistry, University of Kansas at Lawrence, USA. From there, he went to National Universi of Singapore and served as Assistant Professor in the Department of Chemistry. At present D.S Seetharama is serving as Associate Professor of Medicinal Chemistry, University of Louisia at Monroe, USA. Prof. D.S. Seetharama has all the qualities necessary for research and academ excellence. Singleness of purpose, commitment, high level concentration and diligence are h inherent qualities which made him what he is now. As a result research publications, patent state funding and collaboration with industry are at his fingertips. Of late, D.S. Seetharama h earned over 1.5 million dollars in grants and he has obtained funding from the Louisiana Boa of Regents to establish a protein and peptide analysis facility at University of Louisiana.

D S.Seetharam a's research seeks answ ers to rheum atoid arthritis (R A ). It is a dise wherein one's body is not able to distinguish betw een its healthy tissues and harm ful substance Further, he also worked in a pilot project to discover molecules that may be useful for thera of breast cancer. D.S. Seetharama is cautiously optimistic about the work he does today whi might eventually make a difference in the life of a cancer sufferer. During the past 16 years University of Louisiana, he has established research in the area of drug design discovery name protein-protein interaction and drug design. This will be a promising approach for developi therapeutic agents for auto-immune diseases, inflammations and cancer. D.S. Seetharama h published more than 70 papers in international journals in the research area of drug design an discovery. Teaching is another passion for D.S. Seetharama. Wherever he went to deliver lectur



in American universities, he received good feedback which culminated in obtaining 'Teaching Excellence Aw ard' from college of pharm acy. Prof. D S. Seetharam a's book 'Drug Design and Discovery : M ethods and Protocols' is proved to be the reference guide for research in the pharmaceutical field. Graduate students advised by Dr. D.S. Seetharama obtained local, regional and national conference awards for the poster presentation.

Prof. D.S. Seetharama has many miles to go. Let us hope that his research in the area of breast cancer will yield result so that a large section of women in the world who suffer from breast cancer will have a cure and live longer.

Prof. D.S. Seetharama is not the only science graduate from D.V.S. College, Shivamogga, who has academic accomplishments. There are innumerable science graduates who are working as scientists in the prestigious universities of the world. Glory be to D.V.S. College for creating such a big scientific community.

---

## ಧೂಳು

ಯಾವ ಮುದ್ದಾದ ತಾಯಿಯಾ ಮಗಳು ಈ ಧೂಳು
ಯಾವ ಮಣ್ಣಿನ ಮನೆಯಿಂದ ಜನಿಸಿದಳು ಈ ಧೂಳು
ಯಾವ ಬೀದಿಯ ಬದೆಯಿಂದ ಬರುವಳು ಈ ಧೂಳು
ಗಾಳಿ ಕುದುರೆಯನೇರಿ ಪ್ರತಿ ಕ್ಷಣವೂ ನಿನ್ನಯ ಸವಾರಿ
ಕಾಲುಗಳೇ ಇರದೆ ವೇಳೆಗಳೇ ಲೆಕ್ಕಿಸದೆ ನಿನ್ನಯ ತಯಾರಿ
ಸೋಲೇ ಇಲ್ಲದ ಕೋಮಲಾಂಗಿಯೆ ನಿನಗೆ ನೀನೇ ಬರೋಬರಿ
ಶಾಂತವನಗಳ ತಲೆ ಸವರುತ ತಿಂಗಳ ಬೆಳಕಿನಂದದಿ ಉದರುತ
ಸುಂಟರಗಾಳಿಯ ಸೊಂಟ ತಿರುವುತ ನೇಸರನ ಬೆಳಕಿನಂದದಿ ಕೊರೆಯುತ
ಸಹಸ್ರ ಬಾಗಿಲುಗಳಿಂದ ಕೋಟಿ ಕಿಟಕಿಗಳಿಂದ ಗಾಳಿಯಂದದಿ ನುಸುಳುತ
ಕಾವ್ಯ-ಕಾದಂಬರಿ-ಪುಸ್ತಕ-ಬೀರುಗಳ ಮೇಲೆ ನಿನ್ನಯ ಅಲೆ
ಕಾಜು-ಮೇಜು-ಕಂಪ್ಯೂಟರ್-ಕಡತಗಳ ಮೇಲೆ ನಿನ್ನಯ ಕಲೆ
ಕಟ್ಟೆ-ಮೆಟ್ಟಿಲು-ಫೋನು- ಫ್ಯಾನುಗಳ ಮೇಲೆ ನಿನ್ನಯ ಬಲೆ
ಇರೇಳು ಲೋಕದತ್ತತ್ತ ನಿನ್ನಯ ಶ್ರೀ ಪಯಣ
ಆಕಾಶದಿಂದತ್ತತ್ತ ನಿನ್ನಯ ಶ್ರೀ ಮುಕುಟ
ಪಾತಾಳದಿಂದತ್ತತ್ತ ನಿನ್ನಯ ಶ್ರೀ ಚರಣ

**ಎಸ್.ಎಸ್. ಬಜಂತ್ರಿ,** ಎಂ.ಎ., ಎಂ.ಫಿಲ್.,
ಗ್ರಂಥಾಲಯ ವಿಭಾಗ

# SOFT SKILLS

**B. N. Sunanda,** Conve
Placement & Career Guidance C



Soft skills are not replacement for hard skills. Technical and job related skills are a must. But only hard skills are not sufficient for getting a job or progressing in a career.

Soft skills are nontechnical skills which play important role in the success in life particularly in one's profession. Today we have a very competitive world. Marks is not the only criteria for getting a job and progress is a career. In fact soft skills complement the hard skills. Soft skills are as important as hard skills irrespective of industry or job type.

**Following are some of the soft skills :**

* **Communication Skills :** The ability to communicate effectively is very importan for any type of job, it may be teaching job or a job in an IT company. In fact communication skills could be the deciding factor in determining whether or not you a selected or promoted.

Following are some of the thing one should aware of when communicating wi others.

* Making good eye contact.
* Simply don't talk for the sake of talking, have a point.
* Have command on language.
* Body language & posture is very important
* Facial expressions are also responsibile for good communication.

* **Team Working :** The success of an organization depends on its team. Therefor you have to learn how to work in a team.

* It is important to listen to other's ideas
* It is important to ask questions, interact and discuss
* Respect other's ideas.
* Co-operate the team in all aspetcts.
* Develop leadership qualities.



Time Management : There is a famous saying that 'A busy man always finds a time'. These people manage the time scientifically. All of us have only 24 hours. Therefore, managing time effectively to manage both personal and professional life is very important. When a person says that he has no time, what he really means is that he is unable to manage his time properly. The time management is self management.

Time once lost cann't be regained or replaced. So, proper planning is necessary for good management of time. Don't postpone the tasks to be done unnecessarily. Prioritize your list of "things to do". Identify the most important task you need to do and do it first. Use mobile phone less which is the most important interruptor for doing a task.

* To realize the value of ONE YEAR Ask a student who failed and lost one year

* To realize the value of ONE MONTH Ask a mother who gave birth to a premature baby

* To realize the value of ONE WEEK Ask the editor of a weekly magazine

* To realize the value of ONE HOUR Ask the lovers who are waiting to meet

* To realize the value of ONE MINUTE Ask a person who missed a train.

* To realize the value of ONE SECOND Ask a person who just avoided an accident

* To realize the value of ONE MILLI SECOND Ask the person who won a gold medal in Olympics.

* **Positive Attitude :**

"Attitude can be your best friend or worst enemy". Human beings are not born with certain attitudes. They are acquired and learned by individuals from the situation they face in their life.

If there is a glass of water which is half filled, a person with positive attitude looks it as half filled but a person with negative attitude looks at it as half empty.

Positive attitude can be developed by the following ways.

* Positive thinking
* Constructive thinking
* Creative thinking
* By being optimistic

* Try and Try to achieve your goals and never give up.

* Believe in yourself and your abilities

* Don't be disheartened by failures and problems. Look at these as blessings in disguise.

* Have confidence.

* Make use of opportunities.

Having positive attitude helps to achieve your goal and success faster and more easily.

On the other hand, a negative attitude may kill you. It makes your life miserable. It will cause over stress which leads to depression and physical diseases. Therefore choose to be happy. Look at bright side of life, be optimistic, read inspiring stories, inspiring quotes, learn concentration and master your thoughts. Dr. A.P.J. Abdul Kalam has said that read failure stories rather than the success stories.

*** Stress Management :** Stress and work go hand in hand. Every one in every job experiences stress. The success in one's professional life depends on the ability to handle work pressure.

You must develop strong mental ability to handle stress. Then the outcome is positive. A certain amount of stress is healthy and beneficial. But as the stress level increases it may affect the performance. In fact negative attitude causes stress. Poor health and less physical activity may cause stress. Have good friends so that you can share your worries with them. Have good hobbies which gives relaxation. Practice yoga which reduces stress to a greater extent.

There are many other soft skills like strong analytical skills, reasoning skills, negotiation skills etc.,

**SWOT Analysis :**

SWOT stands for Strengths, Weaknesses, Opportunities and Threats.

SWOT analysis helps in analyzing your strengths, weaknesses, opportunities and threats you face. This helps to build your strength, overcome your weaknesses. By this you can eliminate threats and make use of opportunities available.

If possible, take special training to develop soft skills. Develop soft skills along with hard skills and become an achiever.



# ಗಣಿತ ಶಾಸ್ತ್ರ – ಒಂದು ಪಕ್ಷಿನೋಟ

**ಶ್ರೀನಿವಾಸನ್ ಹೆಚ್.**
ನಿವೃತ್ತ ಪ್ರಾಧ್ಯಾಪಕರು
ಗಣಿತ ಶಾಸ್ತ್ರ ವಿಭಾಗ, ಡಿ.ವಿ.ಎಸ್., ಕಾಲೇಜು ಶಿವಮೊಗ್ಗ.



ಗಣಿತಶಾಸ್ತ್ರ ಎಂದರೇನು ? ಇದಕ್ಕೆ ನಿಖರವಾದ ವಿವರಣೆ ನೀಡಲಾಗುವುದಿಲ್ಲ. ಸಾಮಾನ್ಯ ಅರ್ಥದಲ್ಲಿ ಗಣಕ ಲೆಕ್ಕಾಚಾರ ಎಂದು ಪರಿಗಣಿಸಬಹುದು. ಅಡುಗೆ ತಯಾರಿಸುವಾಗ ಉಪ್ಪು ಖಾರ ಹುಳಿ ಮುಂತಾದ ಸಾಂಬಾರ ಪದಾರ್ಥಗಳನ್ನು ಒಂದು ನಿರ್ಧಿಷ್ಟವಾದ ಪ್ರಮಾಣದಲ್ಲಿ ಹಾಕುತ್ತೇವೆ. ಬಟ್ಟೆ ಹೊಲಿಸುವಾಗ ಅಳತೆ ತೆಗೆದುಕೊಳ್ಳುತ್ತಾರೆ. ಎಲ್ಲಾ ವಿಷಯಗಳಲ್ಲೂ ಪ್ರಮಾಣ ಅಳತೆ ಹೆಚ್ಚು ಕಡಿಮೆ ಮುಂತಾದ ಗಣಿತದ ಅಂಶಗಳಿರುವುದನ್ನು ಕಾಣಬಹುದು. ಜಗತ್ತಿನ ಎಲ್ಲಾ ಚಟುವಟಿಕೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಗಣಿತದ ತತ್ವಗಳು ಅಡಗಿವೆ.

ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ಇವು ಗಣಿತದ ಮೂಲ ಕ್ರಿಯೆಗಳು. ಯಾವುದಾದರೂ ಒಂದು ವಿಷಯವನ್ನು, ಗಣಿತದ ಮೂಲಕ್ರಿಯೆಗಳು, ವಿವರಣೆಗಳು ಹಾಗೂ x, y ಮುಂತಾದ ಬೀಜಾಕ್ಷರಗಳ ಸಹಾಯದಿಂದ ಸರಳವಾಗಿ, ಸಂಕ್ಷಿಪ್ತವಾಗಿ ಹಾಗೂ ನಿಖರವಾಗಿ ನಿರೂಪಿಸಬಹುದು. ಇದು ಗಣಿತಶಾಸ್ತ್ರದ ಮೂಲತತ್ವ ಮಹತ್ವ, ಇದಲ್ಲದೆ, ಸಮೀಕರಣಗಳನ್ನೂ ರಚಿಸಿ, ಬಿಡಿಸಿ ಉತ್ತರವನ್ನು ಕಂಡುಹಿಡಿಯಬಹುದು.

ಸಕ್ಕರೆಯ ಬೆಲೆ ಬೆಲ್ಲದ ಬೆಲೆಯ ಎರಡಷ್ಟಿದೆ ಎಂದಿಟ್ಟುಕೊಳ್ಳೋಣ. ಒಂದು ಕೆ.ಜಿ. ಸಕ್ಕರೆ ಮತ್ತು ಒಂದು ಕೆ.ಜಿ. ಬೆಲ್ಲದ ಬೆಲೆ ರೂ. 60 ಆಗಿರಲಿ. ಹಾಗಾದರೆ ಸಕ್ಕರೆ ಮತ್ತು ಬೆಲ್ಲದ ಬೆಲೆ ಎಷ್ಟು ?

ಸಕ್ಕರೆಯ ಬೆಲೆ x ಎಂದೂ, ಬೆಲ್ಲದ ಬೆಲೆ y ಎಂದೂ ಇಟ್ಟುಕೊಳ್ಳೋಣ. ಆಗ $x=2y$ ಹಾಗೂ $x+y=60$ ಎಂದಾಗುವುದು. ಸಮೀಕರಣಗಳನ್ನು ಬಿಡಿಸಿದರೆ $y=20, x = 40$ ಆಗುವುದು. ಅಂದರೆ ಒಂದು ಕೆ.ಜಿ. ಸಕ್ಕರೆಯ ಬೆಲೆ ರೂ. 40, ಬೆಲ್ಲದ ಬೆಲೆ ರೂ. 20 ಎಂದಾಗುವುದು.

ಒಂದು ಸರಳವಾದ ವ್ಯಾಖ್ಯೆಯ (definition) ಆಧಾರದ ಮೇಲೆ, ಅಧ್ಯಾಯಗಳು ಹಾಗೂ ಸಮಗ್ರವಾಗಿ ಒಂದು ವಿಷಯದ ಅಭಿವೃದ್ಧಿಯಾಗಿರುತ್ತದೆ. ಒಂದು ಸಮಕೋನ ತ್ರಿಭುಜ ABC ಯ ಬಾಹುಗಳ ಅನುಪಾತ $\frac{AB}{AC}, \frac{BC}{AC}$ ಯನ್ನು ವ್ಯಾಖ್ಯಾನಿಸಿ ತ್ರಿಕೋನ ಮಿತಿಯನ್ನು ಅಭಿವೃದ್ಧಿಪಡಿಸಲಾಗಿದೆ.

ಸೂತ್ರಗಳು ಪ್ರಮೇಯಗಳು ಪರಮೇಯಗಳ ಸಾಧನೆ, ಗಣಿತಶಾಸ್ತ್ರದಲ್ಲಿ ನಾವು ಕಲಿಯುವ ಸಾಮಾನ್ಯ ಸಂಗತಿಗಳು, ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬಿಡಿಸಲು ಪ್ರಯತ್ನಿಸುತ್ತೇವೆ.

ನಾಗರಿಕತೆ ಬೆಳೆದಂತೆ, ಗಣಿತದ ಶಾಸ್ತ್ರೀಯ ಅಧ್ಯಯನ ಪ್ರಾರಂಭವಾಗಿ ಹೊಸ ಹೊಸ ಶಾಖೆಗಳು ವಿಶಾಲವಾಗಿ ಬೆಳೆಯುತ್ತಾ ಬಂದವು. ರೇಖಾಗಣಿತ ಬೀಜಗಣಿತ, ಕಲನ ಶಾಸ್ತ್ರ, ಗಣಸಿದ್ಧಾಂತ ಮೊದಲಾದ ಹೊಸ ಹೊಸ ವಿಭಾಗಗಳು ಬೆಳಕಿಗೆ ಬಂದವು. ಅಧ್ಯಯನ ಸಂಶೋಧನೆಗಳು ಮುಂದುವರೆದಂತೆ, ಉನ್ನತ ಮಟ್ಟದಲ್ಲಿ ಗಣಿತಶಾಸ್ತ್ರದ ವಿವಿಧ ಶಾಖೆಗಳು ಒಂದರೊಳಗೊಂದು ಸೇರಿಕೊಂಡಿರುವುದನ್ನು ಕಾಣಬಹುದು.

ಸಂಖ್ಯೆಗಳು ಗಣಿತಶಾಸ್ತ್ರದ ಜೀವಾಳ. ಸರಿಸಂಖ್ಯೆ ಬೆಸಸಂಖ್ಯೆ, ಮುಂತಾದ ಅನೇಕ ರೀತಿಯ ಸಂಖ್ಯೆಗಳನ್ನು ಗುರುತಿಸಲಾಗಿದೆ. ಅತಿ ಚಿಕ್ಕ ಸಂಖ್ಯೆ, ಅತಿ ದೊಡ್ಡ ಸಂಖ್ಯೆ ಎಂದೇನೂ ಇಲ್ಲ. ಸಂಖ್ಯೆಗಳ ಸಂಖ್ಯೆ ಅನಂತವಾಗಿದೆ. ನಮ್ಮ ಫೋನ್‌ನಿಂದ ಮತ್ತೊಬ್ಬರಿಗೆ ಫೋನ್ ಮಾಡಿ ಸುಖ ದುಃಖ ಮಾತನಾಡುತ್ತೇವೆ. ಫೋನ್ ಮೂಲಕವೇ ವ್ಯಾಪಾರ ವಹಿವಾಟು, ಹಣಕಾಸಿನ ವ್ಯವಹಾರಗಳೂ ನಡೆಯುತ್ತವೆ. ಇಲ್ಲಿ ಮನುಷ್ಯರಿಗಿಂತ, ಸಂಖ್ಯೆಗಳು (ಫೋನ್ ನಂಬರ್‌ಗಳು) ಪ್ರಧಾನವಾಗಿರುತ್ತದೆ. ಸಂಖ್ಯೆಗಳ ಮಹತ್ವವನ್ನು ತಿಳಿದುಕೊಳ್ಳಲು ಇದೊಂದು ಸಣ್ಣ ಉದಾಹರಣೆ.

ಗಣಿತಶಾಸ್ತ್ರ ಕಷ್ಟ ಹಾಗೂ ನೀರಸವಾದ ವಿಷಯ ಎನ್ನುವ ಅಭಿಪ್ರಾಯವಿದೆ. ಗಣಿತ ಒಂದು ರೀತಿಯಲ್ಲಿ

ನಿಗೂಢವಾಗಿರುವುದು, ಬೋಧನೆಯ ಕ್ರಮ ಮತ್ತು ಸರಳವಾದ ಉದಾಹರಣೆಗಳ ಕೊರತೆ, ಈ ವಿಷಯದಲ್ಲಿ ಸಾಮಾ ಅವಜ್ಞೆ, ಅನಾದರಕ್ಕೆ ಕಾರಣವಾಗಿರಬಹುದು. ಕೇವಲ ಬೀಜಾಕ್ಷರಗಳನ್ನೆ ಬಳಸುವುದಕ್ಕಿಂತ, A=4,B=6 ಎಂದಿಟ್ಟುಕೊಂ $(A+B)^2=A^2+2AB+B^2$ ಸೂತ್ರ ಮನದಟ್ಟಾಗುವುದು.

ಸೈಕಲ್ಲಿನ ಪೆಡಲ್ ತಿರುಗಿಸಿದರೆ, ಫ್ರಿವ್ಹೀಲ್ ತಿರುಗುವುದು. ಇದರ ಪರಿಣಾಮವಾಗಿ ಸೈಕಲ್ ಮುಂದೆ ಚಲಿಸು ಒಂದಕ್ಕೊಂದು ಸಂಬಂಧವಿರುವ ಈ ಚಲನೆಗಳಲ್ಲಿ ಮಲ್ಟಿಪಲ್ ಇಂಟೆಗ್ರಲ್ಸ್‌ನ ಅಂಶ ಇರುವುದನ್ನು ಗಮನಿಸಬಹು

ಗಣಿತಶಾಸ್ತ್ರದಿಂದ ಏನು ಪ್ರಯೋಜನ ಎಂದು ಕೇಳುವವರೂ ಇದ್ದಾರೆ. ಗಣಿತ ಶಾಸ್ತ್ರದ ಪ್ರಾಧ್ಯಾಪಕ, ಗುಲ್ಬ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದ ಡಾ. ರುದ್ರಪ್ಪನವರು, ಉಪ್ಪಿನ ದ್ರಾವಣದಿಂದ, ಕಡಿಮೆ ಖರ್ಚಿ ಸೌರಶಕ್ತಿಯನ್ನು ಉತ್ಪಾದನೆ ಮಾಡಬಹುದೆಂದು ಪ್ರತಿಪಾದಿಸಿದರು. ಇದು ಉಪ್ಪಿನ ದ್ರಾವಣದ ಸಾಂದ್ರತೆ, ಆಳ, ಅ ಸೂರ್ಯನ ದಿಕ್ಕು ಮುಂತಾದ ಅಂಶಗಳನ್ನು ಅವಲಂಭಿಸಿರುತ್ತದೆ. ಇದರಲ್ಲಿ derivatives of functions of seve variables ಅಡಕವಾಗಿದೆ. ಮಲೇಶಿಯಾ ಮುಂತಾದ ದೇಶಗಳಲ್ಲಿ ಇದನ್ನು ಅಳವಡಿಸಲಾಗಿದೆ. ಆ ದೇಶದ ಜ ಜೀವನ ಶೈಲಿ ಬದಲಾಯಿತು. ಗಣಿತಶಾಸ್ತ್ರದ ನೇರವಾದ ಪ್ರಯೋಜನಕ್ಕೆ ಇದೊಂದು ಉದಾಹರಣೆ.

ಗಣಿತಶಾಸ್ತ್ರದ ಮಹತ್ವವನ್ನು ಮನಗಂಡು, ಅಮೆರಿಕಾ ಹಾಗೂ ಜಗತ್ತಿನ ಅನೇಕ ದೇಶಗಳ ಸರ್ಕಾರಗ ಗಣಿತಶಾಸ್ತ್ರದ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಜರ್ಮನ್ ಸರ್ಕಾರದ ಫೀಲ್ಡ್ ಮೆ ನಾರ್ವೆ ದೇಶದ ಅಬೆಲ್ ಪ್ರಶಸ್ತಿ ಮುಂತಾದವು, ಗಣಿತಶಾಸ್ತ್ರದಲ್ಲಿ ವಿಶೇಷವಾದ ಸಾಧನೆ ಮಾಡಿದವರಿಗೆ ನೀಡಲಾ ಅತ್ಯುನ್ನತ ಪ್ರಶಸ್ತಿ ಪುರಸ್ಕಾರಗಳು. ಹಿಂದಿನ ವರ್ಷದಲ್ಲಿ ಮುಂಬೈ ಟಾಟಾ ಸಂಶೋಧನಾಲಯದ, ಭಟ್ನಾಗರ್ ಪ್ರ ಪುರಸ್ಕೃತ ಗಣಿತದ ಪ್ರೊಫೆಸರ್ ಎಂ.ಎಸ್. ರಘುನಾಥನ್ ಅವರು, ಅಬೆಲ್ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿ

ಭಾಸ್ಕರ, ಆರ್ಯಭಟ, ಆಯ್ಲರ್, ರೀಮಾನ್ ಗಾಸ್ ಟೇಲರ್, ಆಂಡ್ರ್ಯೂವೈಲ್ಸ್, ಶ್ರೀನಿವಾಸ ರಾಮಾನುಜ ಹರಿಶ್ಚಂದ್ರ ಮೊದಲಾದವರನ್ನು ಜಗತ್ತಿನ ಅತ್ಯಂತ ಶ್ರೇಷ್ಠ ಗಣಿತಶಾಸ್ತ್ರಜ್ಞರೆಂದು ಪರಿಗಣಿಸಲಾಗಿದೆ.

ಕಲ್ಲಂಗಡಿ ಹಣ್ಣಿನ ಸಿಪ್ಪೆ ದಪ್ಪವಾಗಿರುತ್ತದೆ. ಒಳಗಿನ ತಿರುಳು ಮಧುರವಾಗಿರುತ್ತದೆ. ಹಾಗೆಯೆ, ಗಣಿತ ಶ ಜೋಗದ ಜಲಪಾತದಂತೆ ಶಕ್ತಿಯ ಆಗರವಾಗಿದೆ. ಸುಂದರವಾಗಿಯೂ ಇದೆ.

## ಲೇಖನಿ

ತನ್ನ ರಕ್ತವ ಸುರಿದು
ತನ್ನ ದೇಹವ ಬಸಿದು
ಹಗಲು ರಾತ್ರಿ ದುಡಿದು
ಬೆಳಸುತ್ತಿರುವನು ತನ್ನವರನ್ನು
ತನ್ನಲ್ಲಿ ಜಾತಿ ಭೇದವ ಮಾಡದೆ
ತನ್ನಲ್ಲಿ ಎಲ್ಲರ ಸಮಾನತೆ ಕಂಡು
ಎಲ್ಲರ ಕೈಯಲ್ಲಿ ಕುಣಿಯುವನು
ವಿದ್ಯಾರ್ಥಿ ಜೀವನ ಬೆಳಗಿಸುವನು
ಯುದ್ಧ ಎಂಬ ಪರೀಕ್ಷೆಯಲ್ಲಿ
ತನ್ನ ರಕ್ತವ ಸುರಿಸುವ
ವಿದ್ಯಾರ್ಥಿ ಜ್ಞಾನ ಹರಿಸುವ
ಎಲ್ಲರ ಜೀವನ ಬೆಳಗಿಸುವನು
ಓ ಲೇಖನಿ ನೀನು ದೇವನೆ
ನೀ ಹಂಚುವೆ ನಮ್ಮೆಲ್ಲರ ಭಾವನೆ



ನಿಖಿಲ್ ಡಿ.ಕೆ.
ಪ್ರಥಮ ಬಿ.ಎ. (ಎಚ್.ಇ.ಇ.)



# ವಿಶ್ವ ಆರ್ಥಿಕ ಸಂಘಟನೆ ಮತ್ತು ಭಾರತದ ಕೃಷಿ

ಡಾ॥ ಎ. ಟಿ. ಪದ್ಮೇಗೌಡ
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ



ದ್ವಿತೀಯ ಮಹಾಯುದ್ಧದ ನಂತರ ವಿಶ್ವ ವ್ಯಾಪಾರವನ್ನು ವೃದ್ಧಿಸುವ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳಲ್ಲಿ ಗ್ಯಾಟ್‌ನ ಸ್ಥಾಪನೆ ಒಂದು ಮಹತ್ವದ ಅಂಶವಾಗಿದೆ. ಭಾರತ ಗ್ಯಾಟ್‌ನ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿತ್ತು. ಗ್ಯಾಟ್ ಅಡಿಯಲ್ಲಿ ಏಳು ಸುತ್ತಿನ ಮಾತುಕತೆಗಳಾದವು. ಎಂಟನೆ ಸುತ್ತಿನ ಮಾತುಕತೆಗಳಲ್ಲಿ ಹೊಸ ವಿಷಯಗಳಾದ ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ವ್ಯಾಪಾರ, ಬಂಡವಾಳ ಹೂಡಿಕೆ ಕ್ರಮಗಳು, ಸೇವೆಗಳ ವ್ಯಾಪಾರ ಮುಂತಾದವುಗಳನ್ನು ಗ್ಯಾಟ್ ಒಪ್ಪಂದದಡಿಯಲ್ಲಿ ತರುವ ಪ್ರಯತ್ನ ನಡೆಯಿತು. ಹೊಸ ವಿಷಯಗಳ ಪ್ರವೇಶದಿಂದಾಗಿ ಎಂಟನೆ ಸುತ್ತಿನ ಮಾತುಕತೆಗಳು ಸದಸ್ಯ ರಾಷ್ಟ್ರಗಳೆಲ್ಲವುಗಳ ಒಪ್ಪಿಗೆ ಪಡೆಯದಿದ್ದಾಗ ಗ್ಯಾಟ್‌ನ ಉತ್ತರಾಧಿಕಾರಿಯಾಗಿ ವಿಶ್ವ ಆರ್ಥಿಕ ಸಂಘಟನೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಪ್ರಾರಂಭಿಸಲು ಏಪ್ರಿಲ್ 15, 1994 ರಂದು ಪ್ರಮುಖ ರಾಷ್ಟ್ರಗಳು ಒಪ್ಪಿದವು. ಹೀಗಾಗಿ ವಿಶ್ವ ಆರ್ಥಿಕ ಸಂಘಟನೆ ಜನವರಿ 1, 1995 ರಿಂದ ಅಸ್ತಿತ್ವಕ್ಕೆ ಬಂದಿದೆ. ಸದಸ್ಯ ರಾಷ್ಟ್ರಗಳಲ್ಲಿ ವ್ಯಾಪಾರವನ್ನು ಸರಳೀಕರಿಸುವ, ಸೂಕ್ತ ಪೈಪೋಟಿಯ ಸ್ಥಿತಿಯಲ್ಲಿ ಮುಕ್ತ ವ್ಯಾಪಾರ ಸ್ಥಿತಿಯನ್ನು ನಿರ್ಮಿಸುವ ಉದ್ದೇಶವನ್ನು ವಿಶ್ವ ಆರ್ಥಿಕ ಸಂಘಟನೆ ಹೊಂದಿದೆ. ವಿವಿಧ ಆರ್ಥಿಕತೆಗಳು ಉತ್ಪಾದಿಸುವ ಕೃಷಿ ಸರಕುಗಳನ್ನೊಳಗೊಂಡಂತೆ ಎಲ್ಲಾ ಸರಕುಗಳನ್ನು ಜಾಗತೀಕರಣಕ್ಕೊಳಪಡಿಸುವುದು ಇವರ ಉದ್ದೇಶವಾಗಿದೆ. ಭಾರತ WTO ನ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿದ್ದು ಇದರಿಂದ ಅನುಕೂಲ ಮತ್ತು ಅನಾನುಕೂಲಗಳೆರಡನ್ನೂ ಪಡೆಯಲಿದೆ.

ಈ ಪ್ರಬಂಧವನ್ನು ವಿಶ್ವ ವ್ಯಾಪಾರ ಸಂಘಟನೆಯು ಭಾರತದ ಕೃಷಿ ಕ್ಷೇತ್ರಕ್ಕೆ ಎಸೆದಿರುವ ಸವಾಲುಗಳಾವುವು ? ಹಾಗೂ ಭಾರತ ಈ ಸವಾಲುಗಳನ್ನು ಹೇಗೆ ಎದುರಿಸಿ ತನ್ನ ಕೃಷಿ ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಳ್ಳಬಹುದು ಎನ್ನುವುದನ್ನು ವಿಶ್ಲೇಷಿಸುವುದಕ್ಕೆ ಮಿತಗೊಳಿಸಿದ್ದೇನೆ.

ಉರುಗ್ವೆ ಸುತ್ತಿನ ಮಾತುಕತೆಗಳು ಪ್ರಾರಂಭವಾದಾಗಿನಿಂದಲೂ ಒಪ್ಪಂದದ ಪರವಾಗಿ ಮತ್ತು ವಿರುದ್ಧವಾಗಿ ವಾದ ವಿವಾದಗಳು ಪ್ರಾರಂಭವಾಗಿದ್ದವು. WTO ಸ್ಥಾಪನೆಯಾಗುವಾಗ ಒಂದು ಗುಂಪು, ಪ್ರಬಲವಾಗಿ ಅದರ ಪರವಾಗಿ ವಾದಗಳನ್ನು ಮಂಡಿಸುತ್ತಿದ್ದರೆ, ಇನ್ನೊಂದು ಗುಂಪು ಅಷ್ಟೇ ಪ್ರಬಲವಾಗಿ WTO ವಿರುದ್ಧವಾಗಿ ವಾದಗಳನ್ನು ಮಂಡಿಸುತ್ತಿತ್ತು.

WTO ಪರವಾಗಿ ವಾದಿಸುವ ಗುಂಪು ಭಾರತವನ್ನು ಜಾಗತಿಕ ಮಾರುಕಟ್ಟೆಗೆ ಮುಕ್ತಗೊಳಿಸುವುದರಿಂಧ ಭಾರತಕ್ಕೆ ಅನುಕೂಲಗಳಿವೆ ಎಂದು ವಾದಿಸಲಾರಂಭಿಸಿದರು. ಅವರ ಪ್ರಕಾರ ಭಾರತ ಕೃಷಿ ಸರಕುಗಳ ಉತ್ಪಾದನೆಯಲ್ಲಿ ಇತರ ರಾಷ್ಟ್ರಗಳಿಗೆ ಹೋಲಿಸಿದಂತೆ ಸಾಪೇಕ್ಷ ಅನುಕೂಲತೆಯನ್ನು ಹೊಂದಿದೆ. ಇದರಿಂದ ಭಾರತ ಕೃಷಿ ಕ್ಷೇತ್ರದಲ್ಲಿ ಪ್ರಾವೀಣ್ಯತೆ ಪಡೆದು ಕೃಷಿ ವಸ್ತುಗಳನ್ನು ಹೆಚ್ಚು ಹೆಚ್ಚು ರಫ್ತು ಮಾಡುವುದು ಸಾಧ್ಯ ಎನ್ನುವುದು ಅವರ ಅಭಿಮತ. ಭಾರತ ಕೃಷಿ ಸರಕುಗಳ ಉತ್ಪಾದನೆಯಲ್ಲಿ ಸಾಪೇಕ್ಷ ಅನುಕೂಲತೆಯನ್ನು ಹೊಂದಿದೆ ಎಂದ ಮಾತ್ರಕ್ಕೆ ಅದು ಎಲ್ಲಾ ರೀತಿಯ ಕೃಷಿ ಸರಕುಗಳನ್ನು ಉತ್ಪಾದಿಸಿ ರಫ್ತು ಮಾಡಬೇಕೆಂಬ ಅರ್ಥವೇನಲ್ಲ. ಒಂದು ವೇಳೆ ಅಂತರರಾಷ್ಟ್ರೀಯ ವ್ಯಾಪಾರ ಏರ್ಪಟ್ಟರೆ ಯಾವ ಯಾವ ವಸ್ತುಗಳ ಉತ್ಪಾದನೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಬೇಕು ಎನ್ನುವುದನ್ನು ಸಾಪೇಕ್ಷ ಅನುಕೂಲತೆ ಸೂಚಿಸುತ್ತದೆ. ಸಾಪೇಕ್ಷ ವೆಚ್ಚ ಅನುಕೂಲತೆಯು ಒಂದು ರಾಷ್ಟ್ರ ಎಷ್ಟು ಸರಕುಗಳನ್ನು ರಫ್ತು ಮಾಡಬೇಕು ಮತ್ತು ಎಷ್ಟು ಸರಕುಗಳನ್ನು ಆಮದು ಮಾಡಿಕೊಳ್ಳಬೇಕು ಎನ್ನುವುದನ್ನು ತಿಳಿಸುವುದಿಲ್ಲ.

ಒಂದು ದೇಶ ಎಷ್ಟು ಸರಕುಗಳನ್ನು ರಫ್ತು ಮಾಡಬೇಕು ಎನ್ನುವುದು ಮುಖ್ಯವಾಗಿ ಅದು ತನ್ನ ದೇಶಿಯ ಅಗತ್ಯತೆಯನ್ನು ಪೂರೈಸಿದ ನಂತರ ಎಷ್ಟು ಉಳಿಕೆಯಾಗಿದೆ ಎನ್ನುವುದನ್ನು ಅವಲಂಬಿಸಿರುತ್ತದೆ. ಅದೇ ರೀತಿ ಒಂದು ದೇಶ ಒಂದು ವಸ್ತುವಿನ ಉತ್ಪಾದನೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿದಾಗ್ಯೂ ಸಂಪನ್ಮೂಲಗಳ ವಿರಳತೆಯಿಂದ ದೇಶೀಯ

ಅಗತ್ಯತೆಯನ್ನು ಪೂರೈಸದೇ ಆಮದು ಮಾಡಿಕೊಳ್ಳಲೂಬಹುದು. ಸಾಪೇಕ್ಷ ವೆಚ್ಚ ಅನುಕೂಲತೆಯಿಂದಾಗಿ ಭಾರತಕ್ಕೆ ಕೆ
ಕೃಷಿ ಸರಕುಗಳನ್ನು ವಿದೇಶಗಳಿಗೆ ರಫ್ತು ಮಾಡಲು ವಿಪುಲ ಸಾಧ್ಯತೆಗಳಿವೆ.

ಇನ್ನೊಂದು ಗುಂಪು WTO ವಿರುದ್ಧವಾಗಿ ವಾದಿಸುತ್ತಿದೆ. ಇದರ ಪ್ರಕಾರ WTO ಭಾರತದ ರೈತರ ಮೇ
ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ವಿದೇಶಿ ಪೈಪೋಟಿಯಿಂದ ಕೃಷಿ ಸರಕುಗಳು ದೇಶಕ್ಕೆ ಕಡಿಮೆ ಬೆಲೆಯ
ಆಮದಾಗುವ ಸಾಧ್ಯತೆ ಇದ್ದು ಕೃಷಿ ಕ್ಷೇತ್ರದ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಈ ಗುಂಪು WT
ನಿಂದಾಗಿಯೇ ರೈತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತವೆ ಎಂದೂ ವಾದಿಸುತ್ತಾರೆ.

WTO ನ್ನು ವಿರೋಧಿಸುವವರು ತಮ್ಮ ವಿರೋಧಕ್ಕೆ ಮುಖ್ಯವಾಗಿ ಮೂರು ಕಾರಣಗಳನ್ನು ನೀಡುತ್ತಾರೆ.

1) ಕಳಪೆ ಗುಣಮಟ್ಟ ಮತ್ತು ಪೂರೈಕೆಯ ಅಸಮರ್ಪಕತೆಯಿಂದಾಗಿ ವಿದೇಶಿ ಪೈಪೋಟಿಯನ್ನು ಎದುರಿಸುವುದು ಭಾರ
ಸಾಧ್ಯವಾಗುತ್ತಿಲ್ಲ.

2) ಸಹಾಯ ಧನದ ರದ್ದತಿ, ಕೋಟಾ ನಿರ್ಬಂಧ ಬೌದ್ಧಿಕ ಆಸ್ತಿ ಹಕ್ಕಿನ ಸೇರ್ಪಡೆ, ಪೇಟೆಂಟ್ ವ್ಯಾಪಾರಿ ಚಿಹ್ನೆಗ
ಇವು ಭಾರತದ ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ.

3) ಭಾರತದಲ್ಲಿ ಕೃಷಿ ಸರಕುಗಳ ರಫ್ತು ಹೆಚ್ಚಳದಿಂದಾಗುವ ಮೊದಲ ಸಮಸ್ಯೆ ದೇಶಿಯ ಮಾರುಕಟ್ಟೆಯಲ್ಲಿ ಆ ವಸ್ತುಗ
ಬೆಲೆ ಹೆಚ್ಚುವುದು. ಇದರಿಂದ ಬೃಹತ್ ಪ್ರಮಾಣದ ಅನುಭೋಗಿ ವರ್ಗ ತೊಂದರೆಗೊಳಗಾಗುತ್ತದೆ.

## ಕೃಷಿ ಸರಕುಗಳನ್ನು ಅಂತರರಾಷ್ಟ್ರೀಯ ಪೈಪೋಟಿಗೆ ಒಳಪಡಿಸುವುದು.

WTO ನಿಂದಾಗಿ ಕೃಷಿ ಸರಕುಗಳನ್ನು ಅಂತರರಾಷ್ಟ್ರೀಯ ಪೈಪೋಟಿಗೆ ಒಳಪಡಿಸಬಹುದು. ಇದರಿಂ
ದೊರಕುವ ಲಾಭ ಮುಖ್ಯವಾಗಿ ರಫ್ತು ಹೆಚ್ಚಳ, ರಫ್ತು ದಕ್ಷತೆ ಮತ್ತು ಸ್ಪರ್ಧಾತ್ಮಕತೆಯ ಅಂಶಗಳನ್ನು ಅವಲಂಬಿಸಿರುತ್ತ
ಬೆಲೆ ಹೆಚ್ಚಳ, ಕಳಪೆ ಗುಣಮಟ್ಟ ಮುಂತಾದ ಕಾರಣಗಳಿಂದಾಗಿ ಭಾರತ ನಿರೀಕ್ಷಿತ ಲಾಭಗಳನ್ನು ಪಡೆಯುವ
ವಿಫಲವಾಗಿದೆ. ಅದಾಗ್ಯೂ ಭಾರತ ಕೃಷಿ ಸರಕುಗಳನ್ನು ಅಂತರರಾಷ್ಟ್ರೀಯ ವ್ಯಾಪಾರಕ್ಕೊಳಪಡಿಸಲು ಉಜ್ವಲವಾ
ಅವಕಾಶಗಳಿವೆ. ಈ ಅವಕಾಶಗಳನ್ನು ಬಳಸಿಕೊಂಡು ಭಾರತ ಕೃಷಿ ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಂಡಿದ್ದೇ ಆದರೆ ಭಾರ
ವಿಶ್ವದಲ್ಲಿ ಒಂದು ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮುವ ಸಾಧ್ಯತೆ ಇದೆ. ಇದಕ್ಕೆ ಮೂರು ಮುಖ್ಯ ಕಾರಣಗಳನ್ನು
ನೀಡಬಹುದು ಅವುಗಳೆಂದರೆ...

1) ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳಲ್ಲಿ ಭಾರತ ಶ್ರೀಮಂತವಾಗಿದ್ದು, ಅವೆಲ್ಲವನ್ನು ಪೂರ್ಣ ಪ್ರಮಾಣದ
ದಕ್ಷತೆಯಿಂದ ಬಳಸಿಕೊಂಡಿಲ್ಲ. ಈ ಸಂಪನ್ಮೂಲಗಳನ್ನು ಭಾರತ ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾ
ಒಳಗೊಂಡಿದ್ದೇ ಆದರೆ ವಿಶ್ವದ ಇತರ ರಾಷ್ಟ್ರಗಳೊಡನೆ ಕೃಷಿ ಸರಕುಗಳನ್ನು ರಫ್ತು ಮಾಡುವಲ್ಲಿ ಪೈಪೋಟಿ ನೀಡಬಹುದ
ಕೃಷಿ ಸರಕುಗಳ ರಫ್ತು ಅಧಿಕವಾಗುತ್ತಾ ಹೋದಂತೆ ತಂತಾನೆ ಆಧುನಿಕ ಉತ್ಪಾದನಾ ವಿಧಾನ, ಕೃಷಿ ಸಂಸ್ಕರಣಾ ಘಟಕಗ
ಮತ್ತು ಕೃಷಿ ಮಾರಾಟ ವ್ಯವಸ್ಥೆ ಬದಲಾವಣೆಗೊಳಪಡುತ್ತದೆ. ಇದರಿಂದ ಭಾರತಕ್ಕೆ ವಿದೇಶಿ ವಿನಿಮಯ ಗಳಿಕೆ ಸಾಧ್ಯವಾ
ಉತ್ಪಾದನಾ ಕ್ಷೇತ್ರದಲ್ಲಿ ಪೈಪೋಟಿಯುತ ವಾತಾವರಣ ನಿರ್ಮಾಣವಾಗಿ ಜಾಗತಿಕ ಮಾರುಕಟ್ಟೆ ಉತ್ತಮ ಗುಣಮಟ್ಟ
ಸರಕುಗಳ ಲಭ್ಯತೆ ಸಾಧ್ಯವಾಗುತ್ತದೆ.

2) ವಾಣಿಜ್ಯ ಬೆಳೆಗಳು ಲಾಭದಾಯಕವಾಗಿದ್ದು ಅವುಗಳನ್ನು ಹೆಚ್ಚು ಪ್ರಮಾಣದಲ್ಲಿ ರಫ್ತು ಮಾಡಬಹುದು. ಹೀಗಾ
ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶವನ್ನು ತೀವ್ರವಾಗಿ ಹೆಚ್ಚಿಸುವುದರ ಅಗತ್ಯತೆ ಇದೆ. ಸ್ವಾತಂತ್ರ್ಯ ಪಡೆದ ನಂತ
ಆಹಾರ ಧಾನ್ಯಗಳನ್ನು ಬೆಳೆಯುವ ಪ್ರದೇಶದಲ್ಲಿ ಶೇಕಡಾ 25 ರಷ್ಟು ಹೆಚ್ಚಳವಾಗಿದ್ದರೆ ವಾಣಿಜ್ಯ ಬೆಳೆಗಳನ್ನು ಬೆಳೆಯು
ಪ್ರದೇಶದಲ್ಲಿ ಶೇಕಡಾ 50 ರಷ್ಟು ಹೆಚ್ಚಳವಾಗಿರುವುದನ್ನು ಗಮನಿಸಬಹುದು.

3) ಭಾರತದಲ್ಲಿ ವೈವಿಧ್ಯಮಯ ಕೃಷಿ ಯೋಗ್ಯ ವಾತಾವರಣವಿದ್ದು ವೈವಿಧ್ಯಮಯ ಬೆಳೆಗಳನ್ನು ಬೆಳೆಯಲು ಅನುಕೂಲ



ಕಬ್ಬು, ಚಹಾ, ತೆಂಗು, ರಬ್ಬರ್, ಸಾಂಬಾರ ಪದಾರ್ಥಗಳು, ಅಡಿಕೆ, ಕೋಕಾ, ಔಷಧಿ ಸಸ್ಯ, ಪುಷ್ಪ, ಹೈನುಗಾರಿಕೆ ಸಾಮಗ್ರಿ, ಮತ್ಸ್ಯ ಸಾಮಗ್ರಿ ಮುಂತಾದವುಗಳನ್ನು ಉತ್ಪಾದಿಸಿ ರಫ್ತು ಮಾಡುವ ಸ್ಥಿತಿಯಲ್ಲಿದೆ. ಭಾರತ ವಿಶ್ವದಲ್ಲೇ ಅತ್ಯಧಿಕ ತರಕಾರಿಯನ್ನು ಉತ್ಪಾದಿಸುವ ರಾಷ್ಟ್ರವಾಗಿದೆ. ಒಂದು ಅಂದಾಜಿನಂತೆ ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಹಣ್ಣು ಮತ್ತು ತರಕಾರಿಗಳಲ್ಲಿ ಶೇಕಡಾ 40 ರಷ್ಟು ಕೊಳೆತು ಹಾಳಾಗುತ್ತಿದೆ. ಭಾರತದಲ್ಲಿ ಉತ್ಪಾದನೆಯಾಗುವ ಹಣ್ಣು ಮತ್ತು ತರಕಾರಿಗಳಲ್ಲಿ ಕೇವಲ ಶೇ. 0.75 ರಷ್ಟನ್ನು ಮಾತ್ರ ಸಂಸ್ಕರಣೆಗೊಳಪಡಿಸಲಾಗುತ್ತದೆ. ಹೀಗಾಗಿ ಕೃಷಿ ಸಂಸ್ಕರಣಾ ಘಟಕಗಳನ್ನು ಅಭಿವೃದ್ಧಿಪಡಿಸಿ ಕೃಷಿ ಸರಕುಗಳ ರಫ್ತನ್ನು ಹೆಚ್ಚಿಸಲು ಭಾರತಕ್ಕೆ ಉಜ್ವಲವಾದ ಅವಕಾಶಗಳಿವೆ.

ಖ್ಯಾತ ಅರ್ಥಶಾಸ್ತ್ರಜ್ಞ, ಪ್ರೊ. ಅಹ್ಲುವಾಲಿಯಾ ಅವರು ಅಭಿಪ್ರಾಯಪಡುವಂತೆ ಕೃಷಿ ವಸ್ತುಗಳ ರಫ್ತು ತನ್ನಷ್ಟಕ್ಕೆ ತಾನೇ ಉದ್ಯೋಗದ ಹೊಸ ಮಾರ್ಗಗಳನ್ನು ಕಲ್ಪಿಸಿಕೊಳ್ಳುತ್ತದೆ. ಕೃಷಿ ಸರಕುಗಳ ಹೆಚ್ಚು ರಫ್ತಿನಿಂದ ಜನರಿಗೆ ಉದ್ಯೋಗವಕಾಶಗಳು ದೊರೆತು ಅವರ ಆದಾಯ ಏರಿಕೆ ಸಾಧ್ಯವಾಗುತ್ತದೆ. ಕೃಷಿ ವಸ್ತುಗಳ ರಫ್ತಿನಿಂದಾಗಿ ಉದ್ಯೋಗವಕಾಶಗಳು ಈ ಕೆಳಗೆ ತಿಳಿಸಲಾಗಿರುವ ಯಾವುದಾದರೂ ಪ್ರಕಾರದಲ್ಲಿ ಕಾಣಿಸಿಕೊಳ್ಳಬಹುದು.

1) ಕೃಷಿ ಸರಕುಗಳನ್ನು ರಫ್ತು ಮಾಡಲು ಅಗತ್ಯವಾದ ಸೇವೆಗಳನ್ನು ಒದಗಿಸುವಲ್ಲಿ

2) ರಫ್ತುದಾರರು ಕೃಷಿ ಸರಕುಗಳನ್ನು ರಫ್ತು ಮಾಡುವುದರಿಂದ ಪಡೆಯುವ ಗಳಿಕೆಯನ್ನು ಬಳಸುವುದರಿಂದ.

3) ರಫ್ತು ಸರಕುಗಳನ್ನು ಸಂಸ್ಕರಣೆಗೊಳಪಡಿಸುವುದರಿಂದ

ಮತ್ಸ್ಯ ಸಾಮಾಗ್ರಿಗಳು, ಗೋಡಂಬಿ, ಅಕ್ಕಿ, ಹಣ್ಣು ಮತ್ತು ಸಂಸ್ಕರಣೆಗೊಳಪಡಿಸಿದ ಆಹಾರ ಸಾಮಾಗ್ರಿಗಳನ್ನು ರಫ್ತು ಮಾಡುವಲ್ಲಿ ಭಾರತಕ್ಕೆ ಹೆಚ್ಚಿನ ಸಾಮರ್ಥ್ಯವಿದೆ ಎಂದು ಗುಲಾತಿ ಮತ್ತು ಶರ್ಮ ಅಭಿಪ್ರಾಯಪಟ್ಟಿದ್ದಾರೆ. ನಯ್ಯರ್ ಮತ್ತು ಸೇನ್‌ರವರು ಭಾರತದಲ್ಲಿ ತೋಟಗಾರಿಕೆ ಬೆಳೆಗಳು ಮತ್ತು ತರಕಾರಿಗಳ ರಫ್ತಿನ ಮೂಲಕ ಉದ್ಯೋಗ ಮತ್ತು ಅಭಿವೃದ್ಧಿ ಸಾಧನೆ ಸಾಧ್ಯ ಎಂದು ನಂಬಿದ್ದಾರೆ.

## WTO ಸವಾಲುಗಳನ್ನು ಎದುರಿಸಲು ಸೂಚಿಸಬಹುದಾದ ಸಲಹೆಗಳು

* ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧನೆಗೆ ಪೂರಕವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಕೃಷಿ ರಫ್ತುಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.
* ಕೃಷಿ ಮಾರಾಟ ವ್ಯವಸ್ಥೆಯಲ್ಲಿ ಸುಧಾರಣೆ ಜಾರಿಗೆ ತರುವುದು. ಗುಣಮಟ್ಟದ ಭರವಸೆಯೊಂದಿಗೆ Processing (ಸಂಸ್ಕರಣೆ), Grading (ಶ್ರೇಣೀಕರಣ), Packaging (ಪ್ಯಾಕಿಂಗ್) ಮತ್ತು Storage (ದಾಸ್ತಾನು) ಗಳನ್ನು ಕೈಗೊಳ್ಳುವುದರ ಮುಖಾಂತರ ಉತ್ಪನ್ನಕ್ಕೆ ಮೌಲ್ಯ ಸೇರ್ಪಡೆ ಮಾಡುವುದು.
* ಕೃಷಿ ಸಂಸ್ಕರಣ ವಿಸ್ತರಣೆಗೆ ಪ್ರೋತ್ಸಾಹಿಸುವುದು.
* ಶೀಘ್ರ ನಾಶ ಹೊಂದುವ ಸರಕುಗಳಾದ ಹಣ್ಣು, ತರಕಾರಿ ಮತ್ತು ಹೂಗಳನ್ನು ಶೀಘ್ರವಾಗಿ ಸಾಗಿಸಲು ವಿಮಾನ ಮತ್ತು ಹಡಗು ಸಾರಿಗೆ ವ್ಯವಸ್ಥೆ ಕಲ್ಪಿಸುವುದು.
* ಕೃಷಿಕರ ಸಮಸ್ಯೆಗಳನ್ನು ಬಗೆಹರಿಸುವಂತಹ ಸೂಕ್ತ ಕೃಷಿ ನೀತಿ ರೂಪಿಸುವುದು.
* ಬೆಲೆ ಕುಸಿತದಿಂದ ರೈತರು ಪಾರಾಗುವಂತೆ ಮಾಡಲು ಯೋಗ್ಯ ಬೆಲೆ ನೀತಿಯನ್ನು ರೂಪಿಸುವುದು.
* ಸಾಂಬಾರ ಪದಾರ್ಥಗಳು ಮತ್ತಿತರ ಕೃಷಿ ಸರಕುಗಳನ್ನು ಉತ್ಪಾದಿಸುವ ರೈತರಿಗೆ ವಿಶೇಷ ಪ್ರೋತ್ಸಾಹ ನೀಡಿ, ಉತ್ಪಾದನೆ ಅಧಿಕವಾಗುವಂತೆ ಮಾಡುವುದು.
* ಪೂರ್ಣ ಪ್ರಮಾಣದಲ್ಲಿ ಕೃಷಿ ಸರಕುಗಳನ್ನು ರಫ್ತು ಮಾಡುವ ಘಟಕಗಳಿಗೆ ತಮಗೆ ಅಗತ್ಯವಾದ ಬಂಡವಾಳ ಸರಕುಗಳನ್ನು ಸುಂಕರಹಿತವಾಗಿ ಆಮದು ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು.
* ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ಕೃಷಿ ರಫ್ತು ಕ್ಷೇತ್ರದಲ್ಲಾಗಿರುವ ಬದಲಾವಣೆಗಳನ್ನು ತಿಳಿಸುವುದು.
* ಕೈಗಾರಿಕೋದ್ಯಮಿಗಳು ಮತ್ತು ಬಹುರಾಷ್ಟ್ರೀಯ ನಿಗಮಗಳು ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಪ್ರೋತ್ಸಾಹಿಸುವುದು. ಮುಕ್ತವಾಗಿ ಹರಿದುಬರುವ ವಿದೇಶಿ ಬಂಡವಾಳವನ್ನು ರಸ್ತೆ ಅಭಿವೃದ್ಧಿ, ವಿದ್ಯುಚ್ಛಕ್ತಿ,

ಉತ್ಪಾದನೆ, ನೀರಾವರಿ ಯೋಜನೆ ಮತ್ತು ಕೃಷಿ ಸಂಸ್ಕರಣಾ ಘಟಕಗಳಲ್ಲಿ ವ್ಯಾಪಕವಾಗಿ ಬಳಸುವುದರ ಮೂ
ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸುವುದು.

* ಲಭ್ಯವಿರುವ ಮಾಹಿತಿಯಂತೆ ಭಾರತದ ಕೃಷಿಕ್ಷೇತ್ರ ತನ್ನ ಸಂಭವನೀಯತೆಯಲ್ಲಿ ಕೇವಲ ಶೇ. 20 ರಷ್ಟು ಮಾ ಬಳಸಿಕೊಳ್ಳುತ್ತಿದೆ. ಆದ್ದರಿಂದ ಇದುವರೆಗೆ ಉಪಯೋಗಿಸದೆ ಇರುವ ಸಂಪನ್ಮೂಲಗಳನ್ನು ಬಳಕೆಗೆ ಹಾಕಲು ಕ್ರ ಕೈಗೊಳ್ಳುವುದು.
* ಲಾಭ ನೀಡುವಂತಹ ಮತ್ತು ರಫ್ತು ಮಾಡುವಂತಹ ಬೆಳೆಗಳ ಉತ್ಪಾದನೆಗೆ ಪ್ರೋತ್ಸಾಹ ನೀಡುವುದು.

ಈ ಎಲ್ಲಾ ಕ್ರಮಗಳನ್ನು ಸರ್ಕಾರ ಪರಿಣಾಮಕಾರಿಯಾಗಿ ಜಾರಿಗೆ ತಂದರೆ ನಿಸ್ಸಂದೇಹವಾಗಿ ಭಾರತ ವಿದೇ ಪೈಪೋಟಿಯನ್ನು ಎದುರಿಸುವಲ್ಲಿ ಶಕ್ತವಾಗುತ್ತದೆ. ಭಾರತ ವಿಶ್ವದಿಂದ ಬೇರ್ಪಡುವುದರ ಬದಲಾಗಿ ಈ ಅವಕಾಶವ ಬಳಸಿಕೊಂಡು WTO ನ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಪ್ರಯತ್ನಿಸಬೇಕು. WTO ನಮಗೆ ಒಂ ಹೊರೆ ಎಂದು ಪರಿಗಣಿಸದೆ ಅದು ನಮಗೆ ಪ್ರೋತ್ಸಾಹಕ ಅಂಶವೆಂದು ಪರಿಗಣಿಸಬೇಕು. WTO ಆರ್ಥಿಕ ಬೆಳವಣಿಗೆ ಗತಿಯನ್ನು ಹೆಚ್ಚಿಸಲು ನೆರವಾಗುತ್ತದೆ ಎನ್ನುವುದು ಗಮನಾರ್ಹ ಅಂಶ.

ಭಾರತದ ಕೃಷಿ ಮೇಲೆ WTO ನ ತಕ್ಷಣದ ಪರಿಣಾಮಗಳು ಪ್ರತಿಕೂಲವಾಗಿದ್ದರೂ ಭಾರತ ವಿಶ್ವದಿಂದ ಬೇರ್ಪ ಏಕಾಂಗಿಯಾಗಿ ನಿಲ್ಲಲು ಸಾಧ್ಯವಿಲ್ಲದಿರುವುದರಿಂದ WTO ನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಕ್ತವಾಗಬೇ ಇದಕ್ಕೆ ಭಾರತದ ಕೃಷಿ ಕ್ಷೇತ್ರದಲ್ಲಿ ಸೂಕ್ತ ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ತಂದು ಸೂಕ್ತ ಕ್ರಮಗಳ ಮೂ ಭವಿಷ್ಯಕ್ಕೆ ಸಿದ್ಧರಾಗಬೇಕು.

ಜಾಗತೀಕರಣ ಮತ್ತು WTO ಒಪ್ಪಂದ ವಿಶೇಷವಾಗಿ ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ವ್ಯಾಪಾರದಿಂದಾಗಿ ಕೃ ಹೂಡುವಳಿಗಳಾದ ಬಿತ್ತನೆ ಬೀಜ, ಗೊಬ್ಬರ, ಮತ್ತಿತರ ರಾಸಾಯನಿಕ ಹೂಡುವಳಿಗಳು ಅಂತರರಾಷ್ಟ್ರೀಯ ಮಾರುಕಟ್ಟೆಯ ದುಭಾರಿಯಾಗುತ್ತವೆ. ಇದನ್ನು ಸಮರ್ಥವಾಗಿ ಎದುರಿಸಲು ಕೃಷಿ ಪ್ರಧಾನ ದೇಶವಾದ ಭಾರತ ತನ್ನೆಲ್ಲಾ ಸಂಶೋಧನೆಯ ಉತ್ಪಾದನಾ ವೆಚ್ಚವನ್ನು ತಗ್ಗಿಸುವಂತೆ ಮಾಡಲು ಸಾಧ್ಯವಾಗುವಂತಹ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವ ದಿಕ್ಕಿ ಆಲೋಚಿಸಿ ಕ್ರಮ ಕೈಗೊಳ್ಳಬೇಕಾಗಿದೆ. ಕೃಷಿ ಸಂಸ್ಕರಣಾ ಘಟಕಗಳನ್ನು ಅಭಿವೃದ್ಧಿ ಪಡಿಸುವುದರ ಮೂಲಕ ವಿದೇಶಿ ಸ್ಪ ಸಜ್ಜಾಗುವುದೊಂದೇ WTO ಸವಾಲುಗಳನ್ನು ಎದುರಿಸಲು ಇರುವ ದಾರಿ.

**ಅಮ್ಮ**



ಕಾಣದ ಲೋಕವ ನೋಡು
ಎಂದು ಜನ್ಮವೆತ್ತಳು ನನ್ನಮ್ಮ
ವಿಜಯದ ಶಿಖರ ಏರು
ಎಂದು ಹೆಸರಿಟ್ಟವಳು ನನ್ನಮ್ಮ
ನನ್ನ ಅಳುವಿನ ಅರ್ಥ ಅರಿತವಳು
ಮುಖದಲ್ಲಿ ನಗುತರಿಸಿದವಳು
ತೊದಲು ನುಡಿಯಾ ಬದಲು ಮಾಡಿ
ಕನ್ನಡ ನುಡಿ ಬರುವಂತೆ ಮಾಡಿದಳು
ಮೆಟ್ಟಿಲು ಜಾರದಂತೆ ಹರಸಿ
ಲೋಕಕ್ಕೆ ಕಾಣುವಂತೆ ಮೆರಸಿ
ಜಗವೇ ಮರೆಯುವ ಹಬ್ಬದಂತೆ
ಆನಂದಿಸಿದವಳ ನನ್ನಮ್ಮ

– ನಿಖಿಲ್ ಡಿ.ಕೆ.
ಪ್ರಥಮ ಬಿ.ಎ.,



# ಸಮಾಜ ಮತ್ತು ಸ್ತ್ರೀ

– ವತ್ಸಲ ಡಿ.
ತೃತೀಯ ಬಿ.ಎಸ್ಸಿ., (ಪಿ.ಸಿ.ಎಂ.)



"ಆಕಾಶದ ನೀಲಿಯಲ್ಲಿ ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಅಂದರೆ ಅಷ್ಟೇ ಸಾಕೆ"

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕವಿತೆ ಎಷ್ಟು ಅರ್ಥಪೂರ್ಣವಾಗಿದೆ. ಇಂದು ಹೆಣ್ಣಿಗೆ ವಿಭಿನ್ನ ರೀತಿಯ ಸವಾಲುಗಳು ಎದುರಾಗುತ್ತಿವೆ. ಆದರೂ ಆಕೆ ಎಲ್ಲಾ ರಂಗಗಳಲ್ಲೂ ಮುನ್ನುಗ್ಗುತ್ತಿದ್ದಾಳೆ. ಕುಟುಂಬದಲ್ಲಿ, ಸಮಾಜದಲ್ಲಿ ಆರ್ಥಿಕವಾಗಿ ಪ್ರಬಲವಾಗುತ್ತಿದ್ದಾಳೆ. ಸಹಕಾರ, ಪ್ರೋತ್ಸಾಹವೂ ದೊರೆಯುತ್ತಿದೆ. ಆದರೂ ಕೆಲವು ಕಡೆ ಅವಳ ಶೋಷಣೆ ತಪ್ಪಿದ್ದಿಲ್ಲ. ಆಧುನಿಕ ಮಹಿಳೆ ಪ್ರಬುದ್ಧಳಾಗಿ ಯೋಚಿಸುತ್ತಾಳೆ. ಈ ಪ್ರಬುದ್ಧತೆ ವೈಯಕ್ತಿವಾಗಿ ಭಿನ್ನಭಿನ್ನವಾಗಿರಬಹುದು. ಇದು ಅವಳ ಕೌಟುಂಬಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಅವಲಂಬಿಸಿರುತ್ತದೆ. ಮೊದಲು ಸಮಾಜದಲ್ಲಿ ಸ್ತ್ರೀಯರನ್ನು ನೋಡುವ ದೃಷ್ಟಿ ಬದಲಾಗಬೇಕು. ಇದಕ್ಕಾಗಿ ಪ್ರತೀ ಮನೆಯಲ್ಲಿ ಗಂಡು ಮಕ್ಕಳಿಗೆ ಸ್ತ್ರೀಯರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಕಲಿಸಿಕೊಡಬೇಕು. "ಮನೆಯೇ ಮಕ್ಕಳ ಮೊದಲ ಪಾಠಶಾಲೆ" ಎಂಬುದನ್ನು ನಾವು ನೀವೆಲ್ಲರೂ ಅರಿತುಕೊಳ್ಳಬೇಕು. ಮಕ್ಕಳನ್ನು ಕೇವಲ ಒಳ್ಳೆಯ ಶಾಲೆ, ಕಾಲೇಜುಗಳಿಗೆ ದಾಖಲಿಸಿಬಿಟ್ಟರೆ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಪ್ರತಿದಿನದ ಅವರ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಪೋಷಕರು ಮತ್ತು ಮಕ್ಕಳ ನಡುವೆ ಮುಕ್ತವಾದ ಸಂವಹನ ಇರಬೇಕು. ಆಗ ಮಕ್ಕಳು ಮುಚ್ಚುಮರೆಯಿಲ್ಲದೆ ಎಲ್ಲಾ ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಮತ್ತು ತಂದೆ ತಾಯಿಯ ಸಲಹೆ, ಸೂಚನೆಗಳನ್ನು ಖಂಡಿತ ಪಾಲಿಸುತ್ತಾರೆ.

ಹೆಂಗಸರ ಮೇಲಿನ ದೌರ್ಜನ್ಯಕ್ಕೆ ಅವರು ತೊಡುವ ಬಟ್ಟೆ ಕಾರಣ ಎನ್ನುವುದು ಎಷ್ಟು ಹಾಸ್ಯಾಸ್ಪದವೋ ಗಂಡು ಎಂದರೆ ಅದೊಂದು ಕಾಮದ ಅಪಧಮನಿ ಎನ್ನುವ ಕಲ್ಪನೆಯೂ ಸುಳ್ಳು. ಎಲ್ಲಾ ಹೆಂಗಸರು ಅಸುರಕ್ಷಿತರೇನಲ್ಲ, ಹಾಗೆ ಎಲ್ಲಾ ಗಂಡು ಮಕ್ಕಳು ಮನೋವಿಕಾರಿಗಳಲ್ಲ. ಅವಳು ಮನುಷ್ಯೆ ಎಂದು ತಿಳಿಹೇಳಲು ಅವನು ಖಂಡಿತಾ ಮೃಗ ಎಂದೆನ್ನುವುದು ಸಾಧುವಲ್ಲ. ಪ್ರತಿ ತಂದೆಗೂ ತನ್ನ ಮಗಳು ಹೊರ ಜಗತ್ತಿನಲ್ಲಿ ಹೇಗೆ ನೋಡಲ್ಪಡುತ್ತಾಳೆ ಎಂದು ತಿಳಿದಿರುತ್ತದೆ. ಹಾಗೆಯೇ ಪ್ರತಿ ತಾಯಿಗೂ ತನ್ನ ಮಗ ಗೂಳಿಯಲ್ಲ ಎನ್ನುವ ತಿಳುವಳಿಕೆ, ಭರವಸೆ ಇಲ್ಲದಿದ್ದರೆ ಅಮ್ಮನಾಗುವದಾದರೂ ಹೇಗೆ ಮತ್ತು ಯಾಕೆ ?

ಮಗಳು ಎಂದರೆ 'tension' ಅಲ್ಲ ಬದಲಿಗೆ 'Ten Son'ಗೆ ಸಮಾನಳು. ಪ್ರಾಸಕ್ಕೆ ಹಿತವೆನಿಸುವ ಈ ಮಾತು ಸತ್ಯದೊಡನೆಯ ಮುಖಾಮುಖಿಯಲ್ಲಿ ಅದೆಷ್ಟು ಪೇಲವವಾಗಿ ಕಾಣಿಸುತ್ತದೆ. ಮಗಳನ್ನು ಮಗಳು ಎಂದು ಒಪ್ಪದೆ ಅವಳನ್ನು ಮಗ ಎಂದು ನಿರೂಪಿಸಲು ಹೊರಟು, ಮಗನಿಗೆ ನೀನು ಎಂದೂ ಹೆಚ್ಚೇ ಎಂದು ಹೇಳ ಹೊರಟಿದ್ದೇ ಇಂದಿನ ಅವಳ ಸ್ಥಿತಿಗೆ ಕಾರಣವಾಗಿರಬಹುದೇನೋ ?

ಕೊನೆ ಮಾತು, ಹೆಣ್ಣು ಬಿಂಬಿಸಿರುವಷ್ಟು ಒಳ್ಳೆಯವಳೇನಲ್ಲ, ಗಂಡು ಕಾಣಿಸುತ್ತಿರುವಷ್ಟು ಕೆಟ್ಟವನಂತೂ ಅಲ್ಲವೇ ಅಲ್ಲ. ಇಬ್ಬರೂ ಮನುಷ್ಯರು ಮತ್ತು ಮನುಷ್ಯರು ಅಷ್ಟೇ !

# 'ಧರ್ಮ ಸಹಿಷ್ಣುತೆ' – ವಿವೇಕಾನಂದರ ವಿಚಾರಗಳ ಪ್ರಸ್ತುತತೆ

**ಪೀಠಿಕೆ :**

'ಧರ್ಮ ಸಹಿಷ್ಣುತೆ- ಇಲ್ಲಿ ಧರ್ಮ ಬೇರೆಯಲ್ಲ, ಸಹಿಷ್ಣುತೆ ಬೇರೆಯಲ್ಲ. ಅವೆರಡು ಒಂದೇ ನಾಣ್ಯದ ಎ... ಮುಖಗಳಿದ್ದಂತೆ. ಧರ್ಮದ ವಿಶೇಷ ಗುಣವೇ ಸಹಿಷ್ಣುತೆ. ಪ್ರಪಂಚದ ಯಾವುದೇ ಧರ್ಮವು ಸಹಿಷ್ಣುತೆಯನ್ನು ಬಿಟ್ಟ... ಸಾಧ್ಯವಿಲ್ಲ. ವಿವೇಕಾನಂದರು ತಮ್ಮ ವಿಚಾರಧಾರೆಗಳಲ್ಲಿ ಹೇಳಿರುವುದು ಇದನ್ನೇ. ಆ ಮೇರೆಗೆ 'ಸಹಿಷ್ಣುತೆ' ಎಂ... ಧರ್ಮದ 'ಉಸಿರು' ಎಂದು ತಿಳಿಯಬಹುದು. ಆದರೆ ಪ್ರಸ್ತುತ ಧರ್ಮಗಳಲ್ಲಿ ಈ 'ಸಹಿಷ್ಣುತಾ ಭಾವನೆ' ಇದೆಯೋ ಅಥವಾ ಇಲ್ಲವೋ? ಇದೆ ಎಂಬುದಾದರೆ ಅದು ಆಚರಣೆಯಲ್ಲಿದೆಯಾ ಎಂಬುದೆ ನಮ್ಮಗಳ ಮುಂದಿರುವ ದೊಡ್ಡ ? '.

**ವಿಷಯ ಮಂಡನೆ :** "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಮಾತಿದೆ. ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮ... ರಕ್ಷಿಸುತ್ತದೆ. ಹಾಗೆಯೇ 'ಅಹಿಂಸೋ ಪರಮೋ ಧರ್ಮ' ಎಂಬ ಮಾತಿನಂತೆ ಎಲ್ಲಾ ಧರ್ಮಗಳ ತತ್ವೋಪದೇಶ... ಒಂದೇ ಆಗಿದೆ.

12ನೇ ಶತಮಾನದಲ್ಲಿ ಬಸವಣ್ಣನವರು 'ಅನುಭವ ಮಂಟಪ'ವೆಂಬ ವಿಚಾರ ವೇದಿಕೆಯನ್ನು ನಿರ್ಮಾಣ ಮಾ... ಧರ್ಮಕ್ಕೆ ಹೊಸ ವ್ಯಾಖ್ಯಾನ ನೀಡುವ ಮೂಲಕ 'ದಯವೇ ಧರ್ಮದ ಮೂಲವಯ್ಯ', ದಯವೇ ಬೇಕು ಸ... ಪ್ರಾಣಿಗಳೆಲ್ಲರಲಿಯೂ' ಎಂದು ಉದ್ಗರಿಸಿದರು. ಈ ದಯೆ, ಕರುಣೆ, ಮಾನವೀಯತೆಯೇ ಧರ್ಮದಲ್ಲಿನ ವಿಶೇ... ಗುಣಗಳು. ಇವುಗಳಿಂದಲೇ ಧರ್ಮಕ್ಕೆ ವಿಶೇಷ ಅರ್ಥ ಸಿಗುವುದು. ಇದನ್ನೇ ನಾವು ಧರ್ಮ ಸಹಿಷ್ಣುತೆ ಎಂ... ಕರೆಯುವುದು.

ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಕೂಡಾ ಧರ್ಮದ ನೆಲೆಗಟ್ಟಿನಲ್ಲಿರುವುದನ್ನು ಕಾಣಬಹು... ವಿಶೇಷವಾಗಿ ಹಿಂದೂ ಧರ್ಮದಲ್ಲಿ ಸ್ವಾಮೀಜಿಯವರು ಧರ್ಮದ ಕುರಿತು ಹೀಗೆ ಹೇಳಿದ್ದಾರೆ.

"ಧರ್ಮದ ರಹಸ್ಯಗಳಿರುವುದು ಸಿದ್ಧಾಂತಗಳಲ್ಲಿಲ್ಲ. ಅದರ ಅನುಷ್ಠಾನದಲ್ಲಿ ಒಳ್ಳೆಯವರಾಗಿರುವುದು ಒಳ್ಳೆಯದ... ಮಾಡುವುದು, ಒಳಿತನ್ನೆ ಬಯಸುವುದು. ಇದೇ ಧರ್ಮದ ಸರ್ವಸ್ವ".

1893 ರಂದು ಚಿಕಾಗೋ ನಗರದಲ್ಲಿ ನಡೆದ 'ಸರ್ವಧರ್ಮ ಸಮ್ಮೇಳನದ' ಭಾಷಣದಲ್ಲಿ ಪ್ರತಿಪಾದಿಸಿದ ಹಿಂ... ಧರ್ಮದ ಸಿದ್ಧಾಂತಗಳು ಮಿಂಚಿನಂತೆ ಅಲ್ಲಿನ ಜನರನ್ನು ಆಕರ್ಷಿಸಿದವು. ಅವರ ಭಾಷಣದಲ್ಲಿ ಮೊದಲ ವಾಕ್ಯವಾ... – "ಅಮೇರಿಕಾದ ಸಹೋದರ- ಸಹೋದರಿಯರೇ" ಎಂಬುದು ಚಿರಸ್ಮರಣೀಯವಾಗಿದೆ. 'ಗುಲಾಮರ ನಾಡಿನಿ... ಹೊರಟ್ಟಿದ್ದವ ಚಕ್ರವರ್ತಿಯಾಗಿಬಿಟ್ಟಿದ್ದ ತನ್ನ ಹೃದಯ ತುಂಬಿದ್ದ ಪ್ರೇಮದ ಸುಧೆಯಿಂದ ಎಲ್ಲರನ್ನೂ ತೋಯಿಸಿಬಿಟ್ಟ...

## ಧರ್ಮದ ಬಗ್ಗೆ ಸ್ವಾಮಿ ವಿವೇಕಾನಂದರ ನಿಲುವು

"ವೈಯಕ್ತಿಕ ಮುಕ್ತಿಯ ಆಸೆಯನ್ನು ಬಿಟ್ಟು ಎಲ್ಲರ ಮುಕ್ತಿಗಾಗಿ ಶ್ರಮಿಸುವವನೇ ಅವರ ದೃಷ್ಟಿಯಲ್ಲಿ ಪ್ರಬುದ್ಧ... ಕೆಳಗೆ ಬಿದ್ದವರನ್ನು ಮೇಲಕ್ಕೆತ್ತುವುದು, ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು, ಆಪತ್ತಿನಲ್ಲಿದ್ದವರಿಗೆ ಸಾಂತ್ವನ ಹೇಳುವ... ನಿಜವಾದ ಧರ್ಮ" ಎಂದು ಅವರು ನಂಬಿದ್ದರು.

ವಿವೇಕಾನಂದರು ಧರ್ಮ ಮತ್ತು ಸರ್ಕಾರದ ನಡುವೆ ಕಟ್ಟುನಿಟ್ಟಾದ ದೂರವಿಡುವಂತೆ ಮನವಿ ಮಾಡಿದ... ಸಾಮಾಜಿಕ ಕಟ್ಟಲೆಗಳು ಧರ್ಮದ ಮೂಲಕ ರೂಪುಗೊಂಡಿರುತ್ತವೆಯಾದರೂ, ಸರ್ಕಾರಿ ಕೆಲಸಗಳಲ್ಲಿ ಯಾವುದೇ ಒ... ಧರ್ಮಕ್ಕೆ ಪ್ರಾಶಸ್ತ್ಯವಿರಬಾರದು ಎಂಬುದು ಅವರ ನಂಬಿಕೆಯಾಗಿತ್ತು.



ಅವರ ಕಲ್ಪನೆಯ ಆದರ್ಶ ಸಮಾಜವೆಂದರೆ ಬ್ರಾಹ್ಮಣ-ಜ್ಞಾನ, ಕ್ಷತ್ರಿಯ- ಸಂಸ್ಕೃತಿ, ವೈಶ್ಯ- ದಕ್ಷತೆ, ಮತ್ತು ಶೂದ್ರರ – ಸಮಾನತೆಯ ಮೇಲೆ ನಿಂತಿರುವಂತಹ ಸಮಾಜ. ಯಾವುದೇ ಒಂದು ವರ್ಗದ ಪ್ರಾಶಸ್ತ್ಯ ಸಮಾಜದಲ್ಲಿ ಸಮಾನತೆಯನ್ನು ಹಾಳುಗೆಡುವುತ್ತದೆ ಎಂಬುದು ಅವರ ಸಾಮಾಜಿಕ ದೃಷ್ಟಿ

ಪ್ರಸ್ತುತ ಮಾನವ ಸಮಾಜವು ಗುಂಪುಗಾರಿಕೆ, ತಮ್ಮ ಮತದ ಮೇಲೆ ಹೆಚ್ಚಿನ ಕಾಳಜಿ. ಇತರ ಧರ್ಮಗಳನ್ನು ಹಾಗೂ ಧರ್ಮಿಯವರನ್ನು ನಿಕೃಷ್ಟವಾಗಿ ಕಾಣುವುದು. ಈ ಕೋಮುವಾದವು ವಿಶ್ವವನ್ನು ಮನುಷ್ಯರ ರಕ್ತದಿಂದ ತೋಯಿಸಿದೆ. ಇಂತಹ ಘೋರ ರಾಕ್ಷಸತನದಿಂದ ಹೊರ ಬಂದು ಮನುಷ್ಯ ಮಾನವೀಯತೆಯನ್ನು ಮೆರೆಯಬೇಕಾಗಿದೆ ಎಂಬ ವಿಚಾರಗಳನ್ನು ಸ್ವಾಮೀಜಿಯವರು ಹೇಳಿದ್ದಾರೆ.

ವಿವೇಕಾನಂದರ ಆಧ್ಯಾತ್ಮವು ಪಾಂಡಿತ್ಯ ಪ್ರದರ್ಶನ ಅಲ್ಲ. ರಾಮಕೃಷ್ಣ ಪರಮಹಂಸರಿಂದ ಪ್ರಭಾವಿತರವಾದ ವಿವೇಕಾನಂದರ ಆಧ್ಯಾತ್ಮಕವು ಭಾವ ಮಂದಿರದ ಪರಿಶುದ್ಧತೆ ನಿರೀಕ್ಷಿಸುತ್ತದೆ. ಮತ್ತೊಬ್ಬರ ನೋವು ಗುರುತಿಸುವ ಮೂಲಕ ವಿವೇಕಾನಂದರ ಧರ್ಮ ಹುಟ್ಟಿದೆ. ಯುವ ಜನತೆ ವಿವೇಕಾನಂದರನ್ನು ಅರ್ಥಮಾಡಿಕೊಂಡರೆ ಇಂದಿನ ಜಾತಿ-ಜಾತಿ ಹಾಗೂ ಧರ್ಮ-ಧರ್ಮಗಳ ನಡುವೆ ನಡೆಯುತ್ತಿರುವ ತಿಕ್ಕಾಟ ನಿಲ್ಲಲಿದೆ.

**ಉಪ ಸಂಹಾರ :**

ಒಟ್ಟಾರೆಯಾಗಿ ವಿವೇಕಾನಂದರ ವಿಚಾರಧಾರೆಗಳು ಹಿಂದೂ ಧರ್ಮದ ಹಿರಿಮೆಯನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯುವುದರ ಜೊತೆಗೆ ನಮ್ಮ ಸಂಸ್ಕೃತಿಯನ್ನು, ನಾಗರೀಕತೆಯನ್ನು ಇಡೀ ವಿಶ್ವಕ್ಕೇ ಪರಿಚಯಿಸಿದವು. ಹಿಂದೂ ಧರ್ಮವು ಎಲ್ಲಾ ಧರ್ಮಗಳ ಉಳಿವಿಗೆ ಮೂಲ ಆಡಿಪಾಯವಾಗಿದೆ ಎಂದು ಹೇಳುವ ಮೂಲಕ ಹಿಂದೂ ಧರ್ಮದ ಮೇಲಿನ ಪಾಶ್ಚಾತ್ಯರ ಕೀಳು ಭಾವನೆಯನ್ನು ಕಿತ್ತೆಸೆದರು. ಮನುಷ್ಯನ ದೇಹಕ್ಕೆ ಉಸಿರು ಹೇಗೆ ಮುಖ್ಯವೋ ಹಾಗೆ ಧರ್ಮದ ಉಳಿವಿಗೆ ಸಹಿಷ್ಣುತೆಯೂ ಅಷ್ಟೆ ಮುಖ್ಯ ಎಂಬ ಸಂದೇಶವನ್ನು ಇಡೀ ವಿಶ್ವಕ್ಕೆ ಸಾರಿದ ವ್ಯಕ್ತಿ ಭಾರತದ ಯುವ ಚೈತನ್ಯ ಸ್ವಾಮಿ ವಿವೇಕಾನಂದರು.

**ರಮೇಶ್ ಹೆಚ್.ಇ.**
ದ್ವಿತೀಯ ಬಿ.ಎ., (ಹೆಚ್.ಇ.ಇ.)

**ಮನಗಳು**

– ನಿಖಿಲ್ ಡಿ.ಕೆ.
ಪ್ರಥಮ ಬಿ.ಎ.,

ಕಾಣದ ಕಡಲ
ಹಂಬಲಿಸಿದ ಮನಗಳು
ಕಾಣದ ಲೋಕವ
ಕಂಡು ಮರೆಯಾಗಿವೆ
ಕಂಡು ಕಾಣದ ಹಾಗೆ
ತಪ್ಪು ನೋಡುವ ಜನಗಳ
ನಡುವೆ ಮೆರೆಯುವ
ಮನಗಳು ಶಿಲೆಯಾಗಿವೆ
ಏನು ಹೇಳಲಾಗುವುದು ಇಂದು
ಹಣದ ಕೃತರ ಲೋಕವಿದು
ಮನುಷ್ಯತ್ವ ಮಾನವಿಯತೆಗೆ ಬೆಲೆ ಎಲ್ಲಿ
ಕಣ್ಣೀರು ಬರಿ ಕೊಳೆ ಇಲ್ಲಿ



# ಒಂದ್ನಿಮಿಷ ಸ್ವಲ್ಪ ಕೇಳ್ತೀರಾ ?

– ರಮೇಶ್ ಹೆ...
ದ್ವಿತೀಯ ಬಿ.ಎ., (ಹೆಚ್...



Hai ಕರೆದಿದ್ದು ಕೇಳಿಸಲಿಲ್ವಾ ? ನಾನು ಮಾರಾಯ್ರೇ... ನಿಮ್ಮ ಕಾಲೇಜಿನ ಲೈಬ್ರರಿ ಮಾತನಾಡುತ್ತಿರುವುದು. ಇದೇನು, ಇದ್ದಕ್ಕಿದ್ದಂತೆ ಮಾತನಾಡುವುದಕ್ಕೆ ಶುರು ಮಾಡಿದ್ದು ಅಂತ ಆಶ್ಚರ್ಯ ಆಯ್ತಾ ? ನೀವು ನನ್ನ ಹತ್ತಿರ ಬರದೇ ಹೋದುದಕ್ಕೆ ನಾನೇ ಬಂದು ಮಾತನಾಡಿಸಬೇಕಾಯಿತು ನೋಡಿ.

ನನಗೆ ನಿಮ್ಮನ್ನೆಲ್ಲಾ ದಿನಾ ನೋಡಬೇಕು ಅಂತ ಆಸೆ. ಆದರೆ ನೀವ್ಯಾರು ನನ್ನ ಹತ್ತಿರ ಬರುವುದೇ ಇಲ್ಲ. ಮೊನ್ನೆ ಒಂದು ಸಲ ಬಂದಿದ್ರಲ್ಲಾ ನನಗೆ ಎಷ್ಟು ಸಂತೋಷ ಆಯ್ತು ಗೊತ್ತಾ ? ಅಷ್ಟರಲ್ಲೇ ನಿಮ್ಮ friend ಬಂದ. ಕ್ಯಾಂಟೀನಿಗೆ ಬರೋಲ್ವೇನೋ ? ಅಂದ. ನೀವು ಎದ್ದು ಹೊರಟೇ ಬಿಡುವುದಾ ? ನನ್ನ ಸಡಗರ ಐದೇ ನಿಮಿಷಕ್ಕೆ ಕೊನೆಯಾಯ್ತು.

ದಿನಾ ನನ್ನ ಎದುರಿಗೇ ಬಂದು ನಿಂತಿರುತ್ತೀರಿ. ಪ್ರಪಂಚದ ಸಕಲ ಸಮಾಚಾರಗಳ ಕುರಿತು ಹರಟುತ್ತಿರುತ್ತೀರಿ ಹೋಗೋ-ಬರೋ ಹುಡುಗಿಯರ ಬಗ್ಗೆ ಹುಡುಗರ ಬಗ್ಗೆ comments ಮಾಡುತ್ತಿರುತ್ತೀರಿ. Atleast Class ಇಲ್ಲ ಇರೋವಾಗಲಾದರೂ ನನ್ನ ಹತ್ತಿರ ಬರಬಾರದೆ ?

ಇನ್ನು ನಿಮ್ಮ ಕೆಲವು friend ಇದ್ದಾರೆ. ಹೊರಗೆ ನಿಲ್ಲಲಾಗದೆ, ಒಳಗಡೆ Chair ಇದೆಯಲ್ಲಾ ! ಅಂತ ಬ... ಬಂದು ಕೂರುವವರು. ಅವರು ನನ್ನ ಹತ್ತಿರ ಇರೋ ಪುಸ್ತಕ ಬಿಚ್ಚುವುದಿಲ್ಲ ಬಿಡಿ. ಬದಲಿಗೆ ಊರಿನ ತಾಪತ್ರಯಗಳ... ಹರಟುತ್ತಲೋ, ಬರದಿರುವ friends ಕಾಯುತ್ತಲೋ, ತಮ್ಮ mobile ನಿಂದ message ಮಾಡುತ್ತಲೋ, ಅ... ನನ್ನ ಬೆಂಚಿನ ಮೇಲೆ ಅಪೂರ್ವ ಕೆತ್ತನೆಗಳನ್ನು ಕೆತ್ತುತ್ತಲೋ ಕಾಲ ಕಳೆಯುತ್ತಾರೆ. ಹಾಗಾಗಿ ನನ್ನಲ್ಲಿಗೆ ಓದಲೆಂದೇ ಬ... ಕೆಲವೇ ವಿದ್ಯಾರ್ಥಿಗಳನ್ನೂ ಬಾರದಂತೆ ಮಾಡಿಬಿಡುತ್ತಾರೆ ಇವರು. ಅಷ್ಟೇ ಅಲ್ಲದೆ ಕೆಲವೊಮ್ಮೆ ಪುಸ್ತಕದ ಕೆ... ಪುಟಗಳನ್ನು ಕದ್ದೊಯ್ಯುವುದೂ ಉಂಟು.

ನನ್ನಲ್ಲಿ ಎಷ್ಟೊಂದು ಪುಸ್ತಕಗಳಿದ್ದಾವೆ. ಗೊತ್ತಾ ? ಅವೆಲ್ಲಾ ಗೆದ್ದಲು ತಿಂದು ಹಾಳಾಗುವ ಮೊದಲು ನೀವು ... ಹತ್ತಿರ ಬರ್ತೀರಲ್ವಾ ? ನೀವು ನನ್ನ ಹತ್ತಿರ ಬಂದರೆ, ನಿಜವಾಗ್ಲೂ loss ಆಗೊಲ್ಲ ನೋಡಿ. ಮನೋರಂಜನೆಯ ಜೊ... ನಿಮಗೆ ಜ್ಞಾನವನ್ನೂ ಕೊಡುವಂತಹ ಏಕೈಕ ಮಾರ್ಗ ನಾನೇ ಎನ್ನುವ ಹೆಮ್ಮೆ ನನ್ನದು.

ಗೌತಮ ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದ ಹಾಗೆ ನಿಮಗೂ ಆ false Ashoka ... ಕೆಳಗೆ ಜ್ಞಾನೋದಯವಾಗುತ್ತದೆ ಅಂತ ನೀವು ನಂಬಿದ್ದೀರಿ ಅನ್ನೋ ಅನುಮಾನ ನನಗೆ. ಆ ಕಲ್ಲುಬೆಂಚಿನ ಮೇ... ಬಿಸಿಲಿಗೆ ಮೈ ಕೊಟ್ಟು ಕಷ್ಟಪಟ್ಟು ಕೂರುವ ಬದಲು ನನ್ನ ಬಳಿಗೆ ಬಂದರೆ ಕೂರಲು chair ಉಂಟು, ಓದ... ಪುಸ್ತಕಗಳುಂಟು.

"Great consulting room of a wise man is the library" ಎನ್ನುವುದೊಂದು ಆಂಗ್ಲೋಕ್ತಿ. ನಿ... ತುಂಬಾ "Wise man" ಅನ್ನುವುದು ನನಗೆ ಗೊತ್ತು. ಹಾಗಾಗಿ ನನ್ನನ್ನು 'consult' ಮಾಡುತ್ತೀರಾ ಅನ್ನುವ ನಂ... ನನ್ನದು. Please miss ಮಾಡ್ಬೇಡಿ. ಕಾಯ್ತಾ ಇರ್ತೀನಿ.

*ನಿರೀಕ್ಷೆಯೊಂದಿಗೆ, ನಿಮ್ಮ ವಿಶ್ವಾಸಿ,*
*ಗ್ರಂಥಾಲಯ*



# ನಾನು, ನನ್ನ ಕನಸು

ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)ಯಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆಯುವುದೆಂದರೆ ಗಗನಕುಸುಮ ಎಂದು ಅಂದುಕೊಂಡಿರುವ ವಿದ್ಯಾರ್ಥಿಗಳೇ ಹೆಚ್ಚು. ಇಲ್ಲಿ ಕಲಿಯುವುದೇ ಜೀವನದ ಧ್ಯೇಯವಾಗಿರಿಸಿಕೊಂಡಿರುವವರ ಸಂಖ್ಯೆ ಕಡಿಮೆಯೇನಿಲ್ಲ. ಇಂದು ಜಗದ್ವಿಖ್ಯಾತರಾದ ಗೂಗಲ್ ಸಿಇಒ ಸುಂದರ್ ಪಿಚೈ, ಇನ್ಫೋಸಿಸ್ ಸಂಸ್ಥಾಪಕ ಅಧ್ಯಕ್ಷ ಎನ್.ಆರ್. ನಾರಾಯಣಮೂರ್ತಿ, ಫ್ಲಿಪ್‌ಕಾರ್ಟ್‌ನ ಸಹಸಂಸ್ಥಾಪಕ ಸಚಿನ್ ಬನ್ಸಾಲ್, ಸನ್ ಮೈಕ್ರೋ ಸಿಸ್ಟಮ್ಸ್‌ನ ಸಹ ಸಂಸ್ಥಾಪಕ ವಿನೋದ್ ಕೋಸ್ಲಾ, ಭಾರತೀಯ ಇಂಗ್ಲೀಷ್ ಲೇಖಕ ಚೇತನ್ ಭಗತ್‌ರಂತೆ ಆಗಬೇಕೆನ್ನುವ ಕನಸು ಬಹುತೇಕ ವಿದ್ಯಾರ್ಥಿಗಳದ್ದು. ಇದಕ್ಕೆ ಬೇಕಾದ ಮಾಹಿತಿ, ಮಾರ್ಗದರ್ಶನ, ಪಡಬೇಕಾದ ಪರಿಶ್ರಮ, ಇರಬೇಕಾದ ಶ್ರದ್ಧೆ ಎಲ್ಲವನ್ನು ಜಾಲತಾಣಗಳಿಂದ ಪಡೆಯಬಹುದು. ಆದರೆ ನಾನು ಬೆಳಕು ಚೆಲ್ಲಬೇಕೆನ್ನುತ್ತಿರುವುದು ಐಐಟಿಗಳ ಇನ್ನೊಂದು ಮುಖ!

ಹೊಸ ಮಾಹಿತಿಯ ಪ್ರಕಾರ ಐಐಟಿ ತಯಾರಿಯನ್ನು +1 ತರಗತಿಯಿಂದಲೇ ಪ್ರಾರಂಭಿಸಬಹುದಂತೆ. ಬಾಲ್ಯದಿಂದಲೇ ಮಗುವನ್ನು ಪುಸ್ತಕದ ಹುಳುವನ್ನಾಸುವತ್ತ ಇವರ ಚಿಂತನೆ ಮಗುವಿಗೆ 14 ವರ್ಷದವರೆಗೆ ನೀಡುವ ಶಿಕ್ಷಣದಲ್ಲಿ ಎಲ್ಲಾ ವಿಷಯಗಳೂ ಅಡಕಗೊಂಡಿರುತ್ತವೆ. ಇದು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕ, ಅವನು / ಅವಳು 14ರ ನಂತರ ಅಂದರೆ ಪ್ರೌಢಾವಸ್ಥೆಗೆ ಬಂದಾಗ ತಮಗೆ ಬೇಕಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಗುರಿ ಸಾಧಿಸಲು ಸಮರ್ಥರಾಗಿರುತ್ತಾರೆ ಎಂಬುದು ಶಿಕ್ಷಣ ತಜ್ಞರ ಲೆಕ್ಕಾಚಾರ. ಆದರೆ +1 ರಿಂದಲೇ ಐಐಟಿಗೆ ತರಬೇತಿ ಪ್ರಾರಂಭಿಸಿದರೆ ಮಗುವಿನ ಬಹುಮುಖ ಪ್ರತಿಭೆಯನ್ನು ನಿರೀಕ್ಷಿಸಲು ಸಾಧ್ಯವೇ ? ತನ್ನ ಭವಿಷ್ಯದ ಕಲ್ಪನೆಯಿಲ್ಲದ ಮಗುವಿನ ತಲೆಯಲ್ಲಿ ಐಐಟಿಯ ಬೀಜವನ್ನು ಬಿತ್ತಿ ಅದನ್ನು ವಾಸ್ತವ ಜಗತ್ತಿನಿಂದ ಕಾಲ್ಪನಿಕ ಜಗತ್ತಿಗೆ ಕೊಂಡೊಯ್ದಂತಾಗುತ್ತದೆ. ಮಗುವಿನ ಅಮೂಲ್ಯವಾದ ಬಾಲ್ಯವನ್ನು ಕಸಿದುಕೊಂಡಂತಾಗುತ್ತದೆ. ಆ ಮಗುವಿನ ಮನಸ್ಸಿನಲ್ಲಿ ಕೇವಲ ಐಐಟಿಯಲ್ಲಿ ವ್ಯಾಸಂಗ, ನಂತರ ದೊಡ್ಡ ಸಂಬಳ ಸಿಗುವ ಕಂಪನಿಯಲ್ಲಿ ಕೆಲಸ ಗಿಟ್ಟಿಸುವುದು, ತಾಯಿನೆಲವನ್ನು ಬಿಟ್ಟು ಪರದೇಶಕ್ಕೆ ಹಾರುವುದು. ಇವಿಷ್ಟೇ ಮನೆಮಾಡಿರುತ್ತವೆ. ಇವರ ತಲೆಯಲ್ಲಿ ನಾಲ್ಕಕ್ಷರ ಇರುತ್ತದೆಯೇ ಹೊರತು ಪ್ರಾಪಂಚಿಕ ಜ್ಞಾನ ಶೂನ್ಯ. ಆಕಸ್ಮಿಕವಾಗಿ ಜೀವನದಲ್ಲಿ ಬರುವ ಏರಿಳಿತಗಳನ್ನು ಅವರು ಎದುರಿಸಲಾಗದೆ ವಿಮುಖರಾಗುತ್ತಾರೆ. ಒತ್ತಡಗಳನ್ನು ಸಹಿಸಲಾಗದೆ ಸೋಲುತ್ತಾರೆ. ಸೋತಾಗ ಎದ್ದುನಿಲ್ಲಲು ಸಾಧ್ಯವಿಲ್ಲದೆ ಕುಸಿದು ಬೀಳುತ್ತಾರೆ. ಆತ್ಮಹತ್ಯೆಯಂಥ ಹೀನಕೃತ್ಯವನ್ನು ಮಾಡುತ್ತಾರೆ. ನಾವು ಪ್ರತಿದಿನ ಟಿ.ವಿ., ಪತ್ರಿಕೆಗಳಲ್ಲಿ ಆತ್ಮಹತ್ಯೆಯ ಸುದ್ದಿಗಳನ್ನು ನೋಡುವುದು ಈ ಸಾಫ್ಟ್‌ವೇರ್ ಟೆಕ್ಕಿಗಳದ್ದೇ. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಪ್ರವೃತ್ತಿಯನ್ನು ಅವರು ಬೆಳೆಸಿ ಕೊಂಡಿರುವುದಿಲ್ಲ.

ಇನ್ನು ಮೇಲೆ ತಿಳಿಸಿದ ಐಐಟಿ ದಿಗ್ಗಜರೆಲ್ಲಾ ಪರದೇಶವಾಸಿಗಳೇ, ಅನಿವಾಸಿ ಭಾರತೀಯರು. ಇಲ್ಲಿ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಜ್ಞಾನವನ್ನು, ಸಂಪಾದನೆಯನ್ನು ಪರಕೀಯರಿಗೆ ಮಾರಿಕೊಳ್ಳುತ್ತಿದ್ದಾರೆ. Google, Facebook, Whatsapp ನಂತಹ ಆ್ಯಪ್‌ಗಳನ್ನು ಹುಟ್ಟುಹಾಕಿ ಇಡೀ ಪ್ರಪಂಚವನ್ನು ಕಿರುಬೆರಳಿನಲ್ಲಿ ತೋರಿಸುತ್ತಿದ್ದಾರೆ. ಇದರಿಂದ ಉದ್ಯೋಗಸೃಷ್ಟಿ ಒಂದೆಡೆಯಾದರೆ, ದುಷ್ಪರಿಣಾಮಗಳು ಕಡಿಮೆಯೇನಿಲ್ಲ. ಇವುಗಳಿಂದ ಆಗುತ್ತಿರುವ ಲಾಭಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಉತ್ತಮ. ಆದರೆ ಯುವ ಜನತೆ ಬೇಗ ಆಕರ್ಷಿತರಾಗುವುದು ತಮಗೆ ಬೇಡದೇ ಇರುವ ವಿಷಯಗಳ ಬಗ್ಗೆ. ಇವುಗಳಿಂದ ಆಗುತ್ತಿರುವ ಲಾಭವಾದರೂ ಏನು ? ಯುವಜನತೆ FB, Whatsupಗಳಲ್ಲಿ ಮುಳುಗಿಹೋಗಿದ್ದಾರೆ. ವಾಸ್ತವದ ಅರಿವಿಲ್ಲದೆ ಕಾಲ್ಪನಿಕ ಜಗತ್ತಿನಲ್ಲಿ 24 ಗಂಟೆಯೂ ವಿಹರಿಸುತ್ತಿರುತ್ತಾರೆ. ತಮ್ಮ ಅಮೂಲ್ಯವಾದ ಸಮಯವನ್ನು ಜಾಲತಾಣಗಳಲ್ಲಿ ಜಾಲಾಡಿ ಕಳೆಯುತ್ತಾರೆ. ಮಕ್ಕಳು google Kingಗಳಾಗುತ್ತಿದ್ದಾರೆ. ಶಾಲೆಗಳಲ್ಲಿ ನೀಡಿದ Project ಮಾಡಲು Google ಬೇಕೇ ಬೇಕು ಎನ್ನುವಷ್ಟರ ಮಟ್ಟಿಗೆ ನಾವು, ನೀವು Internetನ ದಾಸರಾಗುತ್ತಿದ್ದೇವೆ. ಪುಸ್ತಕಗಳು ಮೂಲೆಗುಂಪಾಗುತ್ತಿವೆ. Internetನಿಂದ ನಾವು ಪಡೆಯುವ ಜ್ಞಾನ ಆ ಕ್ಷಣಕ್ಕೆ ಮಾತ್ರ ಒಂದು ವಾರ ಕಳೆದು ಮತ್ತೆ ಅದನ್ನೇ ಕೇಳಿದರೆ ನಮ್ಮಿಂದ ಅದನ್ನು ಪುನರಾವರ್ತಿಸಲು ಕಷ್ಟಸಾಧ್ಯ ಇದು ನಮ್ಮಲ್ಲಿರುವ ಸೃಜನಶೀಲತೆಯನ್ನು ಕೊಲ್ಲುತ್ತದೆ ಎನ್ನುವುದು ಅತಿಶಯೋಕ್ತಿಯಲ್ಲ.

ಪಾಶ್ಚಿಮಾತ್ಯರು ಭಾರತೀಯ ಸಂಸ್ಕೃತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ದೈಹಿಕ ಮತ್ತು ಮಾನಸಿಕವಾಗಿ

ಸಬಲರಾಗುತ್ತಿದ್ದಾರೆ. ಆದರೆ ಸೋಜಿಗವೆಂದರೆ ನಾವು Junk food ಮೋಜು, ಮಸ್ತಿಯ ಹೆಸರಿನಲ್ಲಿ ಸೋಮಾರಿ ಅನಾರೋಗ್ಯ ತಂದುಕೊಳ್ಳುತ್ತಿದ್ದೇವೆ. ಬುದ್ಧ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸರಂಥ ದಾರ್ಶನಿಕರು ಈ ಭೂಮಿಯಲ್ಲಿ ನಾವು ಹುಟ್ಟಿರುವುದು ನಮ್ಮ ಸುಕೃತ. ಕೇವಲ ಐಐಟಿಯ ಕನಸನ್ನು ಕಾಣದೇ ಸಮಾ ಜವಾಬ್ದಾರಿಯುತ ಪ್ರಜೆಗಳಾಗಿ ವರ್ತಿಸುವುದು ನಮ್ಮ ಮೊದಲ ಪ್ರಾಧಾನ್ಯತೆಯಾಗಿರಬೇಕು.

ಉದ್ಯಾನವನದಲ್ಲಿ ವಿವಿಧ ರೀತಿಯ ಪುಷ್ಪಗಳಿದ್ದರೆ ಮಾತ್ರ ಅದು ಚೆಲುವಿನಿಂದ ಕಂಗೊಳಿಸುತ್ತದೆ. ಜನ ಕೈ ಬೀಸಿ ಕರೆಯುತ್ತದೆ. ಅದೇ ರೀತಿ ಯಾವ ಕ್ಷೇತ್ರವೂ ಗರಿಷ್ಠವೂ ಅಲ್ಲ, ಕನಿಷ್ಠವೂ ಅಲ್ಲ. ಪ್ರತಿ ಕೆಲಸಕ್ಕೂ ತನ್ನದೇ ವ್ಯಕ್ತಿತ್ವವಿರುತ್ತದೆ. ಅದನ್ನು ಗಮನಿಸುವ ಸೂಕ್ತ ಜಾಗೃತ ಮನಸ್ಸು ನಮ್ಮಲ್ಲಿರಬೇಕು. ಗುರಿ ದೊಡ್ಡದಾಗಿರಬೇಕು ನಿಜ, ಅದಕ್ಕೆ ಅಂಟಿಕೊಂಡಿರುವ ಜಾಯಮಾನ ಬೇಡ. ಅವಕಾಶ ಬಂದಾಗ ಖಂಡಿತಾ ಮುನ್ನುಗ್ಗೋಣ. ಆದ್ದರಿಂದ ಇ ಯುವಕರಿಗೆ ಕೇವಲ ವಿಷಯ ಜ್ಞಾನ ನಿರುಪಯೋಗ. ಇದರೊಂದಿಗೆ ಸಮಯಪ್ರಜ್ಞೆ, ಸಾಮಾನ್ಯ ಜ್ಞಾನ, ಪ್ರಾಪ ಜ್ಞಾನವೂ ಇರಬೇಕಾದ್ದು ಅತ್ಯಗತ್ಯ.

***"ಹಿಂದಿನ ಕಾಲದಲ್ಲಿ ಮುಂದೆ, ಗುರಿಯಿತ್ತು, ಹಿಂದೆ ಗುರು ಇದ್ದ. ಸಾಗುತ್ತಿತ್ತು ರಣಧೀರರ ದಂಡು, ಆದರ ಮುಂದೆ ಗುರಿಯೂ ಇಲ್ಲ, ಹಿಂದೆ ಗುರುವೂ ಇಲ್ಲ ಸಾಗುತಿದೆ ರಣಹೇಡಿಗಳ ಹಿಂಡು".***

– ಡಿ. ವ
ತೃತೀಯ ಬಿ.ಎಸ್ಸಿ., ಪಿ.ಸಿ.

## ಚಿಂತೆ

ತಂದೆಗೆ ದುಡಿಮೆಯ ಚಿಂತೆ, ತಾಯಿಗೆ ಮಕ್ಕಳ ಚಿಂತೆ
ಅಣ್ಣನಿಗೆ ತಂಗಿಯ ಚಿಂತೆ,ಮಕ್ಕಳಿಗೆ ಓದಿನ ಚಿಂತೆ
ಸೈನಿಕರಿಗೆ ದೇಶದ ಚಿಂತೆ, ಬಡವರಿಗೆ ಸಾಲದ ಚಿಂತೆ
ಗಂಡನಿಗೆ ಹೆಂಡತಿಯ ಚಿಂತೆ, ಮನುಷ್ಯನಿಗೆ ಸಾವಿನ ಚಿಂತೆ
ಕವಿಗಳಿಗೆ ಕಲ್ಪನೆಯ ಚಿಂತೆ, ಮರಗಳಿಗೆ ಮನುಷ್ಯನ ಚಿಂತೆ
ಯುವಕ ಯುವಕರಿಗೆ ಮದುವೆಯ ಚಿಂತೆ,
ಭೂಮಿಗೆ ಭೂಕಂಪದ ಚಿಂತೆ, ದೇವತೆಗಳಿಗೆ ರಾಕ್ಷಕರ ಚಿಂತೆ
ಹೆಣ್ಣೆತ್ತವರಿಗೆ ವರದಕ್ಷಿಣೆಯ ಚಿಂತೆ, ಮೀನುಗಳಿಗೆ ನೀರಿನ ಚಿಂತೆ
ಸರ್ಕಾರಕ್ಕೆ ಜನಸಂಖ್ಯೆಯ ಚಿಂತೆ, ಶ್ರೀಮಂತನಿಗೆ ಕಳ್ಳರ ಚಿಂತೆ
ಕಳ್ಳರಿಗೆ ಪೊಲೀಸರ ಚಿಂತೆ, ನನಗೀಗ ಬರೆಯುವ ಚಿಂತೆ
ಪ್ರಪಂಚದಲ್ಲಿ ಚಿಂತೆಯಿರದ ವಸ್ತು ಯಾವುದು ಇಲ್ಲ
ಬರಿ ಚಿಂತೆ... ಚಿಂತೆ.... ಚಿಂತೆ. ಚಿಂತೆಯಿಂದ ಚಿತೆಹತ್ತಿದರು......
ಕ್ರೋಧ ಬುದ್ಧಿಯನ್ನು ತಿನ್ನುತ್ತದೆ.
ಅಹಂಕಾರ ಜ್ಞಾನವನ್ನು ತಿನ್ನುತ್ತದೆ
ಪ್ರಾಯಶ್ಚಿತ ಪಾಪವನ್ನು ತಿನ್ನುತ್ತದೆ.
ಮೋಹ ಮರ್ಯಾದೆಯನ್ನು ತಿನ್ನುತ್ತದೆ
ಲಂಚ ಗೌರವವನ್ನು ತಿನ್ನುತ್ತದೆ
ಚಿಂತೆ ಆಯುಷ್ಯವನ್ನು ತಿನ್ನುತ್ತದೆ.

ಜೆ. ಜ್ಯೋ
ಪ್ರಥಮ ಬಿಎಸ್ಸಿ., (ಪಿ.ಎಂ



# ಕೊನೆಯವರೆಗೂ ಜೊತೆಯಲ್ಲಿ ಬರುವ ಸ್ನೇಹಿತ...

ಇದೇನಿದು? ಸ್ನೇಹಿತ ಕೊನೆಯವರೆಗೂ ಜೊತೆಯಲ್ಲಿ ಬರುವನೇ ? ಎಂದು ಯೋಚಿಸುತ್ತಿದ್ದೀರಾ ? ನಾನು ಗೆಳೆಯ/ ಗೆಳತಿಯರ ಬಗ್ಗೆ ಮಾತನಾಡುತ್ತಿಲ್ಲ. ಆದರೆ ನಿಮಗೆಲ್ಲಾ ಆಶ್ಚರ್ಯವಾಗಬಹುದು. ಅದೇನೆಂದರೆ, ನಮ್ಮ ಜೀವನದ ಕೊನೆವರೆಗೂ ಬರುವ ಸ್ನೇಹಿತನೆಂದರೆ, ಅದು 'ಪುಸ್ತಕ' ಮಾತ್ರ. "ಕೊನೆವರೆಗೂ ಜೊತೆಯಲ್ಲಿ ಬರುವ ಸ್ನೇಹಿತ ಪುಸ್ತಕ' ಈ ಅಮೂಲ್ಯವಾದ ವಾಕ್ಯವನ್ನು ನಮ್ಮ ಕಾಲೇಜಿನ ಗೋಡೆಯ ಮೇಲೆ ಬರೆದಿದ್ದಾರೆ. ಈ ವಾಕ್ಯವನ್ನು ಗಮನಿಸಿದಾಕ್ಷಣ ನನ್ನೊಳಗೆ ರೋಮಾಂಚನ ಉಂಟಾಯಿತು. ಇದು ನಮ್ಮ ಜೀವನದಲ್ಲಿ ಬಹು ಮುಖ್ಯವಾದ ಅಥವಾ ಪ್ರಮುಖ ಸ್ಥಾನವನ್ನು ಪಡೆದಿದೆ.

ಸ್ನೇಹಿತರೇ, ಪುಸ್ತಕ–ವಿದ್ಯೆ–ವಿನಯ ಎಲ್ಲವೂ ನಮ್ಮ ಬಾಳಿನ ಕೊನೆಯ ಉಸಿರಿನವರೆಗೂ ಬರುವಂತವು. "ಪುಸ್ತಕವೆಂದರೆ–ಜ್ಞಾನಭಂಡಾರ' ಮತ್ತು 'ವಿದ್ಯೆಯೆಂದರೆ–ಕದಿಯಲಾಗದ ಸಂಪತ್ತು' ಎಂಬ ಎರಡು ವಾಕ್ಯಗಳು ಬಹು ಪ್ರಮುಖ ಸ್ಥಾನವನ್ನು ಪಡೆದಿವೆ. ನಾವು ಕಲಿತ ವಿದ್ಯೆ ನಮಗೆ ಎಂದಿಗೂ ಬೆನ್ನಿಗೆ ಚೂರಿ ಹಾಕುವುದಿಲ್ಲ. ಹಾಗೆಯೇ ಈ ಕಲಿತಂತಹ ವಿದ್ಯೆಯನ್ನು ನಮ್ಮಿಂದ ಯಾರೂ ದೂರಮಾಡಲಾರರು ಹಾಗೂ ಕದಿಯಲು ಅಸಾಧ್ಯವಾದಂತದು. ಎಷ್ಟೇ ಶ್ರೀಮಂತನಾದರೂ, ವಿದ್ಯೆಯೆಂಬುದು ಅವನಲ್ಲಿ ಇಲ್ಲವಾದರೆ ಆ ವ್ಯಕ್ತಿ ಒಂದು ಖಾಲಿ ಕೊಡಕ್ಕೆ ಸಮಾನವಾಗುತ್ತಾನೆ. "ತುಂಬಿದ ಕೊಡ ಎಂದಿಗೂ ತುಳುಕುವುದಿಲ್ಲ' ಎಂಬಂತೆ ವಿದ್ಯೆ–ಬುದ್ಧಿಗಳನ್ನು ಸಿದ್ಧಿಸಿಕೊಂಡವನು ಎಂದಿಗೂ ಸೋಲನ್ನು ಕಾಣುವುದಿಲ್ಲ. ಪುಸ್ತಕದಿಂದ ಅನೇಕ ವಿಷಯ ವಿಚಾರಗಳನ್ನು ಸಂಪಾದಿಸಿ, ಅಂತೆಯೇ ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ. ಆ ವಿದ್ಯೆ ಎಂದಿಗೂ ನಮ್ಮಿಂದ ದೂರವಾಗುವುದಿಲ್ಲ ಹಾಗೂ ಅಳಿಯುವುದಿಲ್ಲ.

**"ನೀನು ನನ್ನನ್ನು ತಲೆ–ತಗ್ಗಿಸಿ ನೋಡು ನಾನು ನಿನ್ನನ್ನು ತಲೆ– ಎತ್ತುವಂತೆ ಮಾಡುವೆ"**

ಎಂದು 'ಪುಸ್ತಕ' ಹೇಳುತ್ತಿರುವ ಈ ಕಿರಿ ಕವನ ನಮ್ಮ ಮನಸ್ಸಿಗೆ ನಾಟುವಂತಿದೆ. ಈಗಿನ ಆಧುನಿಕ ಜಗತ್ತಿಗೆ 'ಪುಸ್ತಕ' ಒಂದು ಕೇವಲ 'ವಸ್ತು'ವಾಗಿ ಪ್ರತಿಬಿಂಬಿಸುತ್ತಿದೆ. ಆದರೆ 'ಪುಸ್ತಕ'ದಿಂದ ಬರುವಂತಹ 'ಜ್ಞಾನ' ನಮ್ಮನ್ನು ಎಂದೂ ಬಿಡುವುದಿಲ್ಲ. ಇಂಗ್ಲೀಷ್ ಸಾಹಿತ್ಯದಲ್ಲಿ ಬರುವಂತಹ 'ಜಾರ್ಜ್ ಲುಯೀಸ್ ಬೊರ್ರ್ಸ್' ಹೇಳಿರುವಂತೆ ಪುಸ್ತಕಗಳು ಎಂದಿಗೂ ಅಳಿಯುವುದಿಲ್ಲ. ಈ ಮಾತು ನೂರಕ್ಕೆ ನೂರು ಸತ್ಯ.

ಅಪಾರ ಜ್ಞಾನವನ್ನು ಸ್ವೀಕರಿಸಲು 'ಪುಸ್ತಕ' ಓದಿದರೆ ಸಾಕು. ನಮ್ಮ ಜೀವನದ ಪ್ರತಿ ಹೆಜ್ಜೆಗೂ ಈ ಪುಸ್ತಕವೇ ಮೆಟ್ಟಿಲು. ಈ ದಿನ ಸಮಯ ಮತ್ತು ವಿದ್ಯೆಗೆ ಗೌರವಿಸುವದನ್ನು ನಾವು ಮೊದಲು ಕಲಿಯಬೇಕು. ಇಂದು ನಾವೆಲ್ಲಾ ಕಲಿಯುವುದಕ್ಕಿಂತ ಬೇರೆ ಚಟುವಟಿಕೆಗಳೇ ಮುಖ್ಯ ಎಂದು ತಿಳಿದಿದ್ದೇವೆ, ಆದರೆ ಕಲಿತಂತಹ ವಿದ್ಯೆಗಿಂತ ಶಾಶ್ವತ ಮತ್ತೊಂದಿಲ್ಲ. ಇಂದು ನಾವು ಶಾಶ್ವತ ಸುಖದೆಡೆಗೆ ಪಯಣ ಮಾಡಬೇಕಾಗಿದೆ. ಅದು ವಿದ್ಯೆ ಎಂಬ ಎರಡಕ್ಷರದಿಂದ ಮಾತ್ರ ಸಾಧ್ಯವಾಗಿದೆ. ಕನ್ನಡ ಸಾಹಿತಿಗಳಾದ ದೇವನೂರು ಮಹಾದೇವನವರು,

**"ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲಾ ನಾಳೆ ಫಲ ಕೊಡುತ್ತದೆ'.** – ಎಂದಿದ್ದಾರೆ.

ಅಂತೆಯೇ ಕಲಿತ 'ವಿದ್ಯೆ' ಎಂದಿಗೂ ಮಾಸದು. ದೇವರ ಶಕ್ತಿ, ಯುವ ಶಕ್ತಿ ಎಂಬಂತೆ, ನಮ್ಮ ಬಾಳನ್ನು ಪುನೀತಗೊಳ್ಳಿಸಿಕೊಳ್ಳೋಣ, ಜ್ಞಾನದ ಹಸಿವಿನಿಂದ ಸಂಪಾದಿಸೋಣ ಹಾಗೂ ನಾವುಗಳು ಹಲವಾರು ದುಶ್ಚಟಗಳಿಗೆ ಇಂದು ದಾಸರಾಗಿ ಅಮೂಲ್ಯವಾದಂತಹ ಜೀವನವನ್ನು ವ್ಯರ್ಥಮಾಡುವುದಕ್ಕಿಂತ 'ವಿದ್ಯೆ'ಗೆ ದಾಸರಾಗೋಣ ಮತ್ತು ನಮ್ಮ ಇಂದಿನ ಹಾಗೂ ಮುಂಬರುವ ಜನತೆಯನ್ನು ಸಮಾಜವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸೋಣ....

**ಕೃಪ ಬಿ.ಎಂ.**
ಪ್ರಥಮ ಬಿ.ಎಸ್ಸಿ. (ಪಿ.ಸಿ.ಎಂ.)
'ಎ' ವಿಭಾಗ

# ಶಿಕ್ಷಕನ ಹೊಣೆ

ಒಬ್ಬ ಶಿಕ್ಷಕ ಸದಾಕಾಲ ಒಬ್ಬ ವಿದ್ಯಾರ್ಥಿ. ಶಿಕ್ಷಕ ವೃತ್ತಿಗೆ ತನ್ನದೇ ಆದ ಹೊಣೆಗಾರಿಕೆ ಇದೆ. ಒಬ್ಬ ಶಿಕ್ಷಕ ಕೇ... ಒಬ್ಬ ವ್ಯಕ್ತಿಯಲ್ಲ. ಆತನ ಹಿಂದೆ ಅವನನ್ನು ಬೆಳೆಸಿದ ಒಂದು ಪರಂಪರೆಯೇ ಇರುತ್ತದೆ. ನಾನು ಪಾಠ ಮಾಡುತ್ತಿದ್ದೇನೆ... ನನಗೆ ಪಾಠ ಮಾಡಿದ ಗುರುಗಳ ಉದಾಹರಣೆಗಳು, ಕಥೆಗಳು, ಸನ್ನಿವೇಶಗಳು ನನ್ನ ಪ್ರವಚನಕ್ಕೆ ಸರಕುಗಳು ಶಿಕ್ಷಕನ ಹೊ... ಒಂದು ಸುಂದರ ಸಮಾಜ ಕಟ್ಟುವುದು. ಒಂದು ಸುಂದರ ವ್ಯಕ್ತಿತ್ವ ರೂಪಿಸುವುದು. ಒಬ್ಬ ಶಿಕ್ಷಕ ವಿದ್ಯಾರ್ಥಿಗಳ ಹೃದಯ... ಬಾಗಿಲನ್ನು ತಟ್ಟಬೇಕೇ ಹೊರತು ಕೇವಲ ತಲೆ ಮುಟ್ಟುವುದಲ್ಲ. ಜ್ಞಾನದ ಕಿಡಿ ಹಚ್ಚಿದಲ್ಲಿ ಅದು ನಂತರ ದೀಪವಾಗಬಲ್ಲ...

ಶಿಕ್ಷಕರೂ ಕೂಡ ಇತ್ತೀಚಿನ ದಿನಗಳಲ್ಲಿ ವಸ್ತುನಿಷ್ಟ ಚಿಂತನೆ ಬದಿಗೊತ್ತಿ ತಮ್ಮ ಯಾವುದೊ ಒಂದು ಇಸಂ ... ಮಕ್ಕಳನ್ನು ತಪ್ಪುದಾರಿಗೆ ಎಳೆಯುತ್ತಿರುವುದು ದುರಂತ. ಎಡವಿರಲಿ ಬಲವಿರಲಿ ಅದು ಅವರವರ ವೈಯಕ್ತಿಕ. ... ಮಕ್ಕಳನ್ನು ತಮ್ಮ ಕೈಗೊಂಬೆಗಳಂತೆ ಮಾಡಿಕೊಳ್ಳುವುದು ದುರಂತ. ಚಿಂತನೆಗಳ ಧಾರೆಯೆರೆವುದಷ್ಟೇ ನಮ್ಮ ಕೆಲ... ಧಾರೆಯೆರೆದ ಚಿಂತನೆಗಳನ್ನು ಬಳಸಿಕೊಂಡು ಯಾವುದು ಸರಿ ಯಾವುದು ತಪ್ಪು ಎಂಬುದನ್ನು ತಾನೇ ತೀರ್ಮಾ... ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾನೆ. ಜ್ಞಾನಾರ್ಜನೆಗೆ ಕೊನೆಯಿಲ್ಲ. ಅದೊಂದು ಬಿಸಿಲುಗುದುರೆ. ಮಹಾವಿಜ್ಞಾನಿ ನ್ಯೂಟ... ಒಂದು ಕಡೆ ಹೇಳುತ್ತಾನೆ. "ನಾನೇನೆಲ್ಲ ಸಾಧನೆ ಮಾಡಿದ್ದೇನೊ, ಅವೆಲ್ಲ ಕೇವಲ ಒಬ್ಬ ತುಂಟ ಹುಡುಗ ದಡದಲ್ಲಿ ... ಚಿಪ್ಪು ಎತ್ತಿದಷ್ಟೇ". ***Knowledge is unfolded infinite***. ಉಸಿರಾಡುವುದಷ್ಟೇ ಬದುಕಲ್ಲ. ದೇವರು ನಮಗೆ ದೊ... ವರ ಕೊಟ್ಟಿದ್ದಾನೆ. ಅದೇ ಜ್ಞಾನಾರ್ಜನೆ. ಆಹಾರ, ನಿದ್ರೆ ಭಯ, ನಮಗೂ ಇವೆ. ಪ್ರಾಣಿಗೂ ಇವೆ. ಆದರೆ ನಾವು ... ನಮಗೆ ಜ್ಞಾನಾರ್ಜನೆಯ ವರ ಲಭಿಸಿದೆ. ಇವೆಲ್ಲವನ್ನು ಶಿಕ್ಷಕ ನೆನಪಿಟ್ಟುಕೊಳ್ಳಬೇಕು. ಟೆನ್ನಿಸನ್ ಮಹಾಕವಿಯು ಯುಲಿ... ಪದ್ಯದಲ್ಲಿ ಹೇಳುತ್ತಾನೆ. "My purpose is to sail beyond the sunset". ಕಡೆ ಉಸಿರಿರುವವರೆಗೆ ಜ್ಞಾನಾರ್ಜ... ನಿಲ್ಲದು. ಅದೇ ಉತ್ತಮ ಶಿಕ್ಷಕನ ಗುರಿ, ವ್ಯಕ್ತಿತ್ವ , ಅಂಥ ವ್ಯಕ್ತಿತ್ವ ಹೊಣೆ ಅರಿತು ದುಡಿದರೆ, ನಮಗೆ ಬೇಕಾದ ಸಮಾ... ದೊರೆಯದೇ ಇರುತ್ತದೆಯೇ ?

– **ಪ್ರೊ. ಗೌರಿಶಂಕ...**
ನಿವೃತ್ತ ಉಪನ್ಯಾಸಕರು, ಇಂಗ್ಲಿಷ್ ವಿಭಾ...

### ಸಮೂಹ

ಮರದಲ್ಲಿ ಕಾಣುವುದು ಎಲೆಯ ಸಮೂಹ
ನೀರಿನಲ್ಲಿ ಕಾಣುವುದು ಮೀನಿನ ಸಮೂಹ
ಆಕಾಶದಲ್ಲಿ ಕಾಣುವುದು ನಕ್ಷತ್ರಗಳ ಸಮೂಹ
ನನ್ನಲ್ಲಿ ಕಾಣುವುದು ವಿದ್ಯೆ ಎಂಬ ಅಕ್ಷರದ ಸಮೂಹ

### ಶಿಕ್ಷಣವೆಂಬ ಬಲೆ

ಮನೆಯೇ ಮೊದಲ ಪಾಠಶಾಲೆ
ಶಿಕ್ಷಕ ಕಲಿಸುವವನು ಅಕ್ಷರ ಮಾಲೆ
ತಿಳಿಸುವವರು ಜೀವನವೆಂಬದೊಂದು ಸಾಗರದ ಅ...
ಅದಕ್ಕೆ ಬೀಸಬೇಕಾಗಿದೆ ಶಿಕ್ಷಣವೆಂಬ ಬಲೆ.





## ಮಹೇಶ್ ದೇಶಪಾಂಡೆ, ಬೆಂಗಳೂರು

**ಕಿರು ಪರಿಚಯ** : ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು ಶಿವಮೊಗ್ಗದಲ್ಲಿ 1976–77 ರಂದು ಪಿ.ಯು.ಸಿ. ದ್ವಿತೀಯ ವರ್ಷದ ವಿಜ್ಞಾನ (ಪಿ.ಸಿ.ಎಂ.ಬಿ.) ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡಿದರು. ನಂತರ 1977–78 ರಲ್ಲಿ ಸಹ್ಯಾದ್ರಿ ಕಾಲೇಜು ಶಿವಮೊಗ್ಗದಲ್ಲಿ ಪ್ರಥಮ ವರ್ಷದ ವಿಜ್ಞಾನ ಪದವಿ ವ್ಯಾಸಂಗ ಮಾಡಿದರು.

1978 ಆಗಸ್ಟ್‌ನಲ್ಲಿ ಭಾರತೀಯ ವಾಯುಸೇನೆಯ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಆಯ್ಕೆಯಾಗಿ ಸೇರಿದರು. ಜಾಲಹಳ್ಳಿ ಬೆಂಗಳೂರಿನಲ್ಲಿ ನಾಲ್ಕು ವರ್ಷ ತರಬೇತಿ ಹೊಂದಿ ರೇಡಾರ್ ಇಂಜಿನಿಯರ್ ಆಗಿ ವಾಯುಸೇನೆಯ ಹಲವಾರು ನೆಲೆಗಳಲ್ಲಿ 15 ವರ್ಷ ಸೇವೆ ಸಲ್ಲಿಸಿದರು. ತಮ್ಮ ಸೇವಾವಧಿಯಲ್ಲಿ ಖರ್‌ಗ್‌ಪುರ್, ಬರ್ನಾಲ, ಗೌಹಾಟಿ, ನವದೆಹಲಿ ಮತ್ತು ಅಮೃತ್‌ಸರ್ ಮುಂತಾದ ಗಡಿಪ್ರದೇಶಗಳಲ್ಲಿ ಸೇವೆ ಸಲ್ಲಿಸಿ 1993 ರಲ್ಲಿ ನಿವೃತ್ತ ಹೊಂದಿದರು. ವಾಯುಸೇನೆಯಲ್ಲಿರುವಾಗಲೇ ಶಿಕ್ಷಣವನ್ನು ಮುಂದುವರೆಸಿ, ಬಾಹ್ಯ ವಿದ್ಯಾರ್ಥಿಯಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ರಾಜ್ಯಶಾಸ್ತ್ರದಲ್ಲಿ ಕಲಾ ಪದವಿ ಮತ್ತು ಅಣ್ಣಮಲೈ ವಿ.ವಿ.ಯಿಂದ ಪಿ.ಜಿ., ಡಿ.ಬಿ.ಎ. ಸ್ನಾತಕೋತ್ತರ ಪದವಿ ಪಡೆದರು.

1994ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೇಂದ್ರ ಅಬಕಾರಿ ಮತ್ತು ಸೀಮಾಶುಲ್ಕ ಇಲಾಖೆಯ ನಿರೀಕ್ಷಣಾಧಿಕಾರಿಯಾಗಿ ಆಯ್ಕೆ ಹೊಂದಿದರು. ಬೆಳಗಾವಿ, ಭದ್ರಾವತಿ, ದಾಂಡೇಲಿ ಮತ್ತು ಬೆಂಗಳೂರಿನಲ್ಲಿ ಇಲಾಖೆಯ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತದಲ್ಲಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. 15ನೇ ಆಗಸ್ಟ್ 2017 ಸ್ವಾತಂತ್ರ್ಯೋತ್ಸವದಂದು ಉತ್ತಮ ಅಧಿಕಾರಿಯಾಗಿ ಪುರಸ್ಕಾರ ಹೊಂದಿದ್ದಾರೆ.

## ಜನುಮದಾತರು

ಪ್ರೇಮ ಕಾಮಗಳಿಂದ
ನನಗಾಗಿ ಹಂಬಲಿಸಿ
ಹಗಲಿರುಳೆನ್ನದೆ
ಹೆಗಲಿಲ್ಲಿ ಹೊತ್ತು ಬೆಳೆಸಿ
ನುಡಿಯಲು ಭಾಷೆ
ಬದುಕಲು ನಡತೆಯ ಕಲಿಸಿ
ಸಹನೆ ವಿನಯತೆ ನಾಡಿ
ನಾಲಿಗೆಯಲಿ ಬೇರೂರಿಸಿ
ಪ್ರತಿಕ್ಷಣ ರಕ್ಷಿಸಿ ಶಿಕ್ಷಣದಿ
ಪೋಷಿಸಿ ಹೆಮ್ಮರವಾಗಿಸಿ
ಮನೆಯ ನಿರ್ಮಿಸಿ ಸೊಸೆಯ
ಸೇರಿಸಿ ಮೊಮ್ಮಕ್ಕಳಾಡಿಸಿ ನಲಿಸಿ
ತಮ್ಮೆಲ್ಲ ಬಾಳ ಗಳಿಕೆಯ
ಬಳಸದೇ ನನಗಾಗಿ ಉಳಿಸಿ
ವೃದ್ಧಾಪ್ಯದಲಿ ಅಲ್ಪ ಸೇವೆ
ಗೈವ ಅವಕಾಶ ಕರುಣಿಸಿ
ನೀನಾದೆ ಅಪ್ಪ ಕಲ್ಪವೃಕ್ಷ
ಅಮ್ಮ ನೀ ಕಾಮಧೇನು.

## ತುಂಗೆ – ಭದ್ರೆ

ತುಂಗೆ ನೀ ದಕ್ಷಿಣದ ಗಂಗೆ
ನಿನ್ನ ಸೇವನ ಅಮೃತಪಾನ
ನಿನ್ನೊಲುಮೆ ಕಾವ್ಯಸ್ಫೂರ್ತಿಗೆ
ಚಿಲುಮೆ ಎಂತೆಲ್ಲ
ಬಣ್ಣಿಪ ಓ ಕವಿಯ
ಕಣ್ಣೆ !
ಬೇಗುದಿಯ ನುಂಗುತ್ತ
ಕಾಗದವ ಕೊಡುತಿಹ
ತುಕ್ಕು ಒಡಲಲಿ ಅಡಗಿ
ಉಕ್ಕು ಹಡೆಯುತಲಿದೆ
ವಿಷದ ಕಲ್ಮಷ ಹೀರುತ್ತ
ಸಕ್ಕರೆಯ ಬೀರುತಿಹ
ಸುಕ್ಕಾಗಿ ಪಕ್ಕದಲ್ಲೇ ಹರಿಯುತಿಹ
ಈ ಭದ್ರೆಯ
ತ್ಯಾಗ ಕಾಣದಷ್ಟು
ನೀ ಕುರುಡೇ ?

## ಬರೀ ಖೋಲಿಯಲ್ಲ

ಬರಿ ಖೋಲಿಯಲ್ಲವೀ ಶಾಲೆ
ಕಲೆಯ ಬಲೆಯು
ಜ್ಞಾನ ಪ್ರಜ್ಞೆ ವಿಜ್ಞಾನ
ವನ್ನು ಪಸರಿಸುವ
ಗುರು ಗೆಳೆಯ ಗ್ರಂಥ
ಗಳನ್ನೊದಗಿಸುವ
ವಿಷಯ ವಿನಯ ವೇಳೆಯ
ಮಹತ್ವ ತಿಳಿಸುವ
ನಿಯಮ ನಡತೆ ನಿಸ್ವಾರ್ಥ
ಪಾಲನೆಯ ಕಲಿಸುವ
ವಿದ್ಯೆ ವಿಜಯ ವ್ಯಕ್ತಿತ್ವ
ದ ಮೊತ್ತ ವಿಕಸಿಸುವ
ಪ್ರಭುತ್ವ ಪ್ರತಿಭೆ ಪ್ರಾಮಾಣಿಕತೆಯ
ನೆಲೆಗಟ್ಟು ರೂಪಿಸುವ
ಯಂತ್ರ ಮಂತ್ರಗಳಿಂದ
ಸಾಧಿಸದ ಕಾರ್ಯತಂತ್ರ
ನಾ ಕಲಿಯುತಿಹೆನಿಲ್ಲಿ.

## ಮುತ್ತಣ್ಣನಿಗೊಂದು ಮಾತು

ಅಣ್ಣ ನಿನ್ನಂತೆ
ಸುಂದರನಾಗಲಾರೆ
ಸದೃಢನಾಗಲಾರೆ
ನಟನಾಗಲಾರೆ
ಗಾಯಕನಾಗಲಾರೆ
ಅಭಿಮಾನಿಗಳ
ಆರಾಧ್ಯ ದೈವನಾಗಲಾರೆ....
ಆದರೆ
ತಂದೆ – ತಾಯಿಯ ಭಕ್ತಿ
ನಾಡು ನುಡಿಯ ಅಭಿಮಾನ
ಬಾಳಿನಲಿ ಸರಳತೆ
ಮಾತಿನಲಿ ಮುಗ್ಧತೆ ತುಂಬಿ
ತುಂಬು ಕೊಡವಾಗಿ
ನಡೆದ ನಿನ್ನ ಬಾಳದಾರಿಯ
ನೆನೆಯದೇ ನಮಿಸದೇ
ನಾನೊಂದು ಕ್ಷಣವೂ
ಇರಲಾರೆ.
(ಡಾ. ರಾಜ್‌ಕುಮಾರ್‌ರವರನ್ನು ಸ್ಮರಿಸುತ್ತಾ)

– ಮಹೇಶ್ ದೇಶಪಾಂಡ

ವಿ.ಸೂ. : ಈ ಕವನವು ಡಿ.ವಿ.ಎಸ್. ಕಾಲೇಜಿನ 1976 ಆಗಸ್ಟ್ ತಿಂಗಳ ವಾಲ್ ಮ್ಯಾಗಜಿನ್‌ನಲ್ಲಿ ಪ್ರಕಟಿಸಲಾಗಿತ್ತು.



## ಸಾಧನೆಯ ಮೇರು ಶಿಖರ – ಡಾ. ಗೀತಾ ಸಾಮಕ್

**ಕುಮಾರಸ್ವಾಮಿ ಎನ್.**
ಅಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ



ಈ ಸುವರ್ಣ ಮಹೋತ್ಸವದ ಶುಭ ಸಂದರ್ಭದಲ್ಲಿ ನಮ್ಮ ವಿಭಾಗದ ಮುಖ್ಯಸ್ಥರಾದ ಡಾ. ಗೀತಾರವರ ಸಾಧನೆಗಳ ಕಿರುಪರಿಚಯವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಡಾ. ಗೀತಾರವರು 1985ರಲ್ಲಿ ತಮ್ಮ ಅಧ್ಯಾಪನ ವೃತ್ತಿಯನ್ನು ಆರಂಭಿಸಿದರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅತ್ಯಂತ ಮೇಧಾವಿಯಾಗಿದ್ದರು ಹಾಗೂ ಅನೇಕ ಸ್ಕಾಲರ್‌ಶಿಪ್‌ಗಳನ್ನು ಮತ್ತು ಪ್ರಶಸ್ತಿಗಳನ್ನು ಪಡೆದಿದ್ದರು.

1998 ರಿಂದ ಸುಮಾರು 3 ವರ್ಷ ಮಣಿಪಾಲ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ಮಾಡಿ 2002ರಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದರು. 2001ರಲ್ಲಿ ನಮ್ಮ ಕಾಲೇಜಿನಲ್ಲಿ ಜೈವಿಕ ತಂತ್ರಜ್ಞಾನ ವಿಭಾಗವನ್ನು ಸ್ಥಾಪಿಸಲು ಪ್ರಮುಖ ಪಾತ್ರ ವಹಿಸಿದ್ದರು. 2005ರಲ್ಲಿ ಭಾರತ ಸರ್ಕಾರದ ಡಿ.ಬಿ.ಟಿ. ಯಿಂದ ಆಯ್ಕೆಯಾಗಿ ಸಾಗರೋತ್ತರ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಆಯ್ಕೆಯಾದ ಕೆಲವೇ ವಿಜ್ಞಾನಿಗಳ ಪೈಕಿ ಇವರೂ ಒಬ್ಬರು ಎಂದು ತಿಳಿಸಲು ಹೆಮ್ಮೆಯಾಗುತ್ತದೆ.

ಮೇ 2008ರಲ್ಲಿ ಅಮೇರಿಕದ ಸ್ಯಾನ್ ಡೀಗೋ ವಿಶ್ವವಿದ್ಯಾಲಯದಲ್ಲಿ ನಡೆದ ವಿಶ್ವಮಟ್ಟದ ವಿಚಾರ ಸಂಕಿರಣದಲ್ಲಿ ಇವರು ಸಂಶೋಧನ ಪ್ರಬಂಧ ಮಂಡಿಸಲು ಆಯ್ಕೆಯಾಗಿ, ಭಾಗವಹಿಸಿ ನಮ್ಮ ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

ಇವರು ಹಲವಾರು ಮೈನರ್ ರೀಸರ್ಚ್ ಪ್ರಾಜೆಕ್ಟ್‌ಗಳಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಸಂಶೋಧನ ಪ್ರಬಂಧಗಳನ್ನು ತಮ್ಮ ವಿದ್ಯಾರ್ಥಿಗಳ ಮೂಲಕವೇ ಅನೇಕ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಂಡಿಸಲು ಅವಕಾಶ ನೀಡಿ ಅವರುಗಳೂ ಖ್ಯಾತಿಯನ್ನು ಪಡೆದು ವಿಜ್ಞಾನಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಅದಲ್ಲದೆ ಭಾರತ ಸರ್ಕಾರದಿಂದ ದೊರೆಯುವ Inspire-Internship Camp ನ್ನು ಆಯೋಜಿಸಿ ಹಲವು ಉದಯೋನ್ಮುಖ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರಾಗಿರುತ್ತಾರೆ.

2004ರಲ್ಲಿ ಯು.ಜಿ.ಸಿ. ಪ್ರಾಯೋಜಿತವಾದ 'DNA : Past, Present and Future' ಎಂಬ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ.

ಈ ಸಂಬಂಧ 2005ರಲ್ಲಿ 'Double Helix' ಎಂಬ ಸಂಶೋಧನ ನಿಘಂಟನ್ನು ಬಿಡುಗಡೆಗೊಳಿಸಿ ಪ್ರಖ್ಯಾತ ವಿಜ್ಞಾನಿ ಪ್ರೊ. ಎಲ್.ಎಸ್. ಶಶಿಧರ, C.C.M.B., Hyderabad ಇವರಿಂದ ವಿಶೇಷ ಉಪನ್ಯಾಸವನ್ನು ಯಶಸ್ವಿಯಾಗಿ ಆಯೋಜಿಸಿದ್ದರು. ಅದಲ್ಲದೆ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಷಯದ ಅಧ್ಯಯನ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಕೋ–ಆರ್ಡಿನೇಟರ್ ಆಗಿ, ವಿಭಾಗದ ಮುಖ್ಯಸ್ಥರಾಗಿ, ಬೇರೆ ವಿಶ್ವವಿದ್ಯಾಲಯಗಳ ಪ್ರಾಣಿಶಾಸ್ತ್ರದ ವಿಭಾಗದ ಬಿ.ಓ.ಇ. ಹಾಗೂ ಬಿ.ಓ.ಎಸ್.ನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಚಿಕಾಗೋ, ಟರ್ಕಿ, ಅಮೇರಿಕದಲ್ಲಿ ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಸಂಶೋಧನ ಪ್ರಬಂಧಗಳನ್ನು ಮಂಡಿಸಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅದಲ್ಲದೇ ಬನಾರಸ್ ವಿಶ್ವವಿದ್ಯಾಲಯ ಮತ್ತು ಇತರೆ ಸಂಸ್ಥೆಗಳಲ್ಲಿ ತಮ್ಮ ಸಂಶೋಧನ ಪ್ರಬಂಧವನ್ನು ಮಂಡಿಸಿರುವುದು ಅವರ ಸಾಧನೆಗೆ ಹಿಡಿದ ಕನ್ನಡಿ. ಅದಲ್ಲದೆ ಸಂಶೋಧನ ಭಿತ್ತಿ ಪತ್ರ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇದಲ್ಲದೇ ರಾಜ್ಯದ ಉದ್ದಗಲಕ್ಕೂ ಸಂಚರಿಸಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ವಿಜ್ಞಾನದ ಬಗ್ಗೆ ಅರಿವು ಮೂಡಿಸಲು ಹಲವು ಬಾರಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಹಲವು ಬಾರಿ ರಾಜ್ಯ ಮಟ್ಟದ ವಿಜ್ಞಾನ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ್ದಾರೆ.

2009 – 2011ರವರೆಗೆ ಅಮೇರಿಕಾದ ಟೆನೆಸ್ಸಿ ವಿಶ್ವವಿದ್ಯಾಲಯ ಮೆಫೆಸಿಸ್ ಎಂಬಲ್ಲಿ ಸಾಗರೋತ್ತರ ಸಂಶೋ ಆಯ್ಕೆಯಾಗಿ, ಮಾನವ ದೇಹದಲ್ಲಿ ಸಣ್ಣ ಕರುಳಿನ ಕ್ಯಾನ್ಸರ್ ರೋಗ ಹಾಗೂ ಲಿವರ್ ಮೇಲೆ ಆಗುವ ದುಷ್ಪರಿಣಾಮ ಕುರಿತು ಮಹತ್ವದ ಸಂಶೋಧನೆಯನ್ನು ಮಾಡಿದ್ದಾರೆ. ಅದಕ್ಕಾಗಿ ಅಮೇರಿಕನ್ ಫಿಸಿಯಾಲಜಿಕಲ್ ಸೊಸೈಟಿಯಿಂದ ಕೊ "ಟಕೇಡ ಸಂಶೋಧನ ಪ್ರಶಸ್ತಿ"ಯನ್ನು 2010ರಲ್ಲಿ ಪಡೆದಿದ್ದಾರೆ.

2011ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ "ಜಿ.ಆರ್.ಜಿ. ಟ್ರಾವೆಲ್ ಅವಾರ್ಡ್"ಗೆ ಭಾಜನರಾಗಿದ್ದಾರೆ.

ಇವರು ಮಂಡಿಸಿದ ಹಲವು ಸಂಶೋಧನ ಪ್ರಬಂಧಗಳು ರಾಷ್ಟ್ರೀಯ, ರಾಜ್ಯ ಹಾಗೂ ಅಂತರ ರಾಷ್ಟ್ರ ನಿಘಂಟುಗಳಲ್ಲಿ ಪ್ರಕಟವಾಗಿ ಬಹುತೇಕ ಎಲ್ಲ ಪ್ರಬಂಧಗಳಿಗೂ ತಜ್ಞರ ಪ್ರಶಂಸೆ ಹಾಗೂ ಉತ್ತಮ ಅಂಕಗಳು ದೊರೆ

ಪ್ರಮುಖವಾಗಿ ನವೆಂಬರ್ 2015 ರಿಂದ ಏಪ್ರಿಲ್ 2017ರ ವರೆಗೆ ಕಾಲೇಜಿನ ಪ್ರಪ್ರಥಮ ಮಹ ಪ್ರಾಂಶುಪಾಲರಾಗಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರು ಹಲವಾರು ಅಭಿವೃದ್ಧಿ ಕಾರ್ಯಗಳ ಮಾಡಿದ್ದಾರೆ. ಅವರ ಮುಂದಾಳತ್ವದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮಹಿಳಾ ಕ್ರೀಡಾಕೂಟ ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಉಡುಪಿ ಜಿಲ್ಲೆಯ ಪಾಂಡೇಶ್ವರ ಎಂಬ ಸಣ್ಣ ಹಳ್ಳಿಯಿಂದ ಬಂದು ಈಗಾಗಲೇ 31 ವರ್ಷಗಳ ಸಾ ಅಧ್ಯಾಪನ ಹಾಗೂ ಸಂಶೋಧನೆಯನ್ನು ನಡೆಸಿ ವಿದ್ಯಾರ್ಥಿಗಳ ಜ್ಞಾನದಾಹವನ್ನು ನೀಗಿಸುತ್ತಿರುವ ಹಾಗೂ ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಕೊಳ್ಳಲು ಫೀ ಕಟ್ಟಲು ಹಾಗೂ ಇನ್ನಿತರೆ ಶೈಕ್ಷಣಿಕ ಅಗತ್ಯಗಳಿಗೆ ಎಲೆಮರೆಯ ಕಾಯಿಯ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಡಾ. ಗೀತಾರವರಿಗೆ ವಿಭಾಗದ ಅಧ್ಯಾಪಕರ ಮತ್ತು ಶಿಷ್ಯಕೋಟಿಯ ನಮನಗಳು. ಅ ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಮತ್ತು ಅಮೂಲ್ಯ ಮಾರ್ಗದರ್ಶನ ನಮಗೆಲ್ಲ ಸದಾ ಲಭಿಸಲಿ ಎಂದು ಆಶಿಸು

---

## ಶಂಕರಘಟ್ಟ

ನೋಡುವೆವೋ ನೋಡುವೆವೋ ಸುಂದರ ಘಟ್ಟ
ಘಟ್ಟದಲ್ಲಿ ಕಾಣುವುದು ವಿಭಿನ್ನ ಮಟ್ಟ
ಮಟ್ಟ ತಲುಪಲು ಹೋಗುವೆವು ಸುಂದರ ಬೆಟ್ಟ
ಸುಂದರ ಬೆಟ್ಟವಯ್ಯ ನಮ್ಮ ಶಂಕರಘಟ್ಟ
ಪರಿಸರವೇ ಒಂದು ಸುಂದರ
ಸುಂದರದಲ್ಲಿ ಒಂದು ಮಂದಿರ
ಮಂದಿರವೇ ನಮ್ಮ ಶಂಕರಘಟ್ಟ
ಅಲ್ಲಿಗೆ ಬಂದು ಸೇರಿದೆ
ನಮ್ಮ ಎನ್.ಎಸ್.ಎಸ್. ಕಾಲೇಜು ಮಟ್ಟ

## ಬಂಡಿ

ಹಳ್ಳಿಯಲ್ಲಿ ಕಾಣುವುದು ಎತ್ತಿನ ಬಂಡಿ
ಸಿಟಿಯಲ್ಲಿ ಕಾಣುವುದು ಇಂಧನ ಬಂಡಿ
ನನ್ನಲ್ಲಿ ಕಾಣುವುದು ಶಿಕ್ಷಣವೆಂಬ ಕಲಿಕೆಯ ಬಂಡಿ

**– ಸುಬ್ರಮಣಿ. ಎಸ್**
ದ್ವಿತೀಯ ಬಿ.ಎ. (ಎಚ್.ಎಸ್.ಕೆ)



# ಇಂದಿನ ವಿಶ್ವದ ವಿಚಿತ್ರಗಳು

**– ನಮಿತಾ ಹೆಚ್.ಎನ್.**
ದ್ವಿತೀಯ ಬಿ.ಸಿ.ಎ,



ನಾವಿರುವ ವಿಶ್ವ ಅರ್ಥವಾಗದಷ್ಟು ವಿಚಿತ್ರವಾಗಿದೆಯೆಂದು ನಮಗೆ ಅನೇಕ ಸಂದರ್ಭಗಳಲ್ಲಿ ಅನಿಸಿರಬಹುದು. ಅದು ಅಸಹಜವೇನಲ್ಲ. ಅಂತಹ ವಿಚಿತ್ರಗಳ ಪುಟ್ಟ ಪಟ್ಟಿ ಇಲ್ಲಿದೆ. ಇದಕ್ಕೆ ಸ್ಫೂರ್ತಿ ಜಾರ್ಜ್ ಕಾರ್ಲಿನ್ ಎಂಬ ಮಹನೀಯರು ಅಂತರ್ಜಾಲದಲ್ಲಿ ಪ್ರಕಟಿಸಿರುವ ಕುತೂಹಲಕಾರಿ ಸಂದೇಶ. ಅವರಿಗೆ ಧನ್ಯವಾದಗಳನ್ನು ಹೇಳೋಣ. ಇದನ್ನು ಓದಿ ನೋಡೋಣ.

* ನಮ್ಮಲ್ಲಿ ಎತ್ತರದ ಕಟ್ಟಡಗಳಿವೆ, ಆದರೆ ಸ್ಫೋಟಿಸುವ ಸ್ವಭಾವಗಳೂ ಇವೆ !
* ರಸ್ತೆಗಳು ವಿಶಾಲವಾಗಿವೆ. ಆದರೆ ದೃಷ್ಟಿಕೋನಗಳು ಸಂಕುಚಿತವಾಗಿವೆ !
* ನಾವು ಹೆಚ್ಚು ಖರೀದಿಸುತ್ತೇವೆ. ಆದರೆ ಕಡಿಮೆ ಉಪಯೋಗಿಸುತ್ತೇವೆ !
* ನಮ್ಮ ಮನೆಗಳು ದೊಡ್ಡದಾಗುತ್ತಿವೆ. ಆದರೆ ಕುಟುಂಬ ಚಿಕ್ಕದಾಗುತ್ತಿದೆ !
* ಅನುಕೂಲಗಳು ಹೆಚ್ಚಿವೆ, ಆದರೆ ಅನುಭವಿಸಲು ಸಮಯವೇ ಇಲ್ಲ !
* ಅಸಾಮಾನ್ಯ ವಿದ್ಯಾರ್ಹತೆಗಳಿವೆ, ಆದರೆ ಸಾಮಾನ್ಯ ಜ್ಞಾನ ಕಡಿಮೆಯಾಗಿದೆ !
* ವಿಷಯ ಸಂಗ್ರಹಣ ಹೆಚ್ಚಾಗಿದೆ, ಆದರೆ ವಿವೇಚನೆ ಕಡಿಮೆಯಾಗಿದೆ !
* ಪರಿಣಿತರು ಹೆಚ್ಚಿದ್ದಾರೆ, ಸಮಸ್ಯೆಗಳು ಹೆಚ್ಚಿವೆ !
* ಔಷಧಿಗಳು ಹೆಚ್ಚಿವೆ, ಆರೋಗ್ಯ ಕಡಿಮೆ ಆಗಿದೆ !
* ನಾವು ಹೆಚ್ಚು ಗಳಿಸುತ್ತೇವೆ. ಆದರೆ ಕಡಿಮೆ ನಗುತ್ತೇವೆ !
* ತುಂಬಾ ವೇಗವಾಗಿ ಹೋಗುತ್ತೇವೆ, ಆದರೆ ತುಂಬಾ ಬೇಗ ಕೋಪಿಸಿಕೊಳ್ಳುತ್ತೇವೆ !
* ರಾತ್ರಿ ತುಂಬಾ ಹೊತ್ತು ಎದ್ದಿರುತ್ತೇವೆ, ಬೆಳಿಗ್ಗೆ ತುಂಬ ಬಳಲಿಕೆಯಿಂದ ಏಳುತ್ತೇವೆ !
* ಕಡಿಮೆ ಓದುತ್ತೇವೆ, ತುಂಬಾ ಟಿವಿ ನೋಡುತ್ತೇವೆ, ಮತ್ತು ಅಪರೂಪಕ್ಕೆ ಪ್ರಾರ್ಥಿಸುತ್ತೇವೆ !
* ನಮ್ಮ ಆಸ್ತಿಪಾಸ್ತಿಯ ಬೆಲೆ ಏರಿದೆ, ಆದರೆ ನಮ್ಮ ಮೌಲ್ಯಗಳೇ ಇಳಿದಿವೆ !
* ಜೀವನೋಪಾಯ ಮಾರ್ಗ ಅರಿತಿದ್ದೇವೆ, ಆದರೆ ಜೀವಿಸುವುದು ಹೇಗೆಂಬುದನ್ನು ಮರೆತಿದ್ದೇವೆ !
* ನಮ್ಮ ಜೀವನಕ್ಕೆ ವರ್ಷಗಳನ್ನು ತುಂಬುತ್ತಿದ್ದೇವೆ, ಆದರೆ ವರ್ಷಗಳಿಗೆ ಜೀವ ತುಂಬುತ್ತಿಲ್ಲ !
* ನಾವು ಚಂದ್ರಲೋಕವನ್ನು ಮುಟ್ಟಿ ಬಂದಿದ್ದೇವೆ, ಆದರೆ ನಮ್ಮ ಕಾಂಪೌಂಡ್ ದಾಟಿ ನೆರೆಯವರನ್ನು ಭೇಟಿಯಾಗಲು ಹೋಗಿಲ್ಲ !
* ನಾವು ಬಹಿರಂಗದಲ್ಲಿ ಗೆಲ್ಲುತ್ತಿದ್ದೇವೆ, ಆದರೆ ಅಂತರಂಗದಲ್ಲಿ ಸೋಲುತ್ತಿದ್ದೇವೆ !
* ಗಾಳಿಯನ್ನು ಶುದ್ಧೀಕರಿಸಿದ್ದೇವೆ, ಆದರೆ ನಮ್ಮ ಆತ್ಮವನ್ನು ಮಲಿನಗೊಳಿಸಿದ್ದೇವೆ !
* ಬರವಣಿಗೆ ಹೆಚ್ಚಾಗಿದೆ, ಆದರೆ ಅರಿವು ಕಡಿಮೆಯಾಗಿದೆ !
* ಹೆಚ್ಚು ಯೋಚಿಸುತ್ತೇವೆ, ಆದರೆ ಕಡಿಮೆ ಸಾಧಿಸುತ್ತೇವೆ !
* ಧಾವಂತ ಪಡುವುದನ್ನು ಕಲಿತಿದ್ದೇವೆ, ಆದರೆ ನಿಧಾನವನ್ನು ಮರೆತಿದ್ದೇವೆ !
* ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದೆ, ಆದರೆ ನೈತಿಕತೆ ಕುಸಿದಿದೆ !
* ಇದು ವಿವಿಧ ಭಕ್ಷಗಳ ಆದರೆ ಕಡಿಮೆ ಜೀರ್ಣಶಕ್ತಿಯ ಕಾಲ !
* ಒಳ್ಳೆ ಲಾಭ ಸಂಪಾದನೆ, ಆದರೆ ಟೊಳ್ಳು ಸಂಬಂಧಗಳ ಕಾಲ !
* ವಿಶ್ವಶಾಂತಿಯ ಬಗ್ಗೆ ಮಾತಾನಾಡುತ್ತೇವೆ, ಆದರೆ ಮನೆಯವರೊಂದಿಗೆ ಕಾದಾಡುತ್ತೇವೆ !
* ಹೆಚ್ಚು ವಿರಾಮವಿದೆ, ಆದರೆ ಕಡಿಮೆ ಆರಾಮವಿದೆ !
* ಗಂಡ ಹೆಂಡರಿಬ್ಬರ ದುಡಿಮೆ ಹೆಚ್ಚಾಗಿದೆ, ಆದರೆ ವಿಚ್ಛೇದನೆಗಳೂ ಹೆಚ್ಚಾಗಿವೆ !
* ನಿದ್ದೆಗೂ – ನಿದ್ದೆಗಡುವುದಕ್ಕೂ, ಬದುಕುವುದಕ್ಕೂ ಕೊನೆಗೆ ಸಾಯುವುದಕ್ಕೂ ಮಾತ್ರೆಗಳೇ ಬೇಕು !

***ಮೇಲಿನ ಸಂಗತಿಗಳು ನಮಗೂ ಅನ್ವಯಿಸುತ್ತದೆಯೋ ? ಯೋಚಿಸಿ ನೋಡೋಣ***

# ಸ್ಮಾರ್ಟ್ ಸಿಟಿ ಮತ್ತು ಸುಸ್ಥಿರ ಅಭಿವೃದ್ಧಿ: ಒಂದು ಅವಲೋಕನ

– ಡಾ. ಎಂ. ವೆಂಕಟೇಶ್, ಸಹ ಪ್ರಾಧ್ಯಾಪ
ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊ



ಅಭಿವೃದ್ಧಿ ಎನ್ನುವ ಪದ ಪ್ರಪಂಚದ ಎಲ್ಲ ಕಡೆ ಅಗಾಧವಾಗಿ ಬಳಕೆಯಲ್ಲಿದೆ. ಜನರ ಯೋಗಕ್ಷೇಮ ಹೆಚ್ಚಿಸುವ ಕಾರಣಕ್ಕಾಗಿ ಪ್ರಜಾಪ್ರತಿನಿಧಿಗಳಿಗೆ ಈ ಪದ ಬೀಜಮಂತ್ರವಾಗಿದೆ. ಮಾನವನ ಬದುಕನ್ನು ಹಸನಾಗಿಸುವ ಕಾರ್ಯ ಚಟುವಟಿಕೆಗಳ ಮಾರ್ಗವೇ ಅಭಿವೃದ್ಧಿ. ಈ ಅಭಿವೃದ್ಧಿ ಪರಿಕಲ್ಪನೆ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಿಕೊಂಡಿದೆ. ಪ್ರಸ್ತುತ ಲೇಖನದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಮಾತ್ರ ಅಡಕಗೊಳಿಸಿಕೊಳ್ಳಲಾಗಿದೆ. ವಿಶ್ವದ ಪರಿಪೇಕ್ಷದಲ್ಲಿ ಆರ್ಥಿಕಾಭಿವೃದ್ಧಿಯು ಇಂದು ಪ್ರಮುಖ ಸ್ಥಾನ ಪಡೆದಿದೆ.

ಕೈಗಾರಿಕಾಕರಣದ ಆರಂಭದಲ್ಲಿ ಜನರು ಕೃಷಿ ಕ್ಷೇತ್ರದಿಂದ ಕೈಗಾರಿಕೆಗಳತ್ತ ವಲಸೆ ಬರತೊಡಗಿದರು. ಈ ಕೈಗಾರಿಕಾಭಿವೃದ್ಧಿಯಿಂದಲೇ ನಗರೀಕರಣ ತೀವ್ರಗೊಂಡಿತು. ಬಿಡಿಬಿಡಿಯಾಗಿ ಬೇಸಾಯ ವಲಯದ ಜನರು ಉದ್ಯೋಗ ಪಡೆಯುವ ಅಭಿಲಾಷೆಯಿಂದ ನಗರಗಳತ್ತ ಮುಖ ಮಾಡಿದರು. ಪ್ರಾರಂಭದ ಹಂತದಲ್ಲಿ ವಿರಳ ನಗರಗಳು ಬೆಳೆಯತೊಡಗಿದವು. ಆನಂತರ ತಾಂತ್ರಿಕ ಪ್ರಗತಿಯಿಂದ ಗ್ರಾಮಗಳನ್ನು ತೊರೆದು ನಗರಗಳಿಗೆ ವಲಸೆ ಬರುವ ಸಂಖ್ಯೆ ಹೆಚ್ಚಾಯಿತು. ಇದರ ಪರಿಣಾಮವಾಗಿ ನಗರಗಳಲ್ಲಿ ಜನರ ದಟ್ಟಣೆಯಿಂದ ಹಲವಾರು ಸಮಸ್ಯೆಗಳು ಉಂಟಾದ ಪರಿಸರ ಮಾಲಿನ್ಯ, ಕೊಳಚೆ ಪ್ರದೇಶಗಳ ಹೆಚ್ಚಳ, ಸಾರಿಗೆ ವ್ಯವಸ್ಥೆ ಸಮಸ್ಯೆ, ಜನರ ಆರೋಗ್ಯದ ಮೇಲೆ ಪ್ರತಿಕೂ ಪರಿಣಾಮಗಳು, ತ್ಯಾಜ್ಯವಿಲೇವಾರಿ ಸಮಸ್ಯೆ ಮೊದಲಾದವುಗಳು ಆರ್ಥಿಕ ತಜ್ಞರ ಯೋಜನಾಕಾರರ ಪರಿಸರವಾದಿಗಳ ಆತಂ ಕಾರಣವಾಯಿತು.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಅವಧಿಯಲ್ಲಿ ನಗರಗಳ ಬೆಳವಣಿಗೆ ಮಿತಿಮೀ ಬೆಳೆಯಿತು. ಹಳ್ಳಿಗಳಿಂದ ಪಟ್ಟಣ ಮತ್ತು ನಗರಗಳಿಗೆ ವಲಸೆ ಬರುವವರ ಸಂಖ್ಯೆ ಸ್ಫೋಟದ ರೂಪ ಪಡೆಯಿತು. 199 ದಶಕದಲ್ಲಿ 'ಸ್ಮಾರ್ಟ್‌ಸಿಟಿ ಬೆಳವಣಿಗೆ' ಎನ್ನುವ ಪರಿಕಲ್ಪನೆ ಉಗಮವಾಯಿತು. ನಗರಗಳ ಅವ್ಯವಸ್ಥೆ ಮತ್ತು ಸಮಸ್ಯೆ ಪರಿಹಾರ ಕಂಡುಕೊಳ್ಳಲು 'ಇಂಟಿಲಿಜೆಂಟ್ ಸಿಟಿ' ಎಂಬ ಪರಿಭಾವನೆ ಹುಟ್ಟಿಕೊಂಡಿತು. ಇಂದು ಜಾಗತಿಕ ತಾಪಮಾ ಹೆಚ್ಚಳ, ಆಮ್ಲ ಮಳೆ, ಹಸಿರು ಮನೆ ಪರಿಣಾಮ, ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ಧಮಾಲಿನ್ಯ, ಭೂಮಾಲಿನ್ಯ ಕ್ಷ ಮಾಲಿನ್ಯ ಮೊದಲಾದವುಗಳ ಮೂಲ ನಗರಗಳೇ ಆಗಿವೆ. ಇದರಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮಗಳುಂಟ ಮನುಷ್ಯನ ಬದುಕು ಅವನತಿಯತ್ತ ಸಾಗುತ್ತದೆ. ಬಳಕೆದಾರರ ಕೊಳ್ಳುಬಾಕುತನದಿಂದ ಅಸ್ಥಿರ ಅಭಿವೃದ್ಧಿಗೆ ದಾರಿಯಾಗು ಈ ಎಲ್ಲಾ ಹಾನಿಕಾರಕ ಸಂಗತಿಗಳನ್ನು ಮನಗಂಡ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಯೋಜನಾಕಾರರು, ಆರ್ಥಿಕ ತಜ್ಞ ಸಮುದಾಯದ ಪ್ರತಿನಿಧಿಗಳೂ 'ಸ್ಮಾರ್ಟ್ ಸಿಟಿ' ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ.

ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ ಸಾಧನಗಳು ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಗತಿಯಾಗುತ್ತಿರುವುದನ್ನೇ 'ಸ್ಮಾ ಸಿಟಿ' ಕಾರ್ಯಕ್ಕೆ ಬಳಕೆ ಮಾಡಿಕೊಂಡು ಜನರ ಸಹಭಾಗಿತ್ವದಲ್ಲಿ ಅವ್ಯವಸ್ಥೆಯಲ್ಲಿರುವ ನಗರಗಳನ್ನು ಸುವ್ಯವಸ್ಥೆಗೊಳಿಸ ಕ್ರಿಯಾ ಯೋಜನೆ ಸಿದ್ಧಗೊಂಡಿದೆ. ಖಾಸಗೀ-ಸಾರ್ವಜನಿಕ ಒಡಂಬಡಿಕೆಗಳ ಮೂಲಕ ಸುಚಿನಗರಗಳ ಪರಿವರ್ತ ಚಾಲನೆ ಸಿಕ್ಕಿದೆ. ಭಾರತ ಸರ್ಕಾರವು ಸ್ಮಾರ್ಟ್‌ಸಿಟಿಗಳನ್ನು ಆಯ್ಕೆ ಮಾಡಿಕೊಂಡು 98 ಸಾವಿರ ಕೋಟಿ ರೂ.ಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿದೆ. ನಗರಾಭಿವೃದ್ಧಿ ಉನ್ನತಾಧಿಕಾರಿ ಸಮಿತಿಯ ಪ್ರಕಾರ ಮುಂದಿನ 20 ವರ್ಷಗ ನಗರಾಭಿವೃದ್ಧಿಗಾಗಿ ಒಟ್ಟು 7 ಲಕ್ಷ ಕೋಟಿ ರೂಪಾಯಿಗಳ ಅವಶ್ಯಕತೆಯನ್ನು ಅಂದಾಜುಮಾಡಿದೆ. ಪ್ರತಿ ವರ್ಷವೂ ಸಾವಿರ ಕೋಟಿ ರೂ.ಗಳ ಅಗತ್ಯವಿದೆ ಎಂದು ತಿಳಿಸಿದೆ.

ಸ್ಮಾರ್ಟ್‌ಸಿಟಿ ಕಾರ್ಯಕ್ರಮದಲ್ಲಿ ಡಿಜಿಟಲೀಕರಣಕ್ಕೆ ಮೊದಲ ಸ್ಥಾನ ನೀಡಲಾಗಿದೆ. ಮಾಹಿತಿ ತಂತ್ರಜ್ಞಾ ಕ್ರಾಂತಿಯಿಂದ ಎಲ್ಲ ಕ್ಷೇತ್ರಗಳನ್ನು ಒಗ್ಗೂಡಿಸಿ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸಿ ಆ ಮೂ ಜನಸಾಮಾನ್ಯರನ್ನು ಸಮರ್ಪಕವಾಗಿ ತೊಡಗಿಸಿಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.



ಎರಡನೇ ಸ್ಥಾನದಲ್ಲಿ ಪರಿಸರ ಸಮತೋಲನ ಮಹತ್ವವನ್ನು ಪಡೆದುಕೊಂಡಿದೆ. ನೈರ್ಮಲೀಕರಣದ ಮೂಲಕ ನಗರಗಳ ಸೌಂದರ್ಯವನ್ನು ಹೆಚ್ಚಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಇಚ್ಛಿಸಲಾಗಿದೆ. ಈಗಾಗಲೇ ಅಸ್ಥಿರವಾಗಿರುವ ಅಭಿವೃದ್ಧಿ ಮಾದರಿಯನ್ನು ಸುಸ್ಥಿರಗೊಳಿಸಲು ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೂಲಸೌಕರ್ಯಗಳ ನವೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಈಗಾಗಲೇ ಇರುವ ಸೌಕರ್ಯಗಳನ್ನು ಧೀರ್ಘಕಾಲ ಬಾಳಿಕೆ ಬರುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳಲು ಒತ್ತು ನೀಡಲಾಗಿದೆ. ಉದಾಹರಣೆಗೆ ರಸ್ತೆ ಇತ್ಯಾದಿ. ಜನರ ಸಹಭಾಗಿತ್ವದಲ್ಲಿ ಈ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಧ್ಯೇಯವಿದೆ. ಉತ್ತಮ ಆಢಳಿತ ವ್ಯವಸ್ಥೆ ಬಹಳ ಮುಖ್ಯ. ಈ ದಿಸೆಯಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಸೂಚಿಸಲಾಗಿದೆ. ಯೋಜನೆಯ ಅನುಷ್ಠಾನದಲ್ಲಿ ಮೇಲುಸ್ತುವಾರಿ ಮತ್ತು ನಿರ್ವಹಣೆಗೆ ಗಮನ ನೀಡಲು ಕ್ರಮ ವಹಿಸಲಾಗಿದೆ.

ಕಂಪ್ಯೂಟರೀಕರಣದ ಅನುಕೂಲತೆಗಳನ್ನು ಬಳಸಿಕೊಂಡು ಜ್ಞಾನ ಪ್ರಸಾರ ಮಾಡಿ ಮಾಹಿತಿಯನ್ನು ಜನಸಾಮಾನ್ಯರಿಗೆ  ತಲುಪಿಸುವುದು ಪ್ರಮುಖ. ಅನಗತ್ಯವಾಗಿ ಫಲಾನುಭವಿಗಳು ವಿವಿಧ ಕೆಲಸಗಳಿಗಾಗಿ ಅನೇಕ ಇಲಾಖೆಗಳಿಗೆ ಸುತ್ತುವುದನ್ನು ಕಡಿಮೆ ಮಾಡಿ ಎಲ್ಲ ಪಾವತಿಗಳನ್ನು, ಅಗತ್ಯ ಅರ್ಜಿಗಳನ್ನು ಅಂತರ್ಜಾಲದ ಮೂಲಕವೇ ನೆರವೇರಿಸಲು ಕ್ರಮ ರೂಪಿಸಲಾಗಿದೆ.

ಇಂಧನ ಮಿತವ್ಯಯ ಸಾಧಿಸಲು ಉಪಗ್ರಹ ಆಧಾರಿತ ನಿಯಂತ್ರಿತ ಯೋಜನೆಯನ್ನು ಜಾರಿಗೊಳಿಸಿ ಆ ಮೂಲಕ ಎಲ್ಲ ವರ್ಗದ ಜನರು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನೇ ಬಳಸುವಂತೆ ಪ್ರೇರೇಪಿಸಲು ಯೋಜನೆ ಜಾರಿಗೊಳಿಸಲಾಗಿದೆ. ಪಾದಚಾರಿಗಳಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸಲು ಮತ್ತು ಸೈಕಲ್ ಬಳಕೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಈಗಾಗಲೇ ಮೈಸೂರಿನಲ್ಲಿ 'ಟ್ರಿನ್ ಟ್ರಿನ್' ಯೋಜನೆಯನ್ನು ಮಾದರಿಯಾಗಿ ಅನುಷ್ಠಾನಗೊಳಿಸಲಾಗಿದೆ.

ಸ್ಮಾರ್ಟ್‌ಸಿಟಿ ಪರಿಕಲ್ಪನೆ ಮೇಲ್ನೋಟಕ್ಕೆ ಸುಂದರವಾಗಿ ಕಂಡರೂ ಆಂತರಿಕವಾಗಿ ಅನೇಕ ಅಡ್ಡಿ ಆತಂಕಗಳಿರುವುದು ಕಂಡುಬರುತ್ತಿದೆ. ಇಡೀ ವಿಶ್ವದಲ್ಲೇ ಪರಿಸರ ಮಾಲಿನ್ಯದಿಂದ ಸುಮಾರು 25 ಲಕ್ಷ ಜನರು ಪ್ರತಿ ವರ್ಷ ಭಾರತದಲ್ಲಿ ಗಣನೀಯ ಸಂಖ್ಯೆಯಲ್ಲಿ ಸಾವಿಗೀಡಾಗುತ್ತಿರುವುದು ದುರಂತವೇ ಸರಿ. ಸಾಧಾರಣ ಮಳೆ ಬಂದರೂ ನಮ್ಮ ರಾಜಧಾನಿ ಬೆಂಗಳೂರು ತತ್ತರಗೊಳ್ಳುವುದು ಆತಂಕದ ಸಂಗತಿ. ರಾಷ್ಟ್ರದ ರಾಜಧಾನಿ ದೆಹಲಿ ವಾಯು ಮಾಲಿನ್ಯದಿಂದ ಜರ್ಜರಿತಗೊಂಡಿದೆ. ಈ ಎಲ್ಲ ಸನ್ನಿವೇಶಗಳನ್ನು ಅವಲೋಕನ ಮಾಡಿದರೆ ಸ್ಮಾರ್ಟ್‌ಸಿಟಿ ಕ್ರಿಯಾಯೋಜನೆ ಅಗತ್ಯವೆನಿಸುತ್ತದೆ. ಆದರೆ ಭಾರತದ ಜನರ ನಾಡಿಮಿಡಿತ ರೂಡಿ ಸಂಪ್ರದಾಯ, ಆಚಾರ ವಿಚಾರ, ಜಿಡ್ಡುಗಟ್ಟಿದ ಮನೋವರ್ತನೆ ಈ ಅಭಿಯಾನವನ್ನು ಸಫಲಗೊಳಿಸುತ್ತದೆಯೇ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

ಭ್ರಷ್ಟಾಚಾರದ ಕೂಪದಲ್ಲಿ ತೊಳಲಾಡುತ್ತಿರುವ ಜಡವ್ಯವಸ್ಥೆಯನ್ನು ಸರಿದಾರಿಗೆ ತರಲು ಸಾಧ್ಯವೇ ಎನ್ನುವುದು ಮುಖ್ಯ. ಕಾನೂನುಗಳನ್ನು ನಿಯಮ ನಿರ್ಬಂಧಗಳನ್ನು ಗಾಳಿಗೆ ತೂರಿ ಸ್ವಾರ್ಥದ ಮೂಲಕ ಕಳಪೆ ಕಾಮಗಾರಿಗಳನ್ನು ಮತ್ತೆ ಮುಂದುವರಿಸಿದರೆ ಸ್ಮಾರ್ಟ್ ಎನ್ನುವ ಪದಕ್ಕೆ ಅರ್ಥಬರುತ್ತದೆಯೇ ? ಜನರ ಸಹಭಾಗಿತ್ವ ಮುಖ್ಯವೆಂದು ಯೋಜನೆಯನ್ನು ರೂಪಿಸಿದ್ದರೂ ಅಧಿಕಾರಿ ವರ್ಗ ಜನರೊಂದಿಗೆ ಸೇರಿ ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಾರೆಯೇ ?. ಹಂತ ಹಂತವಾಗಿ ಕಂತುಗಳ ರೂಪದಲ್ಲಿ ಹಣ ಬಿಡುಗಡೆಯಾದರೆ ಮೊದಲ ಕಾಮಗಾರಿ ಮತ್ತೆ ಹಾನಿಯಾಗುವ ಸಂಭವವಿರುತ್ತದೆ. ಭಾರತದ ಎಲ್ಲ ನಗರಗಳ ಅಭಿವೃದ್ಧಿಗೆ ಅಗತ್ಯವಾದ ಹಣಕಾಸಿನ ಪೂರೈಕೆ ಹೇಗೆ ಸಾಧ್ಯ ಎನ್ನುವುದು ಒಂದು ಮುಖ್ಯ ಪ್ರಶ್ನೆ.

ಆದರೂ ಈ ಕ್ರಿಯಾಯೋಜನೆ ಇನ್ನು ಯೋಜನೆ ಹಂತದಲ್ಲಿದ್ದು ಮುಂದೆ ಯಾವ ತಿರುವುಗಳನ್ನು ಪಡೆಯುತ್ತದೆ ಎಂಬುದನ್ನು ಕಾದುನೋಡಬೇಕು. ಜನರೂ ತಮ್ಮ ತನು, ಮನ, ಧನವನ್ನು ಅರ್ಪಿಸಲು ಸಿದ್ಧರಾಗುವುದು ಅಗತ್ಯವೆನಿಸುತ್ತದೆ.

# "ಜೋಗಿ ಮರಡಿ" -ಕಾದಂಬರಿಯಲ್ಲಿ ಪ್ರಾದೇಶಿಕತೆ

- ಎಸ್.ಎಸ್. ಬಜಂತ್ರಿ, ಎಂ.ಎ., ಎಂ.ಫಿ
ಗ್ರಂಥಾಲಯ ವಿಭಾ



"ಜೋಗಿ ಮರಡಿ" ದು. ನಿಂ. ಬೆಳಗಲಿ ಅವರ ಒಂದು ಪ್ರಾದೇಶಿಕ ಕಾದಂಬರಿ. ಪ್ರಾದೇಶಿಕ ಕಾದಂಬರಿಯಲ್ಲಿ ಯಾವುದೇ ವಿಶಿಷ್ಟ ಪ್ರದೇಶ ಇಲ್ಲವೆ ಯಾವುದಾದರೊಂದು ಹಳ್ಳಿಯ ಬದುಕಿನ ವಿವೇಚನೆ ಇರುತ್ತದೆ. ಪ್ರಾದೇಶಿಕ ಕಾದಂಬರಿಗಳಲ್ಲಿ ಬರುವ ಘಟನೆಗಳು ಪ್ರಾದೇಶಿಕತೆಗೆ ಸಂಬಂಧಿಸಿದ್ದರೂ ಕೂಡಾ ಅವು ತೋರುವ ಸತ್ಯ ಸಾರ್ವತ್ರಿಕವಾದದ್ದು. ಕೆಲವೊಂದು ಭೂ ಪ್ರದೇಶದ ಜನಜೀವನದ ಒಂದು ಭಾಗವನ್ನು ಮಾತ್ರ ಚಿತ್ರಿಸಿದರೆ ಅದು ಪ್ರಾದೇಶಿಕ ಕಾದಂಬರಿಯಾಗಲಾರದು. ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿಯೂ ಪರಿಚಲನೆಗೊಳ್ಳುವ ಸಮಸ್ತ ಜೀವನವನ್ನು ಚಿತ್ರಿಸಿದಾಗ ಮಾತ್ರ ಅದು ಪ್ರಾದೇಶಿಕ ಕಾದಂಬರಿಯಾಗುತ್ತದೆ.

ಪ್ರಾದೇಶಿಕ ಕಾದಂಬರಿಯ ವ್ಯಾಖ್ಯೆಯನ್ನು ಕೊಡುವುದು ಬಹಳ ಕಠಿಣವಾದುದು. ಅನೇಕ ವಿಮರ್ಶಕರು ಪ್ರಾದೇ ಕಾದಂಬರಿಯ ವ್ಯಾಖ್ಯೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಯಾವ ಕಾದಂಬರಿಗಳಲ್ಲಿ ಯಾವುದೇ ವಿಶೇಷ ಪ್ರದೇ ಜನಜೀವನದ ಸಮಗ್ರ ಚಿತ್ರಣ ಒಳಗೊಂಡಿರಬೇಕು. ಭಾಷೆ, ವೇಷ, ಭೂಷಣ, ಆರ್ಥಿಕ ಜೀವನ, ಜಾತಿಗಳ ಪರಿ ಸಂಬಂಧ, ಸಾಂಸ್ಕೃತಿಕ, ಧಾರ್ಮಿಕ ವಿಕಾಸ, ಇತಿಹಾಸ, ಕಲೆ, ಶಿಕ್ಷೆ, ದೀಕ್ಷೆ ಮುಂತಾದವುಗಳ ವಿಸ್ತ ನಿರೂಪಣೆಯಿರುತ್ತದೆಯೋ ಅದು ಪ್ರಾದೇಶಿಕ ಎನ್ನಿಸಿಕೊಳ್ಳುತ್ತದೆ.

ಪ್ರಾದೇಶಿಕತೆ ಅನ್ನುವುದು ಆಧುನಿಕ ಕಾದಂಬರಿ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಅಂಗವಾಗಿದೆ. "ಪ್ರಾದೇಶಿಕ" ಶಬ್ದದ ಉತ್ಪತ್ತಿ "ಪ್ರದೇಶ"ದಿಂದಾಗಿದೆ.

ಪಂಪನ ನಂತರ ಕುವೆಂಪು ಎಂಬ ಮಾತಿಗೆ ಸತ್ಯವಾಗಿರುವ ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾರಂತರ ಮ ಮಣ್ಣಿಗೆ ರಾವಬಹದ್ದೂರರ ಗ್ರಾಮಾಯಣ ಮಿರ್ಜಿ ಅಣ್ಣರಾಯರ ನಿಸರ್ಗ ಅದರಂತೆ ದು.ನಿಂ. ಬೆಳಗಲಿ ಅವರ ಜೋ ಮರಡಿ ಹೀಗೆ ಪ್ರಾದೇಶಿಕ ಚಿತ್ರಣವನ್ನು ಕೊಡುವ ಕನ್ನಡ ಶ್ರೇಷ್ಠ ಕಾದಂಬರಿಗಳನ್ನು ಇಲ್ಲಿ ಸಂಕ್ಷಿಪ್ತವಾ ನೆನಪಿಸಿಕೊಳ್ಳಬಹುದು.

"ಜೋಗಿ ಮರಡಿ" ಒಂದು ಕಾಡು ಹಳ್ಳಿಯ ಜೀವನ ಚಿತ್ರಣವಾಗಿದೆ. ಸುಖ-ನೆಮ್ಮದಿಗಳ ತಾಣವಾಗಿದ್ದ ಹಳ್ಳಿ ಇಂದು ಹದಗೆಡುತ್ತಿದೆ. ಸೃಷ್ಟಿ-ಸೌಂದರ್ಯಗಳ ತಾಣವಾಗಿದ್ದ ಹಳ್ಳಿಗಳು, ಹಳ್ಳಿಗರ ಮನೋದೃಷ್ಟಿ ಬದಲಾ ಬಲಿಯಾಗುತ್ತಿರುವ ಜನರ ಗೋಳಿನ ಕಥೆ. ಕಾದಂಬರಿಕಾರರೇ ಹೇಳುವಂತೆ ಈ ಕಾದಂಬರಿಯ ಕಥೆ- ಉ ಕರ್ನಾಟಕದ ಒಂದು ಪ್ರಾತಿನಿಧಿಕ ಊರು "ಜೋಗಿ ಮರಡಿ"ಯದ್ದು.

ಕಾದಂಬರಿಯ ಪ್ರಾರಂಭ "ಹೆದ್ದಾರಿಯನ್ನು ಅಡ್ಡದಾಟ ಎಡದಂಡೆಯ ಕಾಲುವೆಯ ಬಲಪಕ್ಕದ ರಸ್ತೆಯು ದಕ್ಷಿಣಕ್ಕೆ ಒಂದೇ ಮೈಲು ಒಳಗೆ ಹೋದರೆ ಸಾಕು, ಚಹದ ಬಸಿಯ ಆಕಾರದಲ್ಲಿ ವಿಶಾಲವಾದ ತಗ್ಗು ಪ್ರದೇಶಗ ಮಲ್ಲಿಕಾರ್ಜುನ ಗುಡಿಯ ಶಿಖರದ ಕಲಶ, ಬಿರಾದಾರ ರಾಚಪ್ಪನ ಅಟ್ಟದ ಮನೆಯ ಕೆಂಪು ಹೆಂಚು, ಇನ್ನೂ ದೂರ ಊರು ಪಶ್ಚಿಮ ದಿಕ್ಕಿಗೆ ಕೆಳಭಾಗದಲ್ಲಿ ರಾಯಗೌಡರ ವಾಡೆ, ವಾಡೆಯ ಅಂತಸ್ತಿನ ಬಿದ್ದಭಾಗದಲ್ಲಿ ನಿಂತ ಮ ಕಮಾನುಗಳು, ಕುರುಬರ ಬೀರನ ಕುರಿದೊಡ್ಡಿ ಬೇಲಿ, ಎರಡು ಕೋಣೆಗಳ ಹೆಂಚು ಹಾರಿ ಹೋಗಿ ಜರಡಿಯ ಮಾಳಿಗೆಯ ಪ್ರಾಥಮಿಕ ಶಾಲೆ, ಅತ್ತಿತ್ತ ಹಬ್ಬಿದ್ದ ಕಣಿಕೆ ಬಣವೆ, ಕುಳ್ಳು, ಹೊಟ್ಟಿನ ದೊಡ್ಡಿಗಳು, ಕವಣಿ ಕಲ್ಲಿನ ಅಳತೆ ದೂ ಹೊಲಗೇರಿಯ ಗುಡಿಸಲುಗಳು ಕಣ್ಣಿಗೆ ಎದ್ದು ಕಾಣುವಂತೆ, ಇನ್ನೂ ಊರ ಹತ್ತಿರ ಹೋದಹಾಗೆ ಸಂದಿಗೊಂದಿಗಳ ದ ಮೊಟಕಾಗಿ, ಮಾಯವಾಗಿ ಮಣ್ಣಿನ ಮಾಳಿಗೆಯ ಮನೆಗಳು ಗೋಚರಿಸುತ್ತವೆ ಎಂದು ಹೇಳುವಲ್ಲಿ ಉತ್ತರ ಕರ್ನಾ ಹಳ್ಳಿಯೊಂದರ ನೈಜ ಚಿತ್ರಣವಾಗಿದೆ.



"ಜೋಗಿ ಮರಡಿ" ಎಂಬ ಹೆಸರಿನ ಗ್ರಾಮದ ಬಗ್ಗೆ ವಿವರಿಸುತ್ತ-ಬಹಳ ದಿನಗಳ ಹಿಂದೆ ಊರ ಬೆಟ್ಟದಡಿ ಒಬ್ಬ ಸನ್ಯಾಸಿ ವಾಸವಾಗಿದ್ದನಂತೆ. ಆತ ಸಿದ್ಧ ಪುರುಷ ಆತನ ಮಾತುಗಳು ಸತ್ಯವಾಗಿರುತ್ತಿದ್ದವಂತೆ. ಆ ಜೋಗಿಯು ವಾಸಿಸುತ್ತಿದ್ದ ಮೊರಡಿ ಪ್ರದೇಶಕ್ಕೆ "ಜೋಗಿ ಮರಡಿ" "ಜೋಗಿ ಮಡ್ಡಿ" ಎಂದು ಜನರು ಕರೆಯುತ್ತಿದ್ದರು. ಅಲ್ಲಿ ಜನವಸತಿಯಾಗಿ ಒಂದು ಹಳ್ಳಿಯಾಗಿ ಮಾರ್ಪಟ್ಟಾಗ ಆ ಗ್ರಾಮಕ್ಕೆ "ಜೋಗಿ ಮರಡಿ" ಎಂಬ ಹೆಸರು ಬಂತು ಎಂದು ಆ ಊರಿನ ಕಾಕಾ ಹೇಳಿದನೆಂದು ಹೇಳಿದ್ದಾರೆ. ಈಗಲಾದರೂ ಗುಡ್ಡದ ಅಡಿಯಲ್ಲಿ ಮಾವಿನ ತೋಪಕ್ಕೆ ಹೊಂದಿಕೊಂಡು ಒಂದು ಚಿಕ್ಕಗುಹೆ ತೋರಿಸಿ ಅದೇ ಸನ್ಯಾಸಿ ವಾಸಿಸುವ ಸ್ಥಳವೆಂದು ಕಾಕಾನ ಕಥೆಗೆ ಪುಷ್ಟಿಕೊಡುವಂತೆ ಹೇಳುತ್ತಾರೆ. ಈಗ ಆ ಗುಹೆ ಪಕ್ವ ವಯಸ್ಸಿನ ದನಗಾಹಿಗಳಿಗೆ, ಪ್ರೌಢ ಕಳ್ಳ ಪ್ರಣಯಿಗಳಿಗೆ ಕಾಮಕ್ರೀಡಾ ಸ್ಥಳವಾಗಿದೆ. ಇಲ್ಲಿ ಕಾದಂಬರಿಕಾರರು ಹಳ್ಳಿಯಲ್ಲಿ ಇಂದು ನೆಡೆಯುವ ಕೃತ್ಯಗಳ ಸತ್ಯದರ್ಶನ ಮಾಡಿಸುತ್ತಾರೆ.

"ಹೆದ್ದಾರಿಗೆ ಹೊಂದಿಕೊಂಡಂತೆ ಕಡೆ ಮನೆ ಈರೇಶ ಒಂದು ಚಹದ ಅಂಗಡಿ ನಡೆಸುತ್ತಾನೆ. ಎರಡು ದಿಂಡು, ನಾಲ್ಕು ಕಾಲುಗಳ ನೆಟ್ಟು ಅವುಗಳ ಸುತ್ತ ಕಣಿಕೆ ಕಟ್ಟಿ ಮೇಲೆ ಹುಲ್ಲು ಹೊದಿಸಿದ್ದಾನೆ. ಬೆಂಕಿಯ ಅಪಾಯಕ್ಕೆ ಈಡಾಗಬಾರದೆಂದು ಕಣಿಕೆಗೆ ಸೆಗಣಿ ರಾಡಿ ಸಾರಿಸಿ ಗೋಡೆಯಂತೆ ಭದ್ರಪಡಿಸಿದ್ದಾನೆ. ಬೆಳಿಗ್ಗೆ ಒಂತಾಸು ಹೊತ್ತೇರಿ ಒಂತಾಸು ಕಿಟ್ಲಲಿಗಳಲ್ಲಿ ಚಹಾ ಸೋಸಿದರೆ, ಸಂಜೆ ಐದಾರು ಗಂಟೆಗಳವರೆಗೆ ಮತ್ತು ಒಂದೆರಡು ಸಲ ಸೋಸಬಹುದಷ್ಟೆ; ಬಾಯಿ ಖಾರ ಮಾಡಿಕೊಳ್ಳಲು ಚುರುಮುರಿ-ಚೂಡಾ, ಅಪರೂಪವಾಗಿ ಅವಲಕ್ಕಿ-ಚೂಡಾ, ಭಜಿ ಮಾಡಬಹುದು. ಅತ್ತಿತ್ತ ಕರ್ರಗೆ ಹಿಡಿದ ಕಪಾಟಿನ ತಳ ಶೋಧಿಸಿದರೆ ಒಂದೆರಡು ಬಣ್ಣಗೆಟ್ಟ ಗಜಗಿನಾಕಾರದ ಬುಂದೆ ಉಂಡಿಗಳು ಸಿಗಬಹುದು."

"ಕಪ್ಪುಗಳಿಗೆ ಕಿವಿಯಿಲ್ಲ. ಕಾದ ಚೂರುಗಳೇ ತಟ್ಟೆಗಳು". ಚೆಂದಾದ ಚಿತ್ರದ್ದು ಕಾಗ್ದಾ ಕೊಡಬಾರ್ದನೋ ಮಾರಾಯ? ಇದೇನ ಮಂಡ ಕಾಗ್ದಾ ಕೊಟ್ಟಿ....... ? ಎಂದು ಕೇಳುವ ಗಿರಾಕಿಗಳು ಚೂಡಾ ಕೊಟ್ಟ ಕಾಗದದಲ್ಲಿ ಯಾರಾದರೂ ಸಿನೇಮಾ ನಟಿಯ ಅರ್ಧಮರ್ಧ ಮುಖದ ಚಿತ್ರವಿದ್ದರೂ ಸರಿ....... "ಸಾದಾ ಕಾಗದವಿದ್ದರೆ ತಕರಾರು. ಹೀಗೆ ಇನ್ನೂ ಚಹಾದ ಅಂಗಡಿ ವರ್ಣನೆ ಬರುತ್ತದೆ. ಹಳ್ಳಿಗಳಲ್ಲಿ ಚಹಾದ ಅಂಗಡಿಗಳು ಹಳ್ಳಿಯ ವಿಧಾನ ಸೌಧಗಳು ಎಂದು ಕರೆದರೆ ತಪ್ಪಾಗಲಾರದು. ಪುರುಷರಿಗೆ ಪೌರುಷ ತೋಡಿಕೊಳ್ಳುವ ತಾಣಗಳಾಗಿವೆ. ಸಂಸಾರಕ್ಕೆ ಬಾರದ ಗಾಳಿ ಸುದ್ದಿ ಮಾತನಾಡಿ ಹಳ್ಳಿ ಮಾತನಾಡಿ ಹಳ್ಳಿಗಳನ್ನು ಕುರುಕ್ಷೇತ್ರವನ್ನಾಗಿ ಪರಿವರ್ತಿಸುತ್ತಿದ್ದಾರೆ."

ಈ ಹಳ್ಳಿಯ ಚಿತ್ರಣ ರಾವ ಬಹಾದ್ದೂರರ "ಗ್ರಾಮಾಯಣ"ದಲ್ಲಾಗಲಿ, ಮಿರ್ಜಿ ಅಣ್ಣಾರಾಯರ ನಿಸರ್ಗದಲ್ಲಾಗಲಿ ಬಂದಿಲ್ಲವೆಂದು ಹೇಳಬೇಕಾಗುತ್ತದೆ.

"ಜೋಗಿ ಮರಡಿ" ಒಂದು ಕಾಡು ಹಳ್ಳಿ. ಈ ಹಳ್ಳಿಯ ಬದುಕಿನ ಒಳಮಿಡಿತಗಳನ್ನು ಚಿತ್ರಿಸುವಲ್ಲಿ ದು.ನಿಂ. ಬೆಳಗಲಿ ಅವರ ಸೂಕ್ಷ್ಮ ನಿರೀಕ್ಷಣಾ ಸಂವೇದನೆ, ಅನುಭವ-ಶ್ರೀಮಂತಿಕೆಯಿಂದ ಬೆಳಗಿದೆ. "ಜೋಗಿ ಮರಡಿ"ಯ ಸಮಷ್ಟ ಬದುಕಿನ ನೆಮ್ಮದಿ ಸೂತ್ರವಾಗಿ ಮೂಡಿರುವ ಕಾಡಪ್ಪ ಕಾಕಾನ ಪಾತ್ರ ನಮ್ಮ ಗ್ರಾಮ ಜೀವನದಲ್ಲಿ ಕಳೆದು ಹೋಗುತ್ತಿರುವ ಪರಂಪರೆಯೊಂದರ ಪ್ರತೀಕದಂತಿದೆ. "ಜೋಗಿ ಮರಡಿ" ಒಂದು ಶುದ್ಧ ಪ್ರಾದೇಶಿಕ ಕಾದಂಬರಿ. ಭಾಷೆಯ ಬಳಕೆಯಲ್ಲಿ ಆಚಾರ-ವಿಚಾರಗಳ ನಿರೂಪಣೆಯಲ್ಲಿ ಪಾತ್ರ ನಿರ್ವಹಣಾ ವಿಶಿಷ್ಟತೆಯಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕತೆಯ ಸೊಗಡು ತುಂಬಿ ನಿಂತಿದೆ.

ಹೀಗೆ ಕನ್ನಡ ಸಾಹಿತ್ಯಕ್ಕೆ ಒಂದು ಉತ್ತಮ ಪ್ರಾದೇಶಿಕ ಕಾದಂಬರಿಯನ್ನು ನೀಡಿದ ದು.ನಿಂ. ಬೆಳಗಲಿ ಅವರು ಅಭಿನಂದನಾರ್ಹರು.

# ಪರೀಕ್ಷೆ ಸಿದ್ಧರಾಗುವ ಬಗೆ

ಬಹಳ ಕಟ್ಟಪಟ್ಟು ಓದಿದ್ದರೂ ತಮ್ಮ ಮಕ್ಕಳಿಗೆ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದಿವೆ ಎಂ ತಂದೆತಾಯಂದಿರು ಹೇಳುತ್ತಾರೆ. ವಿದ್ಯಾರ್ಥಿಗಳೂ ಹೀಗೆಯೆ ಹೇಳುವುದನ್ನು ಕೇಳುತ್ತೇವೆ. ಆದರೆ ವಸ್ತುಸ್ಥಿತಿ ಬೇರೆ ಇರುತ್ತದೆ. ಬಹುತೇಕ ವಿದ್ಯಾರ್ಥಿಗಳಿಗೆ ಪಠ್ಯ ವಿಷಯಗಳು ಸರಿಯಾಗಿ ಮನದಟ್ಟಾಗಿರುವುದಿಲ್ಲ. ಕ್ರಮಬದ್ಧವಾದ ವ್ಯಾ ಮತ್ತು ಪೂರ್ವಸಿದ್ಧತೆ ಮಾಡಿಲ್ಲದಿರುವುದೂ ಕಾರಣವಾಗುತ್ತದೆ. ಒಬ್ಬ ಬುದ್ಧಿವಂತ ವಿದ್ಯಾರ್ಥಿ ಪರೀಕ್ಷೆಯಲ್ಲಿ ಕಡಿ ಅಂಕಗಳಿಸಲು ಬೇರೆ ಕಾರಣಗಳೂ ಇರಬಹುದು.

ವಾಸ್ತವಿಕವಾಗಿ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ಪರೀಕ್ಷೆಗೆ ಕ್ರಮಬದ್ಧವಾದ ತಯಾರಿ ನಡೆಸುವುದು ಅ ತರಗತಿಗಳಿಗೆ ಹಾಜರಾಗುವುದು ಒಂದು ಮುಖ್ಯವಾದ ಸಂಗತಿ. ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವುದರಿಂದ ಮತ್ತು ಶ್ರವ್ಯ ಇವೆರಡರ ಪರಿಣಾಮದಿಂದಾಗಿ ಪಾಠದ ಹೆಚ್ಚಿನ ಭಾಗ ಮನಸ್ಸಿನ ಒಳಪದರದಲ್ಲಿ ಉಳಿಯುತ್ತವೆ. ಮತ್ತೆ ಓದಿದಾಗ ವಿಷಯಗಳು ಚೆನ್ನಾಗಿ ಅರ್ಥವಾಗುತ್ತವೆ.

ಪ್ರತಿದಿನವೂ ತರಗತಿಯ ವೇಳೆಯನ್ನು ಬಿಟ್ಟು ಕನಿಷ್ಠ ಮೂರರಿಂದ ನಾಲ್ಕು ಗಂಟೆಗಳ ಕಾಲ ವ್ಯಾಸಂಗ ಮಾಡ ಭಾನುವಾರ ಮತ್ತು ರಜಾದಿನಗಳಂದೂ ಈ ಕ್ರಮವನ್ನು ತಪ್ಪಿಸಬಾರದು. ಕ್ರಮೇಣ ವ್ಯಾಸಂಗದ ಅವಧಿಯನ್ನು ಹೆಚ್ಚಿಸ ಸಹಪಾಠಿಗಳು ಮತ್ತು ಶಿಕ್ಷಕರೊಂದಿಗೆ ಪಠ್ಯವಿಷಯಗಳನ್ನು ಕುರಿತು ಮಾತನಾಡುತ್ತಿರಬೇಕು.

ತರಗತಿಯಲ್ಲಿ ಕೊಟ್ಟ ನೋಟ್ಸ್ ಮತ್ತು ಪಠ್ಯಪುಸ್ತಕವನ್ನೂ ಓದಿ ವಿದ್ಯಾರ್ಥಿಗಳು ತಮ್ಮದೇ ಆದ ಒಂದು ನೋ ತಯಾರಿಸಿಕೊಳ್ಳಬೇಕು. ಇದನ್ನು ಬಿಳಿಹಾಳೆಗಳಲ್ಲಿ ಬರೆದು ಒಂದೊಂದು ಅಧ್ಯಾಯದ (Chapter) ಗುಂಪುಗಳನ್ನು ಮಾಡಿ ಜೋಡಿಸಬೇಕು. ಆ ಅಧ್ಯಾಯದ ಅಭ್ಯಾಸಗಳನ್ನು Exercises ಇದಕ್ಕೆ ಸೇರಿಸಬೇಕು. ಹೊಸ ವಿಷಯಗಳನ್ನು ಟಿಪ್ಪಣಿ ಮುಂತಾದವನ್ನು ಬರೆದ ಹೆಚ್ಚುವರಿ ಪುಟಗಳನ್ನು ಇದಕ್ಕೆ ಸೇರಿಸಲು ಅನುಕೂಲವಾಗುತ್ತದೆ. ಒಂದೊಂದು ವಿಷ ಅಧ್ಯಾಯಗಳನ್ನು ಕ್ರಮವಾಗಿ ಜೋಡಿಸಿಟ್ಟುಕೊಳ್ಳಬೇಕು. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಫೈಲ್ ಮ ವಿಂಗಡಿಸಿಟ್ಟುಕೊಳ್ಳುವುದು ಒಳ್ಳೆಯದು. ಈ ಪದ್ಧತಿಯಲ್ಲಿ ಪ್ರತಿ ಅಧ್ಯಾಯದ ಸಂಪೂರ್ಣ ಚಿತ್ರಣವಿರುತ್ತದೆ. ಮುಂದೆ ಇ ಅಧ್ಯಯನಕ್ಕೆ ಬಳಸಬಹುದು.

ಮೊದಲನೆಯ ಪತ್ರಿಕೆ, ಎರಡನೆಯ ಪತ್ರಿಕೆ ಹೀಗೆ ಕ್ರಮವಾಗಿ ಅಭ್ಯಾಸ ಮಾಡಿ ಮುಂದಿನ ವಿಷಯಕ್ಕೆ ಹೋಗ ಪ್ರತಿ ವಿಷಯದಲ್ಲೂ ಮೊದಲ ಅಧ್ಯಾಯದಿಂದ ಪ್ರಾರಂಭಿಸಿ ಮುಂದುವರೆಯಬೇಕು. ಒಂದು ವಿಷಯವನ್ನು ಓದು ಮತ್ತೊಂದು ವಿಷಯ ಹಿಂದೆ ಬಿದ್ದೀತೆಂದು ಆತಂಕಪಡಬಾರದು. ಯಾವುದಾದರೂ ಒಂದು ವಿಚಾರ ಮೊದಲ ಸುತ್ತಿ ಅರ್ಥವಾಗದಿದ್ದರೆ ಅದನ್ನು ಹಾಗೆಯೆ ಬಿಟ್ಟು ಮುಂದುವರೆಯಬಹುದು. ಎರಡು ಮೂರನೆ ಸುತ್ತಿನಲ್ಲಿ ಅವು ಅರ್ಥವಾಗ ಒಂದು ಅಧ್ಯಾಯವನ್ನು ಓದಿದ ನಂತರ ಅದರ ಸಾರಾಂಶವನ್ನು ಮತ್ತು ಆ ಅಧ್ಯಾಯದ ಮೇಲೆ ಯಾವ ರೀತಿ ಪ್ರಶ್ನೆ ಕೇಳಬಹುದು ಎಂಬುದನ್ನು ಗಮನಿಸಬೇಕು. ಹಿಂದಿನ ವರ್ಷದ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಆಗಾಗ್ಗೆ ನೋಡುತ್ತಿರು ಒಳ್ಳೆಯದು.

ಕೇವಲ ಓದುವುದಕ್ಕಿಂತ ಬರೆದು ಅಭ್ಯಾಸ ಮಾಡುವುದು ಒಳ್ಳೆಯದು. ಸರಾಗವಾಗಿ ಓದಲು ಬರುವ ಸ್ಫುಟವಾದ ಬರವಣಿಗೆಯನ್ನು ರೂಢಿಸಿಕೊಳ್ಳಬಹುದು. ಪರೀಕ್ಷೆಯಲ್ಲಿ ಮೂರು ಗಂಟೆಯ ಕಾಲಾವಕಾಶವಿರುತ್ತದೆ. ಆದ್ದ ವೇಗವಾಗಿ ಬರೆಯಲು ಅಭ್ಯಾಸ ಮಾಡುವುದೂ ಅಗತ್ಯ ಬೋರ್ಡಿನ ಮೇಲೆ ಬರೆದು ಅಭ್ಯಾಸ ಮಾಡು (Boardwork)ಇನ್ನೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ತರಗತಿಗಳು ಮುಗಿದು ಪರೀಕ್ಷೆಯ ದಿನಗಳು ಹತ್ತಿರವಾದಾಗ ಬೇರೆಯವರಿಗೆ ನೋಟ್ಸ್ ಕೊಡಬಾರದು. ಮ ಮೇಲೆ ತೀವ್ರವಾದ ದುಷ್ಪರಿಣಾಮಗಳಾಗುವುದರಿಂದ ಟಿ.ವಿ. ಕಾರ್ಯಕ್ರಮಗಳನ್ನು ನೋಡದಿರುವುದು ಒಳ್ಳೆಯದು. ಓದಿದರೂ ಕಡಿಮೆಯೇ ! ದಿನದ ಹೆಚ್ಚಿನ ಕಾಲವನ್ನು ವ್ಯಾಸಂಗಕ್ಕೆ ವಿನಿಯೋಗಿಸಬೇಕು. ಪಠ್ಯೇತರ ಚಟುವಟಿಕೆಗ ನಿಲ್ಲಿಸುವುದು ಒಳ್ಳೆಯದು. ಸುಮಾರು ಒಂದು ಗಂಟೆಯ ವ್ಯಾಸಂಗದ ನಂತರ ಐದು–ಹತ್ತು ನಿಮಿಷಗಳ ವಿಶ್ರ ಪಡೆಯುವುದು ಅನುಕೂಲಕರ.



ಸಾಧ್ಯವಾದರೆ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿ ಸ್ವತಃ ಪರೀಕ್ಷೆ (Self Examination) ತೆಗೆದುಕೊಳ್ಳಬಹುದು. ಇತ್ತೀಚಿನ ಪ್ರಶ್ನೆಪತ್ರಿಕೆಯೊಂದನ್ನು ತೆಗೆದುಕೊಂಡು ಬೆಳಿಗ್ಗೆ 9 ರಿಂದ 12 ಅಥವಾ ಮಧ್ಯಾಹ್ನ 2 ರಿಂದ 5 ಗಂಟೆಯ ಅವಧಿಯಲ್ಲಿ ಉತ್ತರಿಸಬೇಕು. ಅಂದಾಜು ಮೌಲ್ಯಮಾಪನ ಮಾಡಿಕೊಳ್ಳಬಹುದು. ಮುಂದಿನ ಪರೀಕ್ಷೆಯಲ್ಲಿ ಇನ್ನೂ ಉತ್ತಮವಾಗಿ ನಿರ್ವಹಿಸಬಹುದು. ಹೀಗೆ ಮಾಡುವುದರಿಂದ ಪರೀಕ್ಷೆಯ ಭಯ ನಿವಾರಣೆಯಾಗುತ್ತದೆ.

ಪರೀಕ್ಷೆಗೆ ಒಂದೆರಡು ದಿನ ಇದ್ದಾಗ ವ್ಯಾಸಂಗದ ಅವಧಿಯನ್ನು ಕಡಿಮೆ ಮಾಡಬಹುದು. ಪರೀಕ್ಷೆಯ ಹಿಂದಿನ ದಿನ ರಾತ್ರಿ ತುಂಬಾ ನಿದ್ದೆಗೆಟ್ಟು ಓದುವುದು ಅಪಾಯಕಾರಿ. ಬೇಗನೆ ಮಲಗುವುದು ಒಳ್ಳೆಯದು. ಹಿಂದಿನ ರಾತ್ರಿಯೆ, ಪ್ರವೇಶ ಪತ್ರ, ಐಡಿ ಕಾರ್ಡ್, ಪೆನ್ನುಗಳು ಮತ್ತು ಮರುದಿನ ಧರಿಸುವ ಬಟ್ಟೆಗಳನ್ನು ತಯಾರು ಮಾಡಿಟ್ಟುಕೊಳ್ಳಬಹುದು.

ಕನಿಷ್ಠ ಹದಿನೈದು ನಿಮಿಷ ಮುಂಚಿತವಾಗಿ ಪರೀಕ್ಷಾ ಕೊಠಡಿಯಲ್ಲಿರುವುದು ಒಳ್ಳೆಯದು. ನೋಂದಣಿ ಸಂಖ್ಯೆ ಮತ್ತು ಇತರ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ಪ್ರಶ್ನೆಗಳ ಸಂಖ್ಯೆ, ವಿಭಾಗಗಳನ್ನು ಸರಿಯಾಗಿ ಬರೆಯಬೇಕು. ಒಂದು ಪ್ರಶ್ನೆಗೆ ಉತ್ತರಿಸಿದ ನಂತರ ಒಂದೆರಡು ಸಾಲಿನಷ್ಟು ಜಾಗಬಿಟ್ಟು ಮುಂದಿನ ಪ್ರಶ್ನೆಗೆ ಉತ್ತರ ಬರೆಯಬೇಕು. ಪ್ರಶ್ನೆಪತ್ರಿಕೆಗಳಲ್ಲಿ ದೋಷಗಳಿರುವ ಸಾಧ್ಯತೆ ಇರುತ್ತದೆ. ಅಂತಹ ಪ್ರಶ್ನೆಗಳಿಗೂ ಸಾಧ್ಯವಾದಷ್ಟು ಉತ್ತರಿಸಿ ಹಾಗೆಯೇ ಬಿಡಬೇಕು. ಇದಕ್ಕೆ ಅಂಕಗಳು ದೊರೆಯುತ್ತವೆ. ಸಾಧ್ಯವಾದರೆ ಅಗತ್ಯಕ್ಕಿಂತ ಹೆಚ್ಚು ಪ್ರಶ್ನೆಗಳಿಗೂ ಉತ್ತರಿಸಬಹುದು. ಕಾಲಾವಕಾಶವಿದ್ದರೆ ತಾವು ಬರೆದ ಉತ್ತರ ಪತ್ರಿಕೆಯನ್ನು ಒಮ್ಮೆ ಪರಿಶೀಲಿಸಬಹುದು.

**ಪೋಷಕರ ಪಾತ್ರ :** ತಂದೆ–ತಾಯಂದಿರು ಮಕ್ಕಳ ವ್ಯಾಸಂಗಕ್ಕೆ ಸಾಧ್ಯವಾದಷ್ಟು ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಅವರ ಮೇಲೆ ಅತಿಯಾದ ಒತ್ತಡ ಹಾಕಬಾರದು. ಆರೋಗ್ಯ ಕೆಡದಹಾಗೆ ಒಳ್ಳೆಯ ಆಹಾರವನ್ನು ಕೊಡಬೇಕು. ಯಾವುದಾದರೂ ಮನೆಗೆ ಹೋದಾಗ, ಪರೀಕ್ಷೆಗೆ ತಯಾರಾಗುತ್ತಿರುವ ಮಕ್ಕಳಿದ್ದರೆ ಅವರಿಗೆ ತೊಂದರೆಯಾಗದಂತೆ ಮೆಲುದನಿಯಲ್ಲಿ ಮಾತನಾಡಿ. ಭೇಟಿಯನ್ನು ಮೊಟುಕುಗೊಳಿಸಬೇಕು. ಮನೆಗೆ ಅತಿಥಿಗಳು ಬಂದರೂ ಮಕ್ಕಳ ವ್ಯಾಸಂಗಕ್ಕೆ ಅಡ್ಡಿಯಾಗದಂತೆ ಎಚ್ಚರ ವಹಿಸಬೇಕು.

ವೃತ್ತಿ ಶಿಕ್ಷಣ ಪಡೆಯಬೇಕೆಂದು ಬಯಸುವ ವಿಜ್ಞಾನದ ವಿದ್ಯಾರ್ಥಿಗಳು ಮೊದಲ ಪಿ.ಯು.ಸಿ.ಯ ಪ್ರಾರಂಭ ದಿಂದಲೇ ಎರಡನೆ ಪಿ.ಯು.ಸಿ. ಮತ್ತು ಸಿ.ಇ.ಟಿ ಪರೀಕ್ಷೆಯವರೆಗೂ ಪೂರ್ವಸಿದ್ಧತೆ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಪ್ರತಿಭಾವಂತ ವಿದ್ಯಾರ್ಥಿಗಳು ಐ.ಐ.ಟಿ ಮುಂತಾದ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು. ಬಿ.ಎ., ಬಿ.ಎಸ್ಸಿ., ಬಿ.ಕಾಂ., ಇಂಜಿನಿಯರಿಂಗ್, ವೈದ್ಯಕೀಯ ಮುಂತಾದ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ನಾತಕೋತ್ತರ ಹಾಗೂ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಮೊದಲಿನಿಂದಲೂ ಪ್ರಯತ್ನಶೀಲರಾಗಬೇಕಾಗುವುದು.

ಇದಲ್ಲದೆ ಇಲಾಖಾ ಪರೀಕ್ಷೆಗಳು, ಬ್ಯಾಂಕಿಂಗ್, ಲೋಕಸೇವಾ ಆಯೋಗದ ಪರೀಕ್ಷೆಗಳು (K.P.S.C., UPSC, KAS, IAS ) ಚಾರ್ಟರ್ಡ್ ಅಕೌಂಟೆಂಟ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ, ಪದವಿ ತರಗತಿಯ ಮೊದಲ ವರ್ಷದಿಂದಲೆ ತಯಾರಿ ನಡೆಸುವುದು ಬಹಳ ಒಳ್ಳೆಯದು ಮತ್ತು ಅಗತ್ಯಕೂಡ. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಗುರಿಯನ್ನು ಸಾಧಿಸಲು ಸಹಾಯಕವಾಗುವುದು ಕಠಿಣವಾದ ಪರಿಶ್ರಮದಿಂದ ಗಳಿಸಿದ ವಿದ್ಯೆ ಜ್ಞಾನ ಎಂದೂ ವ್ಯರ್ಥವಾಗುವುದಿಲ್ಲ.

ಸಾಂಪ್ರದಾಯಿಕ ಶಿಕ್ಷಣ ಮತ್ತು ಪರೀಕ್ಷೆಗಳಲ್ಲದೆ. ವಿದ್ಯಾರ್ಥಿಗಳು ಕಂಪ್ಯೂಟರ್, ಟೈಪಿಂಗ್, ಶಾರ್ಟ್‌ಹ್ಯಾಂಡ್, ಸಂಗೀತ, ಚಿತ್ರಕಲೆ ಮುಂತಾದವುಗಳನ್ನೂ ಕಲಿಯಲು ಪ್ರಯತ್ನಿಸಬಹುದು. ಸಾಧ್ಯವಾದಷ್ಟು ಮನೆಗೆಲಸ ಅಥವಾ ಶರೀರಕ್ಕೆ ವ್ಯಾಯಾಮವಾಗುವಂತಹ ಆಟಗಳನ್ನು ಆಡುವುದು ಒಳ್ಳೆಯದು. ಇದರಿಂದ ಮನಸ್ಸು ಕ್ರಿಯಾಶೀಲವಾಗಿರುತ್ತದೆ.

ವಿದ್ಯಾರ್ಥಿಗಳಿಗೆ ಯಾವ ಪರೀಕ್ಷೆಯೂ ಒಂದು ಪಿಡುಗು ಎಂದೆನಿಸಬಾರದು. ಭಯ ಆತಂಕವಿಲ್ಲದೆ ಪರೀಕ್ಷೆಗಳನ್ನು ಸಹಜವಾಗಿ ತೆಗೆದುಕೊಳ್ಳಬೇಕು. ಇದಕ್ಕೆ ನಿರಂತರವಾದ ಪರಿಶ್ರಮ ಮತ್ತು ಕ್ರಮಬದ್ಧವಾದ ಪೂರ್ವ ಸಿದ್ಧತೆ, ಎಲ್ಲಾ ವಿದ್ಯಾರ್ಥಿಗಳು ಅನುಸರಿಸಬಹುದಾದ ಒಂದು ಸರಳವಾದ ಮಾರ್ಗ.

**ಶ್ರೀನಿವಾಸನ್ ಹೆಚ್.**
ನಿವೃತ್ತ ಪ್ರಾಧ್ಯಾಪಕರು, ಗಣಿತ ಶಾಸ್ತ್ರ ವಿಭಾಗ, ಡಿ.ವಿ.ಎಸ್., ಕಾಲೇಜು ಶಿವಮೊಗ್ಗ.

# ಮನದ ಇಂಗಿತ

– ಸಂದೇಶ ಹೆಚ್.ಪಿ
ದ್ವಿತೀಯ ಬಿ.ಎಸ್ಸಿ., (ಪಿ.ಎಂ.



ಮನುಷ್ಯನಿಗೆ ಆಸೆಗಳು ಸಹಜ. ಅದರ ಪೂರೈಕೆಗಾಗಿ ಅವಲಂಬನೆಯು ಅನಿವಾರ್ಯ. ಅದಕ್ಕಾಗಿ ಅವಲಂಬಿಸಿರುವುದು ಪ್ರಕೃತಿಯನ್ನೆ. ಮನುಷ್ಯ ಪ್ರಕೃತಿಯ ಮಡಿಲಿನಲ್ಲೇ ಜೀವಿಸುತ್ತಿದ್ದಾನೆ. ಪ್ರಕೃತಿಯು ಆತನನ್ನು ಸಲುಹುತ್ತಿದೆ. ಇಂದು ಆತನ ಆಸೆಗಳೆಲ್ಲ ದುರಾಸೆಯಾಗಿ ಪರಿವರ್ತನೆಯಾಗಿವೆ. ಅದರ ಫಲವಾಗಿ ಪ್ರಕೃತಿಯ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನೆನಪಿಸಿಕೊಳ್ಳಬಹುದು. 'ಪ್ರಕೃತಿ ನಮ್ಮ ಆಸೆಗಳನ್ನು ಮಾತ್ರ ಪೂರೈಸಬಲ್ಲದೆ ಹೊರತು ಅತಿಯಾಸೆಗಳನ್ನೆಲ್ಲ' ಇಲ್ಲಿ ಈ ಮಾತು ಯಾಕೆ ಪ್ರಸ್ತುತ !. ಮನುಷ್ಯ ತನ್ನ ಅತಿಯಾದ ಆಸೆಗಳನ್ನು ಪೂರೈಸಿಕೊಳ್ಳಲು ತನ್ನ ಮಡಿಲಿನಲ್ಲಿಟ್ಟು ಸಲಹುತ್ತಿರುವ ಪ್ರಕೃತಿಗೆ ಮೋಸ ಮಾಡುತ್ತಿದ್ದಾನೆ. ಪ್ರಕೃತಿ ಮತ್ತು ಮನುಷ್ಯನ ಅವಿನಭಾವ ಸಂಬಂಧ ಒಂದೆಡೆ ಕಳಚುತ್ತಿದೆ.

ನಮಗೆಲ್ಲರಿಗೂ ಬದುಕುವುದಕ್ಕಾಗಿ ಅಂದವಾದ ಮನೆಗಳು ಬೇಕು. ಅದರಲ್ಲಿ ಸಕಲ ಸೌಲಭ್ಯವೂ ತುಂಬಿರಬೇ ಓಡಾಡುವುದಕ್ಕೆ ವಾಹನಗಳು ಬೇಕು. ನಡೆಯೋದೆಲ್ಲ ನಮ್ಮ ಕಾಲುಗಳಿಗೆ ಮರೆತೆ ಹೋಗಿದೆ. ಸಾರ್ವಜನಿಕ ಉಪಯೋಗಿಸಬಹುದಾದ ಸೌಲಭ್ಯಗಳು ನಮ್ಗ್ಯಾರಿಗೂ ಕಣ್ಣಿಗೆ ಬೀಳುವುದೇ ಇಲ್ಲ. ನಯವಾದ ಗಾಜಿನಂತಹ ರಸ್ತೆಗಳು ಎಲ್ಲ ಐಷಾರಾಮಿ ಸೌಲಭ್ಯಗಳನ್ನು ನಮಗೆ ಬೇಕು, ಹಾಗಾದರೆ ಅದಕ್ಕಾಗಿ ಸೌಲಭ್ಯಗಳು ಬೇಕಲ್ಲ. ಅದಕ್ಕಾಗಿ ಮ ಹಾಕುವುದು ಪ್ರಕೃತಿಯ ಮಡಿಲಿಗೆ.

ಕಳೆದ ಕೆಲವು ವರ್ಷಗಳಿಂದ ನಾವು ಅಭಿವೃದ್ಧಿಯ ಹೆಸರಿನಲ್ಲಿ ಕೈ ಹಾಕುತ್ತಿರುವ ಕೆಲಸಗಳೇ ಇದಕ್ಕೆಲ್ಲ ಸ ನಾವೆಲ್ಲ ಅಭಿವೃದ್ಧಿ ಎನ್ನುವ ಹೆದ್ದಾರಿಯಲ್ಲಿ ಬಹಳ ವೇಗವಾಗಿ ಸಾಗುತ್ತಾ ಇದ್ದೇವೆ. ಬಹಳ ಮುಖ್ಯವಾಗಿ ಕೆಲವು ಯೋಜನೆಗಳನ್ನು ಪರಿಗಣಿಸುವುದಾದರೆ.

ಕಪ್ಪತಗುಡ್ಡದಲ್ಲಿ ಚಿನ್ನದ ಗಣಿಗಾರಿಕೆಯ ಪ್ರಸ್ತಾವನೆ. ಉತ್ತರ ಕರ್ನಾಟಕದ ಓಯಸಿಸ್ ಅಂತಲೇ ಕಪ್ಪತಗುಡ್ಡ ಕರೆಯುತ್ತಾರೆ. ಹಸಿರೇ ವಿರಳವಾಗಿರುವ ಉತ್ತರ ಕರ್ನಾಟಕದಲ್ಲಿ ಕಪ್ಪತಗುಡ್ಡವು ನಾಲ್ಕು ತಾಲ್ಲೂಕುಗಳಲ್ಲಿ ಹಂಚಿಕೊ ಹೊದ್ದಿದೆ. ಅಲ್ಲಿನ ಮರ ಗಿಡಗಳು, ಸುಗಂಧಭರಿತ ಹುಲ್ಲು, ನವಿಲು ಮತ್ತು ಜಿಂಕೆಯಂತಹ ಎಷ್ಟು ಜೀವಿ ಆಸರೆಯಾಗಿರಬಹುದು !? ಇದೆಲ್ಲವು ಇಂದು ಅವಸಾನದ ಅಂಚನ್ನ ತಲುಪುತ್ತಿದೆ. ಎಲ್ಲವನ್ನು ನುಂಗುವ ಕಾತರ ಏಕೆ ನಮಗೆ ಬೇಕಿರುವುದು ಚಿನ್ನ ಅಲ್ಲವೇ ?

ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಮೂಡಿಗೆರೆ ತಾಲ್ಲೂಕಿನ ಭೈರಾಪುರದಿಂದ ಧರ್ಮಸ್ಥಳದ ಶಿಶಿಲದವರೆಗೆ ನಿರ್ಮಾಣವೂ ಒಂದು. ಇದು ತುಂಬಾ ಹಿಂದಿನಿಂದ ಬಂದಿರುವ ಒತ್ತಾಯದ ಯೋಜನೆಯೂ ಹೌದು. ಈ ರಸ್ತೆ ನಿರ್ಮಾಣದಲ್ಲಿ ಕೆಲವು ಪ್ರಭಾವಿಗಳ ಒತ್ತಡದಿಂದ ಅದೇ ಪ್ರದೇಶದಲ್ಲಿಯೇ ಇರುವ ಎತ್ತಿನ ಭುಜ ಎಂಬ ಶಿಖ ಪಕ್ಕದಲ್ಲಿಯೇ ರಸ್ತೆ ಮಾರ್ಗ ಗುರುತಿಸುವುದು ಯೋಜನೆಯ ಉದ್ದೇಶವನ್ನು ಎತ್ತಿ ಹಿಡಿಯುತ್ತಿದೆ. ಇಲ್ಲಿ ಗಮನಿಸಲೇ ಬೇ ಸಂಗತಿ ಗುರುತಿಸಿರುವ ರಸ್ತೆ ಮಾರ್ಗ ಹಾದು ಹೋಗುತ್ತಿರುವುದು ಪಶ್ಚಿಮ ಘಟ್ಟದ ಒಂದು ದಟ್ಟವಾದ ಅರಣ್ಯ ಭಾಗ.ಯಾವುದೋ ವೈಯಕ್ತಿಕ ಹಿತಾಸಕ್ತಿಗಾಗಿ ಅರಣ್ಯ ನಾಶಕ್ಕೆ ಕೈ ಹಾಕುತ್ತಿರುವುದು ವಿಷಾದನೀಯ ಸಂಗತಿ. ಪ್ರಕೃತಿ ವಿನಾ ನಮಗೇನು !?

ನಮ್ಮ ಶಿವಮೊಗ್ಗ ಮತ್ತು ತೀರ್ಥಹಳ್ಳಿ ರಸ್ತೆ ಅಭಿವೃದ್ಧಿಯೋಜನೆ. ಇದಕ್ಕಾಗಿ ಸುಮಾರು ಸಾವಿರದ ಮೂರು ನ ಮರಗಳ ಬುಡಕ್ಕೆ ಕೊಡಲಿಪೆಟ್ಟು ಬೀಳುವುದು ಅನಿವಾರ್ಯ. ಏಕೆಂದರೆ ರಸ್ತೆ ಅಭಿವೃದ್ಧಿಯ ಅನಿವಾರ್ಯತೆ ನಮಗೆ



ಈ ಯೋಜನೆಯಲ್ಲಿ ತೆಗೆಯಲಾಗುವ ಅಷ್ಟೂ ಮರಗಳನ್ನು ಬೇರೆಡೆ ನೆಟ್ಟು ಪೋಷಿಸುವ ಕೆಲಸ ಮಾಡುತ್ತಿದೇವೆಯೇ ? ಇಲ್ಲ. ಇಂತಹ ವಿವೇಚನಾರಹಿತ ಯೋಜನೆಗಳು ಮುಂದೆ ಒಂದು ದಿನ ನಮ್ಮನ್ನು ನೇರ ನರಕದ ಬಾಗಿಲಿಗೆ ಕರೆದೊಯ್ಯುವುದು ಖಂಡಿತಾ.

ಕಳೆದ ವರ್ಷದಲ್ಲಿ ನಮ್ಮ ಜಾಗತಿಕ ತಾಪಮಾನ ಶೇ. 1° ಸೆಲ್ಸಿಯಸ್‌ನಷ್ಟು ಹೆಚ್ಚಾಗಿರುವುದು ನಮ್ಮೆಲ್ಲರ ಅನುಭವಕ್ಕೆ ಈಗಾಗಲೇ ಬರುತ್ತಿದೆ. ಶಿವಮೊಗ್ಗದಂತಹ ನಗರದಲ್ಲಿಯೇ ತಾಪಮಾನ 39° ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಇದು ಬಳ್ಳಾರಿಯನ್ನು ಕೆಲವೇ ಸಮಯದಲ್ಲಿ ಮೀರಿಸಲೂಬಹುದು. ಮಳೆಗಾಲ ಮುಗಿಸಿ ಬೆಚ್ಚನೆ ಮನೆಯಲ್ಲಿದ್ದ ಛತ್ರಿಗಳೆಲ್ಲ ಬಿಸಿಲು ನೋಡಲು ಹೊರಗೆ ಬರಲೇ ಬೇಕಾಗಿದೆ.

ಮಲೆನಾಡಿನ ಭಾಗಗಳಲ್ಲಿ ಎಂದೂ ತಳ ಕಾಣದ ಬಾವಿ, ಕೆರೆ, ಹಳ್ಳಗಳೆಲ್ಲ ಬೇಸಿಗೆಯ ಪ್ರಾರಂಭದ ದಿನಗಳಲ್ಲೇ ಬತ್ತಿ ಬರಡಾಗಿವೆ. ಇನ್ನು ಮಳೆಗಾಲದ ನಾಲ್ಕು ತಿಂಗಳ ಜಡಿ ಮಳೆಗೆ ತೋಯ್ದು ತೊಪ್ಪೆಯಂತಾಗುತ್ತಿದ್ದರು ಜನ. ಆ ಕಾಲ ದೂರವಾಗುತ್ತಿದೆ. ಕಂಬಳಿ, ಛತ್ರಿಗಳೆಲ್ಲ ಮಳೆಗಾಲದಲ್ಲೂ ಬೆಚ್ಚಗೆ ಮನೆಯಲ್ಲಿಯೇ ಕೂತಿವೆ. ಜನಗಳು ಮಾತ್ರ ಮಳೆಯನ್ನೇ ಎದುರು ನೋಡುತ್ತ ಕಾಲ ಕಳೆಯುವಂತಾಗಿದೆ. ಏಕೆಂದರೆ ಕಳೆದೆರಡು ವರ್ಷಗಳಿಂದ ಶೇ. 50 ರಷ್ಟು ಮಳೆ ಕಡಿಮೆಯಾಗಿದೆ.

ಭವಿಷ್ಯದ ಚಿಂತೆ ನಮಗೆಲ್ಲ ಇಂದು ಎದುರಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಾವು ಸಾಧಿಸುತ್ತಿರುವ ಅಭಿವೃದ್ಧಿಯಾದರು ಎಂತಹುದು ? ಮುಂದಿನ ಪೀಳಿಗೆಗೆ, ನಾವು ಏನನ್ನು ಉಳಿಸಿಹೋಗುತ್ತಿದ್ದೇವೆ ಒಮ್ಮೆ ಯೋಚನೆ ಮಾಡಿದರೆ ಬಿಟ್ಟು ಹೋಗುತ್ತಿರುವುದು ಬರಿದಾದ ಪ್ರಕೃತಿಯ ಮಡಿಲನ್ನು ಮಾತ್ರ.

---

## ಪ್ರೀತಿ, ಸಮಾದಿ

ನನ್ನ ಪ್ರೀತಿ ಸಮಾದಿ ಮೇಲೆ, ಅರಳಿರುವ
ಹೂ ನಗುತಿರಲು ! ಆಕಸ್ಮಿಕವಾಗಿ
ಬಣ್ಣ-ಬಣ್ಣದ ಚಿಟ್ಟೆ, ಮುತ್ತಿಕ್ಕಿ
ಮೋಹಿಸಿದ ಮಾತ್ರಕೆ, ಹೂವು, ಕಾಯಾಗಿ
ಕಾಯಿ, ಹಣ್ಣಾಗಿ, ನನ್ನ ಹೆಣ್ಣಿನ
ಕೈ ಸೇರಿದೆ !
ಮಾಗಿರುವ ನನ್ನ ಕಚ್ಚಿ ರುಚಿ
ನೋಡಲು
ಎನ್ನ ಕಣ್ಣ ಹನಿ, ಹಣ್ಣಿನ
ರಸವಾಗಿ, ಅವಳ ಅನ್ನನಾಳ
ಸೇರಿ ! ದೇಹದಿ ಮಿಂಚು ಸಂಚಾರವಾದ
ಮೂಕ ಸಾಕ್ಷಿಗೆ !
ನನ್ನ ! ಸಮಾದಿ ಗೋಡೆ ಬಿರುಕು
ಬಿಟ್ಟಿದೆ !!

**ಸುಮನ್ ಸಿ.ಎಂ.**
ತೃತೀಯ ಬಿ.ಎಸ್ಸಿ., (ಸಿ.ಬಿ.ಝಡ್)

## ಬಣ್ಣದ ಬದುಕು

ಒತ್ತಕ್ಷರವಿಲ್ಲದ
ಹಣೆಬರಹ, ಉತ್ತರವಿಲ್ಲದ
ಪ್ರಶ್ನೆಗಳು, ನೆತ್ತರು ತುಂಬಿದ
ದೇಹ, ಬಿತ್ತರಿಸಲಾಗದ
ಭಾವನೆಗಳು, ಬಣ್ಣದ ಬದುಕಿಗೆ
ಸಿಲುಕಿ, ಬೆತ್ತಲಾಗದೆ
ತತ್ತರಿಸಿದ ಮನ
ಸೂತ್ರವಿಲ್ಲದ ಗಾಳಿಪಟದಂತೆ
ಹಾರುತಿದೆ ವಿರಹದಿ
ಹಸಿದ ರಣಹದ್ದು ಕೆಕ್ಕರಿಸಿ
ಸಕ್ಕನೆ ಮುತ್ತಿಕ್ಕಿ, ಬಣ್ಣದ
ಬದುಕಿಗೆ ತಿಲಾಂಜಲಿ ಇಟ್ಟಿದೆ.

# ಅಮ್ಮನ ಕಣ್ಣೀರು ಅಪ್ಪನ ಬೆವರು

– ಪ್ರೊ. ಕೆ. ಯುವರಾಜ್
ಕಾಮರ್ಸ್ ವಿಭಾ



ಈ ಹುಡುಗನ ಹೆಸರು ಇಕ್ಬಾಲ್. ವಯಸ್ಸು ಹದಿನೇಳು ವರ್ಷ. ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿ. ಬಡಕುಟುಂಬದಿಂದ ಬಂದವನು. ತರಗತಿಗೇ ಸುಂದರಾಂಗ ಎನ್ನಬಹುದು. ಹುಡುಗ ಹುಡುಗಿಯರು ಶಾರುಕ್... ಶಾರುಕ್ ಎನ್ನುತ್ತಿದ್ದರು. ತನ್ನ ಮುಗ್ಧತೆಯಿಂದ ನನಗೂ ಇಷ್ಟವಾಗಿದ್ದ ಹುಡುಗ ಇಕ್ಬಾಲ್.

ಇಕ್ಬಾಲ್ ಕಾಲೇಜಿಗೆ ಒಂದು ದಿನ ಬಂದರೆ ನಾಲ್ಕು ದಿನ ಬರುತ್ತಿರಲಿಲ್ಲ. ಹಾಜರಾತಿ ತುಂಬ ಕಡಿಮೆ ಇತ್ತು. ಅವನ ಮನೆಗೆ ಫೋನ್ ಮಾಡಿದೆ. ಅಪ್ಪ ಬೀದಿಯಲ್ಲಿ ತಳ್ಳುಗಾಡಿಯಲ್ಲಿ ಹಣ್ಣು-ಹಂಪಲು ಮಾರುವ ವ್ಯಕ್ತಿ. ಗಂಡ ಹೆಂಡತಿ ಹೆದರಿಕೊಂಡೇ ಸ್ಟಾಫ್ ರೂಂಗೆ ಬಂದರು. ಇಕ್ಬಾಲ್ ಬಗ್ಗೆ ತಿಳಿಸಿದೆ. ದಂಗಾದರು ದಿನವೂ ಒಂಭತ್ತಕ್ಕೆ ಮನೆ ಬಿಡ್ತಾನೆ... ಸಂಜೆ ಐದಕ್ಕೆ ಮನೆಗೆ ಬರ್ತಾನೆ... ತರಗತಿ ಬರ್ತಿಲ್ಲಾಂದ್ರೆ... ಅಮ್ಮನ ಕಣ್ಣಲ್ಲಿ ನೀರು. ಅಪ್ಪನ ಕಣ್ಣಲ್ಲಿ ಸಿಟ್ಟು ಕುಡಿಯಲು ನೀರು ಕೊಟ್ಟು ಕೂರಿಸಿದೆ, ಸಮಾಧಾನಿಸಿ 'ಎಷ್ಟು ಜನ ಮಕ್ಕಳು ನಿಮಗೆ?' 'ಒಬ್ಬನೆ ಸರ್... ಯಾರೇ ಒತ್ತಾಯಿಸಿದರೂ ಒಂದೇ ಮಗು ಸಾಕೆಂದು, ನಮ್ಮೆಲ್ಲ ದುಡಿಮೆ ಪ್ರೀತಿಯನ್ನು ಇವನೊಬ್ಬನಿಗೆ ಮೀಸಲಿಟ್ಟಿದ್ದೇವೆ. ನಮ್ಮ ಬದುಕೇ ಇವನಿಗಾಗಿ ಸರ್... ನಮ್ಮ ಮಗ ಅಂಥವನಲ್ಲ ಸರ್... ಸರಿಯಾಗಿ ನೋಡಿ ಸರ್... ನೀವು ದೂರು ಹೇಳುತ್ತಿರುವುದು ನಮ್ಮ ಮಗನಿರಲಿಕ್ಕಿಲ್ಲ' ಎಂದರು. ಸಿಟ್ಟಾಗಿದ್ದ ಅಪ್ಪನ ಕಣ್ಣು ನೀರಾಡತೊಡಗಿತ್ತು. ಅಮ್ಮನ ಕಣ್ಣೀರಿಗೆ ಕೋಡಿ ಬಿದ್ದಿತ್ತು. ಮತ್ತೆ ಮತ್ತೆ ಸಮಾಧಾನ ಹೇಳಿದೆ. 'ನೋಡಿ ಇವ್ರೆ ಅಂಥ ಪ್ರಮಾದವೇನೂ ಆಗಿಲ್ಲ. ಕಾಲೇಜು ಪ್ರಾರಂಭವಾಗಿ ಎರಡು ತಿಂಗಳಾಗಿದೆ... ಮುಂದಿನ ಎಲ್ಲ ತರಗತಿಗಳಿಗೆ ತಪ್ಪಿಸದೆ ಬರ್ಲಿ ಅಂತ ನಿಮಗೆ ಈ ವಿಷಯ ತಿಳಿಸುತ್ತಿದ್ದೇವೆ. ನೀವು ಈಗ ಮನೆಗೆ ಹೋಗಿ. ಇವತ್ತೂ ಇಕ್ಬಾಲ್ ಕಾಲೇಜಿಗೆ ಬಂದಿಲ್ಲ. ಸಂಜೆ ಐದಕ್ಕೆ ಹೇಗೂ ಮನೆಗೆ ಬರ್ತಾನಲ್ಲ... ವಿಚಾರಿಸಿ. ದಯವಿಟ್ಟು ಸಿಟ್ಟಿನಲ್ಲಿ ಬೈಯುವುದು ಹೊಡೆಯುವುದು ಮಾಡಬೇಡಿ. ನಾಳೆ ಅವನ ಜೊತೆ ನೀವೂ ಕಾಲೇಜಿಗೆ ಬನ್ನಿ. ವಿಚಾರಿಸುವ... ತಿಳಿ ಹೇಳಿ ಸರಿಮಾಡುವ' ಎಂದು ಹೇಳಿ ಕಳಿಸಿದೆ.

ಆಶ್ಚರ್ಯವೆಂಬಂತೆ ಅಂದೇ ಮಧ್ಯಾಹ್ನ 2.30ರ ನನ್ನ ಅಕೌಂಟೆನ್ಸಿ ಕ್ಲಾಸ್‌ಗೆ ಇಕ್ಬಾಲ್ ಹಾಜರಿದ್ದ. ಅಪ್ಪ ಅಮ್ಮ ಕಾಲೇಜಿಗೆ ಬಂದದ್ದು ಗೊತ್ತಾಗಿಯೋ ಏನೋ ತರಗತಿಗೆ ಬಂದು ಬಿಟ್ಟಿದ್ದ. 'ಏಯ್ ಇಕ್ಬಾಲ್, ಬಾರೋ ಇಲ್ಲಿ... ಬೆಳಗ್ಗೆ ಎಲ್ಲಿಗೆ ಹೋಗಿದ್ದೆ? ನಡೆದಿರುವ ಮೂವತ್ತು ಪೀರಿಯಡ್ ಕ್ಲಾಸ್‌ಗಳಲ್ಲಿ ಹತ್ತು ಪೀರಿಯಡ್ಡೂ ಬಂದಿಲ್ಲ ನೀನು' ಬೈಯತೊಡಗಿದೆ ನನಗೆ ಸಿಟ್ಟೇರತೊಡಗಿತು. 'ನಿನಗಾಗಿ ಪ್ರಾಣಬಿಡುವ ತಂದೆ ತಾಯಿಗೆ ಮೋಸ ಮಾಡುತ್ತೀಯ ಈಡಿಯಟ್' ಎಂದು ಕೆನ್ನೆಮೇಲೆ ರಪರಪ ನಾಲ್ಕೇಟು ಬಾರಿಸಿಬಿಟ್ಟೆ. ಮೊದಲೇ ಕೆಂಪಗೆ ತೊಂಡೆಹಣ್ಣಿನಂತಿದ್ದ ಇಕ್ಬಾಲನ ಕೆನ್ನೆಗಳು ಕುಂಕುಮ ಮೆತ್ತಿದಂತೆ ಇನ್ನೂ ಕೆಂಪಾಗಿಬಿಟ್ಟವು. ಇಕ್ಬಾಲ್ ಮಾತಾಡುತ್ತಿಲ್ಲ. ಅವನ ಕಣ್ಣಲ್ಲಿ ನೀರು... ಮೌನ... ತರಗತಿ ನಿಶ್ಶಬ್ದ.

'ಏಯ್ ಇಕ್ಬಾಲ್ ಮಾತಾಡೊ... ನಿನ್ನ ಅಪ್ಪ ಅಮ್ಮ ಯಾವತ್ತಾದರೂ ನಿನಗೆ ಏಟು ಕೊಟ್ಟಿದ್ದಾರೇನೋ...? 'ಸರ್'- ಇಕ್ಬಾಲ್ ಮೌನ ಮುರಿದ. 'ಸರ್... ಕೆನ್ನೆಮೇಲೆ ಏಟುಬಿದ್ದರೆ ಹೇಗಿರುತ್ತೆ ಅಂತ ನನಗೆ ಇವತ್ತೆ ಗೊತ್ತಾಗಿದ್ದು... ನನ್ನ ಅಪ್ಪ ಅಮ್ಮ ನನಗೆ ಗದರಿಸಿದ್ದು ನೆನಪಿಲ್ಲ ಸರ್'. ಇಕ್ಬಾಲ್ ಕಣ್ಣಲ್ಲಿ ನೀರಾಡುತ್ತಿತ್ತು. ಮನಸ್ಸು ಕಸಿವಿಸಿಗೊಂಡಿತು. ಯಾಕೋ- ಇಕ್ಬಾಲ್‌ಗೆ ನಾನು ಏಟು ಕೊಟ್ಟದ್ದು ಸರಿಯಲ್ಲವೇನೋ ಅನಿಸತೊಡಗಿತು.

'ಇಕ್ಬಾಲ್ I am sorry ಕಣೋ. ನಿನ್ನ ಮೇಲಿನ ಕಾಳಜಿಯಿಂದ ಎರಡೇಟು ಕೊಟ್ಟಿರುವೆ, ಅನ್ಯತಾ ಭಾವಿಸಬೇಡ ಇನ್ಮುಂದೆ ಕಾಲೇಜಿಗೆ ಸರಿಯಾಗಿ ಬಾ, once again, I am sorry ಇಕ್ಬಾಲ್' ಎಂದೆ. "No sir ನೀವು ನನಗೆ sorry ಕೇಳಬಾರ್ದು, ನೀವು ನನ್ನ ಗುರುಗಳು. ನನ್ನ ಇಷ್ಟದ ಗುರುಗಳು' ಕಣ್ಣೀರೊರೆಸಿಕೊಳ್ಳುತ್ತಿದ್ದ ಇಕ್ಬಾಲ್. 'ಅಲ್ಲಯ್ಯ... ನಿನ್ನ ಅಪ್ಪ ಅಮ್ಮನೆ ನಿನಗೆ ಒಂದೇಟು ಕೊಟ್ಟಿಲ್ಲ ನಾನು ಕೊಟ್ಟು ಬಿಟ್ಟೆ' ಅವನ ಭುಜದ ಮೇಲೆ ಕೈ ಇಟ್ಟೆ. 'ಹೌದು ಸರ್... ನನ್ನಂಥ ಅಶಿಸ್ತಿನ ಹುಡುಗನನ್ನು ಪ್ರೀತಿಸುವ ನಿಮಗೆ ನನ್ನನ್ನು ಶಿಕ್ಷಿಸುವ ಹಕ್ಕೂ ಇದೆ... ನೀವು ನನಗೆ ಏನೇ punishment ಕೊಡಿ ಬೇಜಾರಿಲ್ಲ... ಆದರೆ ನೀವು sorry ಕೇಳಿದರೆ ಬೇಜಾರಾಗುತ್ತೆ' ಎಂದು ನನ್ನ ಮಂಡಿಯವರೆಗೆ ಅವನ ಮೈಬಾಗಿಸಿದ



ಹೃದಯ ತುಂಬಿ ಬಂತು. ಇಕ್ಬಾಲ್‌ನನ್ನು ತಬ್ಬಿ ನೇವರಿಸಿದೆ. Really I am proud of the students like you Iqbal' ಎಂದೆ. ನನ್ನ ಕಣ್ಣಲ್ಲೂ ನೀರು.

ಇತ್ತೀಚೆಗೆ ನಾನು ಪ್ರಾಂಶುಪಾಲನಾಗಿ Chamber ನಲ್ಲಿ ಕುಳಿತ್ತಿದ್ದಾಗ ಸ್ಫುರದ್ರೂಪಿ ಯುವಕನೊಬ್ಬ May I come in sir' ಎಂದ. 'ಯಾರೂ...? ಬನ್ನಿ' ಎಂದೆ... ಯಾರು...? ಗೊತ್ತಾಗಲಿಲ್ಲ...? ಅಂದೆ. ಅವನ ಪರಿಚಯದ ಕಾರ್ಡು ಕೊಟ್ಟ "Iqbal, Marketing Manager, Sun Home Appliances Ltd. Bombay". ಹೇಳಿ ನನ್ನಿಂದೇನಾಗಬೇಕಿತ್ತು? ಪ್ರಶ್ನಿಸಿದೆ. "ಸರ್... ನಾನು ಸರ್ ಇಕ್ಬಾಲ್... ಶಾರುಕ್... ಕೆನ್ನೆ... ಏಟು... ನೆನಪಾಯಿತ ಸರ್.' ನೆನಪಿನ ಸುರುಳಿ ಬಿಚ್ಚಿಕೊಂಡಿತು.

ಇಕ್ಬಾಲ್ ಪಟ ಪಟ ಮಾತಾಡುತ್ತಿದ್ದ. PUC 58% ತೆಗೆದದ್ದು, B. com, First class ನಲ್ಲಿ ಪಾಸ್ ಮಾಡಿದ್ದು, ಕಂಪನಿಗಳಿಗೆ interview ಹೋಗಿದ್ದು ಎಲ್ಲವನ್ನೂ ವಿವರಿಸಿದ. 'ಇದೆಲ್ಲದಕ್ಕೂ ನಿಮ್ಮ ಆಶೀರ್ವಾದ ಕಾರಣ ಸರ್' ಎಂದ. 'ಏಯ್ ಶಾರುಕ್ ಈಗ ಈ ಬದುಕು ಎಷ್ಟು ಸುಂದರವಾಗಿದೆ ಅನಿಸುತ್ತಿದೆ ಅಲ್ವಾ... ಇದಕ್ಕೆ ಕಾರಣ ಯಾರು ಗೊತ್ತ... ನಿನ್ನಮ್ಮನ ಕಣ್ಣೀರು ಮತ್ತು ನಿಮ್ಮಪ್ಪನ ಬೆವರು ಅವರನ್ನು ಚೆನ್ನಾಗಿ ನೋಡಿಕೋ. "I Appreciate your achievements" ಎಂದು ಕೈಕುಲುಕಿದೆ. ಬಿಸ್ಕತ್ತು ಟೀ ಬಂತು. ಉಪಚರಿಸಿದೆ. Wish you all the best Sharukh ಅಲ್ಲ Iqbal ಎಂದು ಬೀಳ್ಕೊಟ್ಟೆ.

## ಹೆಣ್ಣು ನಮ್ಮ ಕಣ್ಣು

ನಮ್ಮನ್ನು ಹೊತ್ತಿರುವ ಭೂತಾಯಿ ಹೆಣ್ಣು
ನಮಗೆ ನೀರು ಕೊಡುವ ಜಲದೇವಿ ಹೆಣ್ಣು
ನಮ್ಮನ್ನು ಲಾಲಿಸಿ ಪಾಲಿಸುವ ತಾಯಿ ಹೆಣ್ಣು
ನಾವು ನಂಬುವ ವನಶಕ್ತಿಯು ಹೆಣ್ಣು
ನಮ್ಮ ಸಹೋದರಿಯು ಒಂದು ಹೆಣ್ಣು
ಮುಂದೆ ಜೀವನದಲ್ಲಿ ಸಂಗಾತಿಯಾಗುವವಳು ಹೆಣ್ಣು
ನಮ್ಮ ಮನೆ ನಡೆಸುವವಳು ಹೆಣ್ಣು
ದೇಶ ಕಾಯುವ ಮಕ್ಕಳನ್ನು ಬೆಳೆಸುವವಳು ಹೆಣ್ಣು
ಇಂದು ಹೆಣ್ಣು ನಮ್ಮ ಕಣ್ಣಾಗಿ ನಿಂತಿರಲು
ಆ ನಿಮ್ಮ ಕಣ್ಣುಗಳಿಗೆ ನೀವೇ ಏಕೆ ಚುಚ್ಚಿಕೊಳ್ಳುವಿರಯ್ಯ
ಹೆಣ್ಣಿನ ಮೇಲೆ ನಿಮ್ಮ ಶೋಷಣೆ ಏಕಯ್ಯ
ಹೆಣ್ಣಿಲ್ಲದಿದ್ದರೆ ಜಗತ್ತು ಏನಾಗುವುದೆಂದು ತಿಳಿದಿದ್ದಿರೇನಯ್ಯ
ಅವರು ಯಾರೇ ಆಗಲಿ ಅವರನ್ನು ಎಂದಿಗೂ ಗೌರವದಿಂದ ಕಾಣಿರಯ್ಯ

**ಪೂಜಾ ಎಂ .ವಿ.**
ದ್ವಿತೀಯ ಬಿ.ಎಸ್ಸಿ., (ಪಿ.ಎಂ.ಇ.)

# ಮರುಜನ್ಮ

– ದಿವ್ಯ ಕೆ.
ಬಿ.ಎಸ್ಸಿ., ಪಿ.ಎಂ.



ಕುಗ್ರಾಮವೊಂದರಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿಗಳು ಮಧುಕರ ಹಾಗೂ ಶುಭಕರ.

ಇವರಿಬ್ಬರು ಓದಿನ ಜೊತೆ ಆಟೋಟ, ಕಲೆ, ಸಾಹಿತ್ಯ ಎಲ್ಲಾ ವಿಷಯದಲ್ಲೂ ಮುಂದಿದ್ದರು. ಇವರ ಬುದ್ಧಿವಂತಿಕೆ ಚುರುಕುತನ ನೋಡಿ ಶಾಲಾ ಶಿಕ್ಷಕರು ಹಾಗೂ ಪೋಷಕರು ಮುಂದೊಂದಿನ ಇವರು ಮಹಾನ್ ಸಾಧಕರಾಗುವರೆಂದು ನಂಬಿದ್ದರು. ಅವರ ಬುದ್ಧಿವಂತಿಕೆ ಇನ್ನೂ ಉನ್ನತವಾದ ಶಿಕ್ಷಣ ಒದಗಿಸುವ ನಿಟ್ಟಿನಿಂದ ಸಮೀಪದ ವಸತಿ ಶಾಲೆಯಲ್ಲಿ ಬಿಡಲಾಯಿತು. ಮೊದಮೊದಲು ಆಸಕ್ತಿಯಿಂದ ಓದುತ್ತಿದ್ದ ಇವರಲ್ಲಿ ಅದ್ಯಾವ ಪಟ್ಟಣದ ಭೂತ ಹತ್ತಿತೋ ಗೊತ್ತಿಲ್ಲ. ಒಂದು ದಿನ ಸಂಚು ಮಾಡಿ ಪಟ್ಟಣ ಸೇರುವ ನಿರ್ಧಾರಕ್ಕೆ ಬಂದರು. ಅದರಂತೆ ಇಬ್ಬರು ತಮ್ಮ ಕೈಯಲ್ಲಿದ್ದ ಪುಡಿಗಾಸನ್ನು ಸೇರಿಸಿಕೊಂಡು ಹೇಳದೆ ಕೇಳದೆ ಹೊರಟೇ ಬಿಟ್ಟರು. ಪೋಷಕರು ಸಂಕಟ ಹೇಳ ತೀರದಾಯಿತು. ಇದೇ ನೋವಿನಲ್ಲಿ ಪೋಷಕರು ಕಣ್ಣೀರಲ್ಲಿ ಕೈತೊಳೆಯುವಂತಾಯಿತು.

ಅತ್ತ ಎಲ್ಲರನ್ನು ತೊರೆದು ಹೋದ ವಿದ್ಯಾರ್ಥಿಗಳು ಕೈಯಲ್ಲಿದ್ದ ಪುಡಿಗಾಸನ್ನು ಕಳೆದುಕೊಂಡು ಬೀದಿಗೆ ಬಿದ್ದರು. ಬಣ್ಣ ಬಣ್ಣದ ಕನಸು ಹೊತ್ತು ಊರು ಬಿಟ್ಟ ಬಾಲಕರು ಪಟ್ಟಣದ ಕ್ರೌರ್ಯ ಕ್ರೂರತೆಗೆ ಕರಗಿ ಹೋದರು. ದುರಂತವೆಂದರೆ ಹಣಕ್ಕಾಗಿ ಪರದಾಡುತ್ತಿದ್ದ ಇವರು ದುಷ್ಟರ ಕೈಸೇರಿ ಜೀತಕ್ಕೆ ಬೀಳಬೇಕಾಯಿತು. ಆಗ ಇವರಿಬ್ಬರೂ ಬೇರೆ ಬೇರೆ ಕಡೆಯಲ್ಲಿದ್ದು ದುಡಿಯಬೇಕಾಯಿತು. ಇವರಿಬ್ಬರೂ ತಮಗೊದಗಿದ ದುಸ್ಥಿತಿಯನ್ನು ನೆನೆದು ಹಾಗೂ ಪೋಷಕರನ್ನು ನೆನೆದು ದುಃಖಪಟ್ಟರು. ಮನೆಗೆ ಹಿಂತಿರುಗಲು ಕೈಯಲ್ಲಿ ಕಾಸಿಲ್ಲ. ಹೀಗಿರುವಾಗ ಮಧುಕರ ಕೆಲಸ ಮಾಡುತ್ತಿದ್ದ ಕಡೆಗೆ ಅಚಾನಕ್ಕಾಗಿ ಬಂದ ಶಿಕ್ಷಕರೊಬ್ಬರು ಆತನ ಪಾಲಿಗೆ ದೇವರಾದರು. ಅವರು ಮಧುಕರನನ್ನು ಪಾಪಕೂಪದಿಂದ ಬಿಡಿಸಿ ಕರೆದೊಯ್ದು ಉತ್ತಮ ವಿದ್ಯಾಭ್ಯಾಸ ನೀಡಿ ಆತನ ಹಣೆಬರಹವನ್ನೇ ಬದಲಿಸಿದರು. ಆತ ದೊಡ್ಡ ಮನೋವೈದ್ಯನಾಗಿ ಇಂತಹ ಮಾನಸಿಕ ದೌರ್ಬಲ್ಯಗಳಿಗೊಳಗಾಗಿ ಭವಿಷ್ಯವನ್ನೇ ಹಾಳುಮಾಡಿಕೊಳ್ಳುವ ಇಂತಹ ಮಕ್ಕಳ ಮನಪರಿವರ್ತನೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ.

ಇತ್ತ ಶುಭಕರನ ದುಸ್ಥಿತಿ ಹೇಳತೀರದು. ಅತ್ತ ಪೋಷಕರನ್ನು ಕಳೆದುಕೊಂಡು, ಇತ್ತ ಪ್ರಾಣ ಸ್ನೇಹಿತನಿಂದಲೂ ದೂರಾಗಿ ಮನೋವೈಕಲ್ಯದಿಂದ ನರಳುತ್ತ ಖಾಯಿಲೆ ಬಿದ್ದನು.

ಆಸ್ಪತ್ರೆಯಲ್ಲಿ ನರಳುತ್ತಿದ್ದ ಶುಭಕರನಿಗೆ ಚಿಕಿತ್ಸೆ ನೀಡಲು ಬಂದ ಮಧುಕರನಿಗೆ ಸ್ನೇಹಿತನನ್ನು ನೋಡಿ, ಆಶ್ಚರ್ಯ, ದುಃಖ ಜೊತೆಗೆ ಸಂತೋಷ ಅನುಕಂಪ ಎಲ್ಲಾ ಭಾವಗಳ ಮಿಶ್ರಣದಿಂದ ಮಾತೇ ಹೊರಡದಾಯಿತು. ಸ್ನೇಹಿತನನ್ನು ಆಲಂಗಿಸಿಕೊಂಡು ಬಿಕ್ಕಿ ಬಿಕ್ಕಿ ಅತ್ತ. ನಂತರ ಸಾವರಿಸಿಕೊಂಡು ಸ್ನೇಹಿತನಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸಿದ. ಅಂದಿನಿಂದ ಈ ಇಬ್ಬರು ಗೆಳೆಯರು ಪ್ರತಿ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ದೇವತಾ ಸ್ವರೂಪದಲ್ಲಿ ಬಂದ ಶಿಕ್ಷಕರು ಮಧುಕರನಿಗೆ ಮರುಜನ್ಮ ನೀಡಿದರು. ಮಧುಕರನಿಂದ ಶುಭಕರನಿಗೂ ಪುನರ್ಜನ್ಮ ದೊರೆಯಿತು. ಸ್ನೇಹಿತರೆ ನಾವು ಯಾವ ವಯಸ್ಸಿನಲ್ಲಿ ಏನು ಮಾಡಬೇಕೋ ಅದನ್ನೇ ಮಾಡಬೇಕು. ಓದುವ ವಯಸ್ಸಿನಲ್ಲಿ ದುಡಿಯುವ ಹಂಬಲ ಮಾಡಿ ಹೊರಟರೆ ತಮ್ಮ ಉಜ್ವಲವಾದ ಭವಿಷ್ಯನ್ನೇ ಬಲಿಕೊಡಬೇಕಾಗುತ್ತದೆ.



# ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರವರ ನುಡಿಮುತ್ತುಗಳು



1) ಜ್ಞಾನ ಎಂಬುದು ಎಂದಿಗೂ ನಿಂತ ನೀರಾಗಬಾರದು. ಸದಾ ಹೆಚ್ಚುತ್ತಲೇ ಇರಬೇಕು. ಇದು ನಿಮ್ಮ ವೈಯಕ್ತಿಕ ಸ್ವಾತಂತ್ರ್ಯ ಪಡೆಯಲು ಬೇಕಾದ ಪ್ರಮುಖ ಅಸ್ತ್ರ.

2) ವೃತ್ತಿ ಜೀವನದ ತುತ್ತತುದಿಗೆ ಏರುವವರು ಯಾವತ್ತೂ ತಮ್ಮ ತಾದಾತ್ಮ್ಯವನ್ನು ಕೆಲಸದ ಮೇಲೆ ಕೇಂದ್ರೀಕರಿಸಿ ದುಡಿಯುತ್ತಾರೆ. ಹೀಗೆ ಸಂಪೂರ್ಣ ತೊಡಗಿಸಿಕೊಂಡ ಬಳಿಕ ಯಾವುದೇ ಇನ್ನಿತರ ಇಚ್ಛೆಗಳಿಗೆ ಆಸ್ಪದ ಇಲ್ಲ.

3) ನೀವು ಒಂದೇ ವಸ್ತುವನ್ನು ಹಿಡಿದು ಕುಳಿತರೆ ಬುದ್ಧಿ ಜಿಡ್ಡುಗಟ್ಟುತ್ತದೆ. ಆದ್ದರಿಂದ ಹೊಸ ಆಯಾಮಗಳನ್ನು ಕಂಡುಕೊಳ್ಳಬೇಕು.

4) ಕ್ರಿಯಾಶೀಲ ನಾಯಕರು ಯಾವಾಗಲೂ ಸಂಸ್ಥೆಗೆ ಹೊಸ ಶಕ್ತಿಯನ್ನು ಹರಿಯಬಿಡಬೇಕು. ಹೊಸ ತತ್ವಗಳನ್ನು ಅನುಸರಿಸುವಾಗ ಏನಾದರೂ ಸಮಸ್ಯೆಗಳು ಬಂದರೆ ಅದನ್ನು ನಿಭಾಯಿಸುವ ಚೈತನ್ಯವಿರಬೇಕು.

# ಸ್ವಾಮಿ ವಿವೇಕಾನಂದರ ನುಡಿಮುತ್ತುಗಳು



1) ದೌರ್ಬಲ್ಯಕ್ಕೆ ಪರಿಹಾರ ದೌರ್ಬಲ್ಯವನ್ನು ಕುರಿತು ಆಲೋಚಿಸುವುದಲ್ಲ. ಆದರೆ ಶಕ್ತಿಯನ್ನು ಕುರಿತು ವಿಚಾರ ಮಾಡುವುದು.

2) ಯಾವ ಬಗೆಯ ಶಿಕ್ಷಣದಿಂದ ಶೀಲರೂಪಗೊಳ್ಳುವುದೋ, ಮನಶ್ಶಕ್ತಿ ವೃದ್ಧಿಯಾಗುವುದೊ, ಬುದ್ಧಿ ವಿಕಾಸಗೊಳ್ಳುವುದೊ ಮತ್ತು ಯಾವುದರಿಂದ ನಮ್ಮ ಸ್ವಂತ ಕಾಲ ಮೇಲೆ ನಾವು ನಿಂತು ಕೊಳ್ಳಬಲ್ಲೆವೋ ಅಂತಹ ಶಿಕ್ಷಣ ನಮಗೆ ಅವಶ್ಯಕ.

ಗಣಿತ ಶಾಸ್ತ್ರ ವಿಭಾಗದಲ್ಲಿ ಸುಮಾರು 496 ವಿದ್ಯಾರ್ಥಿಗಳಿದ್ದು, ಇವರಲ್ಲಿ ಅನೇಕ ವಿದ್ಯಾರ್ಥಿಗಳು 100ಕ್ಕೆ 100ರಷ್ಟು ಅಂಕಗಳನ್ನು ಪಡೆದು ನಮ್ಮ ವಿಭಾಗಕ್ಕೆ ಹಾಗೂ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಇಂತಹ ವಿದ್ಯಾರ್ಥಿಗಳಿಗೆ ವಿಭಾಗದಿಂದ ಸೂಕ್ತ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. 2016–17ರ ಸಾಲಿನ ಒಟ್ಟು 8 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಮತ್ತು ಅಂತಿಮ ಬಿ.ಎಸ್ಸಿ. ತರಗತಿಯಲ್ಲಿ ಮೂವರು ವಿದ್ಯಾರ್ಥಿಗಳು 200ಕ್ಕೆ 200 ಅಂಕಗಳನ್ನು ಪಡೆದಿರುತ್ತಾರೆ. ಇದು ನಮ್ಮ ವಿಭಾಗಕ್ಕೆ ಗೌರವ ತರುವ ಸಂಗತಿ ಆಗಿದೆ. ಹೆಚ್ಚು ಅಂಕ ತೆಗೆದ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ವಿಭಾಗದ ವತಿಯಿಂದ ಸಲ್ಲಿಸುತ್ತೇನೆ. ಇದಕ್ಕೆ ಸಹಕರಿಸಿದ ವಿಭಾಗದ ಎಲ್ಲಾ ಪ್ರಾಧ್ಯಾಪಕರುಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.





## ಇಲೆಕ್ಟ್ರಾನಿಕ್ಸ್ ವಿಭಾಗದ ವರದಿ

ಇಲೆಕ್ಟ್ರಾನಿಕ್ಸ್ ವಿಭಾಗವು 1986–87ರ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭವಾಯಿತು. ಪ್ರೊ. ಎನ್.ಎಸ್. ಬಾಪಟ್, ಪ್ರೊ. ಎಸ್. ದಾಶರಥಿ ಮತ್ತು ಪ್ರೊ. ವೆಂಕಟೇಶಮೂರ್ತಿಯವರ ಪರಿಶ್ರಮದಿಂದ ವಿಭಾಗವು ಉತ್ತಮ ಬೆಳವಣಿಗೆಯನ್ನು ಹೊಂದಿತು. ವಿಭಾಗವು ಉತ್ತಮವಾದ ಪ್ರಯೋಗಾಲಯವನ್ನು ಹೊಂದಿದ್ದು ಪ್ರತಿವರ್ಷವೂ ಅತ್ಯುತ್ತಮ ಫಲಿತಾಂಶವು ಬರುತ್ತಿದೆ. ವಿಭಾಗದ ಹಲವಾರು ವಿದ್ಯಾರ್ಥಿಗಳು ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಆಯ್ಕೆಗೊಂಡು ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವಿಭಾಗದಲ್ಲಿ ಓದಿದ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉತ್ತಮ ಉದ್ಯೋಗವನ್ನು ಮಾಡುತ್ತಿರುವುದು ಕಾಲೇಜಿಗೆ ಮತ್ತು ವಿಭಾಗಕ್ಕೆ ಹೆಮ್ಮೆಯ ವಿಷಯವಾಗಿದೆ.

ನಮ್ಮ ಕಾಲೇಜಿನ ಇಲೆಕ್ಟ್ರಾನಿಕ್ಸ್ ವಿಭಾಗವು ಮುಂಚೂಣಿಯಲ್ಲಿದ್ದು, ಹೊಸ ಪಠ್ಯಕ್ರಮ ಬಂದಾಗ ಪ್ರಾಯೋಗಿಕ ವಿಷಯಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯ ಮಟ್ಟದ ಕಾರ್ಯಾಗಾರವನ್ನು ನಡೆಸಲಾಗಿತ್ತು. ಹೊಸ ವಿಷಯಗಳಾದ ರೊಬ್ಯಾಟಿಕ್ಸ್, ಡಿಜಿಟಲ್ ಟೆಕ್ನಾಲಜಿ ಮತ್ತು ಇನ್ನಿತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಕಾರ್ಯಾಗಾರ ಮತ್ತು ಸೆಮಿನಾರ್‌ಗಳನ್ನು ನಡೆಸಲಾಗಿದೆ.

ವಿಭಾಗದ ವಿದ್ಯಾರ್ಥಿಗಳು ವಿಜ್ಞಾನ ಭಾಷಣ ಸ್ಪರ್ಧೆ, ವಿಜ್ಞಾನ ವಸ್ತು ಪ್ರದರ್ಶನ ಮತ್ತು ಇತರೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿರುತ್ತಾರೆ. ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಈಗಲೂ ನಮ್ಮ ವಿಭಾಗವನ್ನು ನೆನಪಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ವರ್ಷದಲ್ಲಿ ನಮ್ಮ ಪ್ರೀತಿಯ ಹಿರಿಯ ವಿದ್ಯಾರ್ಥಿಗಳಿಗೂ ಮತ್ತು ಈಗ ಓದಿರುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಒಳ್ಳೆಯ ಭವಿಷ್ಯ ಲಭಿಸಲಿ ಎಂದು ಹಾರೈಸುತ್ತಿದ್ದೇವೆ.

**ಬಿ.ಎನ್. ಸುನಂದ – ಎಸ್.ಡಿ. ಉಮೇಶ**
ಎಲೆಕ್ಟ್ರಾನಿಕ್ಸ್ ವಿಭಾಗ

---

## ಸಸ್ಯಶಾಸ್ತ್ರ ವಿಭಾಗದ ವರದಿ

2016–17ನೇ ಶೈಕ್ಷಣಿಕ ವರ್ಷ ಎಂದಿನಂತೆ ಹೊಸ ಹುಮ್ಮಸ್ಸಿನಿಂದ ಪ್ರಾರಂಭವಾಯಿತು. ಸಸ್ಯಶಾಸ್ತ್ರ ವಿಭಾಗವು ನಮ್ಮ ಕಾಲೇಜಿನಲ್ಲಿ ಮೊದಲಿನಿಂದಲೂ ಶಿಸ್ತು ಹಾಗೂ ಕ್ರಮಬದ್ಧತೆಗೆ ಹೆಸರುವಾಸಿ. ಈ ಹಿಂದಿನಂತೆಯೇ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲಾ ಪರಿಶ್ರಮಗಳ ಫಲವಾಗಿ ಸಿಬಿಝಡ್ ವಿಭಾಗದಲ್ಲಿ ನಮ್ಮ ಕಾಲೇಜಿಗೆ ಕುವೆಂಪು ವಿಶ್ವವಿದ್ಯಾನಿಲಯದ ನಾಲ್ಕನೇ ರ್‍ಯಾಂಕ್ ಬಂದಿರುತ್ತದೆ.

ಇದರ ಜೊತೆಗೆ ಅನೇಕ ವಿದ್ಯಾರ್ಥಿಗಳು ಶೇಕಡ 90ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಒಟ್ಟಾರೆ ಶೇಕಡ 100ರಷ್ಟು ಫಲಿತಾಂಶ ಬಂದಿರುತ್ತದೆ.

ವಿದ್ಯಾರ್ಥಿಗಳ ಶೈಕ್ಷಣೀಕ ಅಭಿವೃದ್ಧಿಗೆ ಪೂರಕವಾಗುವಂತೆ ಯು.ಜಿ.ಸಿ. ಸಹಯೋಗದೊಂದಿಗೆ ಪದವಿ ಮಟ್ಟದ ಸಂಶೋಧನೆಗೆ ಅನುಗುಣವಾಗಿ ಅನೇಕ ಹೊಸ ಉಪಕರಣಗಳನ್ನು ತರಿಸಿ ಪ್ರಯೋಗ ಶಾಲೆಯನ್ನು ಮೇಲ್ದರ್ಜೆಗೆ ಅಭಿವೃದ್ಧಿ ಪಡಿಸಲಾಗಿದೆ.

ಪ್ರಸ್ತುತ ಆಯುರ್ವೇದ ಔಷಧಿಯ ಮಹತ್ವವನ್ನು ಪರಿಗಣಿಸಿ ಔಷಧಿ ಸಸ್ಯಗಳ ಒಂದು ಉದ್ಯಾನವನವನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಲ್ಲಿ ವಿವಿಧ ಬಗೆಯ 125ಕ್ಕೂ ಹೆಚ್ಚು ಔಷಧೀಯ ಸಸ್ಯಗಳನ್ನು ಬೆಳೆಸಲಾಗಿದೆ.

ಈ ಪ್ರಸಕ್ತ ವರ್ಷದಲ್ಲಿ ಹೊಸ ಅತಿಥಿ ಉಪನ್ಯಾಸಕರನ್ನು ಸಹಾ ನೇಮಕ ಮಾಡಿಕೊಳ್ಳಲಾಗಿದೆ. ನಮ್ಮ ವಿಭಾಗವು ವಿದ್ಯಾರ್ಥಿಗಳ, ಉಪನ್ಯಾಸಕರುಗಳ, ಅಧ್ಯಾಪಕೇತರ ನೌಕರರುಗಳ ಪರಿಶ್ರಮ ಹಾಗೂ ಸಹಕಾರದಿಂದ ಒಂದು ಉತ್ತಮ ವಿಭಾಗವಾಗಿ ಹೊರಹೊಮ್ಮಲು ಸಹಕರಿಸಿದ ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರು ಹಾಗೂ ಎಲ್ಲಾ ಪೋಷಕರಿಗೆ ವಂದನೆಗಳು.

**ಸುಧಾಕರ ಹೆಚ್.ಎನ್.**
ಮುಖ್ಯಸ್ಥರು, ಸಸ್ಯಶಾಸ್ತ್ರ ವಿಭಾಗ

# ಪ್ರಾಣಿಶಾಸ್ತ್ರ ವಿಭಾಗದ ಒಂದು ಪಕ್ಷಿನೋಟ

_ ಡಾ. ಗೀತಾ ಸಾಮಕ್, ಪ್ರಾಣಿಶಾಸ್ತ್ರ ವಿಭಾಗ ಮುಖ್ಯಸ್ಥರು

ನಿಸರ್ಗದ ವಿಷಯಗಳ ಆಗರವಾದ ಪ್ರಾಣಿಗಳ ಬಗ್ಗೆ ಬೋಧಿಸುವ ಪ್ರಾಣಿಶಾಸ್ತ್ರ ವಿಭಾಗ, ಡಿ ವಿ ಎಸ್ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ 1972ರಲ್ಲಿ ಪ್ರೊ. ಎಂ. ಗುರುಮೂರ್ತಿಯವರ ಮುಂದಾಳತ್ವದಲ್ಲಿ ಆರಂಭಗೊಂಡಿತು. ಪ್ರಾರಂಭದಲ್ಲಿ ಜೀವಶಾಸ್ತ್ರ ವಿಭಾಗ ಎಂತಿದ್ದು, ನಂತರದಲ್ಲಿ ಪ್ರಾಣಿ ಮತ್ತು ಸಸ್ಯಶಾಸ್ತ್ರ ವಿಭಾಗಗಳಾಗಿ ಬೇರ್ಪಟ್ಟಿತು. ಅಂದಿನಿಂದ ಇಂದಿನವರೆಗೆ ನಾಲ್ಕು ವಿಭಾಗ ಮುಖ್ಯಸ್ಥರು 20ಕ್ಕು ಮಿಕ್ಕಿ ಉಪನ್ಯಾಸಕರು ಹಾಗು ಸಹಾಯಕ ಸಿಬ್ಬಂದಿಯವರ ಅವಿರತ ಪ್ರಯತ್ನಗಳ ಫಲವಾಗಿ ಪ್ರಾಣಿಶಾಸ್ತ್ರ ವಿಭಾಗ ಕಾಲೇಜಿನಲ್ಲಿ ಒಂದು ಪ್ರಮುಖ ವಿಭಾಗವಾಗಿ ಬೆಳೆದುನಿಂತಿದೆ.

| ಅವಧಿ | ವಿಭಾಗ ಮುಖ್ಯಸ್ಥರು | ಉಪನ್ಯಾಸಕರು | ಸಹಾಯಕ ಸಿಬ್ಬಂದಿ |
|---|---|---|---|
| 1972–1992 | ಪ್ರೊ. ಎಂ. ಗುರುಮೂರ್ತಿ | ಪ್ರೊ. ಎಂ.ಕೆ. ನಾರಾಯಣಮೂರ್ತಿ, ಡಾ. ಪ್ರಕಾಶ್ ನಾಯ್ಕ, ಡಾ. ಎಸ್. ಯಮಕನ ಮರಡಿ. ಪ್ರೊ. ಚಂದ್ರಪ್ಪ, ಪ್ರೊ. ಪ್ರಕಾಶ್ ಚುಳುಕಿ, ಡಾ. ಗೀತಾ ಸಾಮಕ್, ಶ್ರೀಮತಿ ಗಾಯತ್ರಿ, ಶ್ರೀಮತಿ ಸುಮತಿ, ಶ್ರೀಮತಿ ಶೈಲಜ, ಶ್ರೀ ಧರ್ಮರಾಜ, ಶ್ರೀ ಮಹಾಬಲೇಶ್ವರ, ಶ್ರೀ ಮೃತ್ಯುಂಜಯ, ಶ್ರೀ ಜೀವನ್. ಶ್ರೀ ಪ್ರಭಾಕರ್, ಡಾ. ಪ್ರಶಾಂತ್, ಶ್ರೀಮತಿ ಪೃಥ್ವಿ, ಶ್ರೀಮತಿ ಪೂಜಾ, ಕುಮಾರಿ ರಂಜಿತಾ, | ಶ್ರೀಧನಂಜಯ<br>ಶ್ರೀ ಬಸಪ್ಪ<br>ಶ್ರೀ ಈಶ್ವರಪ್ಪ<br>ಶ್ರೀ ಆಂಜನೇಯ |
| 1992–2012 | ಪ್ರೊ. ಎಂ.ಕೆ. ನಾರಾಯಣಮೂರ್ತಿ | | |
| 2012–2015 | ಡಾ. ಗೀತಾ ಸಾಮಕ್ | | |
| 2015–2017 ಏಪ್ರಿಲ್ | ಶ್ರೀ ಎನ್. ಕುಮಾರಸ್ವಾಮಿ, | | |
| 2017 ಏಪ್ರಿಲ್‌ನಿಂದ | ಡಾ. ಗೀತಾ ಸಾಮಕ್ | | |

ಪ್ರಾಣಿಶಾಸ್ತ್ರ ವಿಭಾಗ ಆಧುನಿಕ ಪ್ರಾಯೋಗಿಕ ಉಪಕರಣಗಳಿರುವ ಸುಸಜ್ಜಿತ ಪ್ರಯೋಗಾಲಯ, ಎಲ್‌ಸಿಡಿ ಪ್ರೊಜೆಕ್ಟರ್ ಮತ್ತು ಮ್ಯೂಸಿಯಂಗಳನ್ನು ಹೊಂದಿದೆ. ಈ ವಿಭಾಗವು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗಿನ ಪಟ್ಟಿಯಲ್ಲಿ ಕಾಣಿಸಲಾಗಿದೆ.

| ಕಾರ್ಯಕ್ರಮ | ವಿಷಯ | ವರ್ಷ | ಪ್ರಾಯೋಜನೆ | ಮುಖ್ಯಾ0ಶಗಳು |
|---|---|---|---|---|
| ರಾಜ್ಯ ಮಟ್ಟದ ವಿಚಾರಸ0ಕಿರಣ | ``DNA: Past, Present and Future" | 2004 | UGC | ಶಾ0ತಿ ಸ್ವರೂಪ ಭಾಟ್ನಗರ ಪ್ರಶಸ್ತಿ ವಿಜೇತ ವಿಜ್ಞಾನಿಗಳು, 1000 ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಭಾಗವಹಿಸಿದ ಯಶಸ್ವಿಕಾರ್ಯಕ್ರಮ. ಖ್ಯಾತ ರೆನೆಸಾನ್ಸ್ ಪತ್ರಿಕೆ ಸ0ಪಾದಕೀಯದಲ್ಲಿ ಪ್ರಶ0ಸೆ |
| ರಾಷ್ಟ್ರ ಮಟ್ಟದ ವಿಚಾರಸ0ಕಿರಣ | ಡಾರ್ವಿನ್–200, The Origin of Species ? 150 ಆಧುನಿಕ ದೃಷ್ಟಿ ಕೋನದಲ್ಲಿ ಡಾರ್ವಿನಿಸ0. | 2009 | UGC | ಖ್ಯಾತ ವಿಜ್ಞಾನಿಗಳು, 347 ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಭಾಗವಹಿಸಿದ್ದರು. |
| ಇನ್ನೋಫೆಸ್ಟ್–2012 | ವಿಶ್ವವಿದ್ಯಾಲಯ ಮಟ್ಟದ ವಿಜ್ಞಾನ ಉತ್ಸವಾಚರಣೆ | 2012 | -- | ಡಾ.ನಾ ಸೋಮೇಶ್ವರ ರಿ0ದ ಉದ್ಘಾಟನೆಗೊ0ಡು, ಅವರಿ0ದ ಆಯೋಜಿಸಲಾದ ರಸಪ್ರಶ್ನೆ, ಭಾಷಣ ಚರ್ಚಾ ಸ್ಪರ್ಧೆ ಮತ್ತು ಇತರ ಸ್ಪರ್ಧೆಗಳನ್ನೊಳಗೊ0ಡಿತ್ತು. |
| INSPIRE ಕಾರ್ಯಾಗಾರ | ವಿಜ್ಞಾನಿಗಳಿಂದ ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷತೆ ಮುಂತಾದ ಕಾರ್ಯಕ್ರಮಗಳು | 2012 | DST | ಖ್ಯಾತ ವಿಜ್ಞಾನಿ ಪದ್ಮಶ್ರೀ ಪ್ರೊ. ಎಮ್.ಆರ್.ಎಸ್.ರಾವ್ ಉದ್ಘಾಟಿಸಿದ್ದರು. ನಮ್ಮ ದೇಶದ 18 ಖ್ಯಾತ ವಿಜ್ಞಾನಿಗಳು ಭಾಗವಹಿಸಿದ್ದರು. ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷತೆ ಮುಂತಾದ ವಿವಿಧ ಕಾರ್ಯಕ್ರಮಗಳನ್ನೊಳಗೊ0ಡಿತ್ತು. |
| ರಾಷ್ಟ್ರ ಮಟ್ಟದ ವಿಚಾರಸ0ಕಿರಣ | Environmental Pollution: a threat to global life" | 2014 | UGC | ಪ್ರತಿಷ್ಠಿತ ರಾಯಲ್ ಸೊಸೈಟಿ ವಿಟ್ಲೆ ಪ್ರಶಸ್ತಿ ವಿಜೇತ, ಪಕ್ಷಿ ವಿಜ್ಞಾನಿ, ಡಾ. ರಮಣ ಆತ್ರೇಯ ಜೀವ ವೈವಿಧ್ಯತೆ ಸ0ಕೀರ್ಣತೆ ಕುರಿತಾಗಿ ಮಾತನಾಡಿದರು. |





ಪ್ರಾಣಿಶಾಸ್ತ್ರ ವಿಭಾಗದ ಇನ್ನೊಂದು ಹೆಗ್ಗಳಿಕೆ ಅದರ ವೈಜ್ಞಾನಿಕ ಸಂಶೋಧನೆ. ವಿಭಾಗದ ಪ್ರಾಧ್ಯಾಪಕರುಗಳು ವಿಶ್ವವಿದ್ಯಾಲಯ ಧನಸಹಯೋಗ ನೆರವಿನಿಂದ ಸಂಶೋಧನಾ ಕಾರ್ಯದಲ್ಲಿ ತೊಡಗಿಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿರುತ್ತಾರೆ. ದೇಶದ ಪ್ರತಿಷ್ಠಿತ ವಿಜ್ಞಾನ ಸಂಶೋಧನಾ ಕೇಂದ್ರಗಳಲ್ಲಿ ನಮ್ಮ ವಿದ್ಯಾರ್ಥಿಗಳು ಬೇಸಿಗೆ ಶಿಬಿರಾರ್ಥಿಗಳಾಗಿ ಸಂಶೋಧನೆ ಮಾಡಿರುತ್ತಾರೆ. ಈ ವಿಭಾಗದ ಮುಖ್ಯಸ್ಥರಾದ ಡಾ॥ ಗೀತಾ ಸಾಮಕ್ ಅವರಿಗೆ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನದ ಬಯೋಟೆಕ್ನಾಲಜಿ ವಿಭಾಗದ ಉನ್ನತ ಸಂಶೋಧನಾ ತರಬೇತಿ ಶಿಷ್ಯವೇತನ ದೊರೆಯಿತು. ಆ ಮೂಲಕ ಅವರು ಅಮೇರಿಕಾದ ಟೆನಿಸ್ಸಿ ವಿಶ್ವವಿದ್ಯಾಲಯದಲ್ಲಿ ಉನ್ನತ ಸಂಶೋಧನಾ ತರಬೇತಿ ಪಡೆದು ನಂತರ ಎರಡು ವರ್ಷಗಳ ಕಾಲ ಅದೇ ವಿಶ್ವವಿದ್ಯಾಲಯದಲ್ಲಿ ಪೋಸ್ಟ್ ಡಾಕ್ಟ್ರಲ್ ಸಂಶೋಧನೆ ಕೈಗೊಂಡು, ಹಲವು ಅಂತರಾಷ್ಟ್ರೀಯ ಸಮ್ಮೇಳನ ಹಾಗೂ ಜರ್ನಲ್‌ಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ ಪ್ರಕಟಿಸಿ, ಪ್ರಶಂಸೆಯನ್ನು ಗಳಿಸಿದ್ದಾರೆ. ವಿಭಾಗದ ಒಟ್ಟಾರೆ ಸಂಶೋಧನಾ ಸಾಧನೆ ಕೆಳಗೆ ಕಾಣಿಸಿದೆ.

| | ಸಂಶೋಧನಾ ಫೆಲೊಷಿಪ್‌ಗಳು | ಸಂಶೋಧನಾ ದೇಣಿಗೆಗಳು | ರಾಷ್ಟ್ರ ಮಟ್ಟದ ವೈಜ್ಞಾನಿಕ ಕಮ್ಮಟದಲ್ಲಿ ಸಂಶೋಧನಾ ಪ್ರಬಂಧಗಳ ಮಂಡನೆ | ಅಂತರಾಷ್ಟ್ರೀಯ ಮಟ್ಟದ ವೈಜ್ಞಾನಿಕ ಕಮ್ಮಟದಲ್ಲಿ ಸಂಶೋಧನಾ ಪ್ರಬಂಧಗಳ ಮಂಡನೆ | ರಾಷ್ಟ್ರ ಮಟ್ಟದ ವೈಜ್ಞಾನಿಕ ಜರ್ನಲ್‌ನಲ್ಲಿ ಸಂಶೋಧನಾ ಪ್ರಬಂಧಗಳ ಪ್ರಕಟಣೆ | ಅಂತರಾಷ್ಟ್ರೀಯ ಮಟ್ಟದ ವೈಜ್ಞಾನಿಕ ಜರ್ನಲ್‌ನಲ್ಲಿ ಸಂಶೋಧನಾ ಪ್ರಬಂಧಗಳ ಪ್ರಕಟಣೆ |
|---|---|---|---|---|---|---|
| ಉಪನ್ಯಾಸಕರಿಂದ | 4 | 3 | 13 | 26 | 1 | 23 |
| ವಿದ್ಯಾರ್ಥಿಗಳಿಂದ | 4 | 1 | 4 | 0 | 0 | 3 |

"Besides love and sympathy, animals exhibit qualities connected with the social instincts which in us would be called moral." – Charles Darwin

– ಡಾ. ಗೀತಾ, ಮುಖ್ಯಸ್ಥರು
ಪ್ರಾಣಿಶಾಸ್ತ್ರ ವಿಭಾಗ

# ಕಂಪ್ಯೂಟರ್ ಸೈನ್ಸ್

ಕಂಪ್ಯೂಟರ್ ಸೈನ್ಸ್ ವಿಭಾಗವು 1996 ರಲ್ಲಿ ಫಿಸಿಕ್ಸ್ ವಿಭಾಗದ ಸಹಯೋಗದೊಂದಿಗೆ ಪಿ.ಎಂ.ಸಿ.ಎಸ್. ಕಾಂಬಿನೇಷನ್‌ನಲ್ಲಿ ಪ್ರಾರಂಭವಾಯಿತು. ಕೇವಲ 25 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಈ ವಿಭಾಗದಲ್ಲಿ 2–3 ವರ್ಷಗಳ ನಂತರ ಪಿ.ಸಿ.ಸಿ.ಎಸ್, ಪಿ.ಇ.ಸಿ.ಎಸ್, ಇಎಮ್‌ಸಿ.ಎಸ್ ನಂತರ ವಿವಿವಿಧ ಕಾಂಬಿನೇಷನ್‌ಗಳು ಪ್ರಾರಂಭವಾಯಿತು. ಆಗ ಪ್ರೊ. ಎಸ್. ದಾಶರಥಿ, ಡಾ॥ ಎನ್.ಎಸ್. ಬಾಪಟ್, ಪ್ರೊ. ವೆಂಕಟೇಶ ಮೂರ್ತಿಯವರ ಪರಿಶ್ರಮದಿಂದ ವಿಭಾಗವು ಉತ್ತಮ ಬೆಳವಣಿಗೆಯನ್ನು ಹೊಂದಿತು. ನಂತರದ ದಿನಗಳಲ್ಲಿ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್.ಕೆ. ಚಂದ್ರಶೇಖರ್‌ರವರು ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿಯೂ ಸಹ ಕಾರ್ಯನಿರ್ವಹಿಸಿ ವಿಭಾಗದ ಮುಂದಿನ ಬೆಳವಣಿಗೆಗೆ ಪರಿಶ್ರಮಿಸಿದರು. 2006ರಲ್ಲಿ ಬಿಸಿಎ ವಿಭಾಗವನ್ನು ಪ್ರಾರಂಭಿಸಿದರು.

ಆರಂಭದ ದಿನಗಳಿಂದಲೂ ವಿಭಾಘವು ಉತ್ತಮ ಅಧ್ಯಾಪಕರನ್ನು ಹೊಂದಿದ್ದು, ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ವಿಭಾಘವು ಉತ್ತಮವಾದ ಪ್ರಯೋಗಾಲಯವನ್ನು ಹೊಂದಿದ್ದು, ಪಠ್ಯಕ್ರಕ್ಕೆ ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಬೇಕಾದ ಮಾರ್ಪಾಡನ್ನು ಮಾಡಿಕೊಡಲಾಗುತ್ತಿದೆ.

ನಮ್ಮ ವಿಭಾಗದ ಅಧ್ಯಾಪಕರುಗಳು ಕಾಲೇಜಿನ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲವಾಗುವಂಥ ಎಲ್ಲಾ ಸ್ಥರದಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಡಿ.ವಿ.ಎಸ್. ಆಡಳಿತ ಮಂಡಳಿ ನಡೆಸುವ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿಯೂ ಸಹ ತಮ್ಮನ್ನು ತಡಗಿಸಿಕೊಂಡಿರುತ್ತಾರೆ. ವಿವಿಧ ಕಾಲೇಜುಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಹೋಗಿ ಪ್ರವಚನ ನೀಡಿರುವುದು ವಿಭಾಗಕ್ಕೆ ಹೆಮ್ಮೆಯ ವಿಷಯವಾಗಿರುತ್ತದೆ.

ಪ್ರಸ್ತುತ ವಿಭಾಗವು ಒಟ್ಟು 7 ಅಧ್ಯಾಪಕರಗಳು ಹಾಗೂ ಒಬ್ಬ ಪ್ರಯೋಗಾಲಯ ಸಹಾಯಕರನ್ನು ಒಳಗೊಂಡಿದೆ. ಎಲ್ಲಾ ಅಧ್ಯಾಪಕರುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ವಿಭಾಗದ ಬೆಳವಣಿಗೆಗೆ ಪರಿಶ್ರಮಿಸಿರುತ್ತಾರೆ. ನಮ್ಮ ವಿಭಾಗದ ಅಧ್ಯಾಪಕರುಗಳು ವಿವಿಧ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿದ್ದು, ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಸಹ ಉತ್ತಮವಾದ ಪರಿಣಿತಿಯನ್ನು ಹೊಂದಿರುತ್ತಾರೆ.

ಕೇವಲ 25 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಈ ವಿಭಾಗದಲ್ಲಿ ಪ್ರಸ್ತುತ ಬಿಎಸ್‌ಸಿ ಕಂಪ್ಯೂಟರ್ ಸೈನ್ಸ್ ಹಾಗೂ ಬಿಸಿಎ ವಿಭಾಗದ ಒಟ್ಟು 270 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗುವಂತ ವಿಶೇಷ ಕಾರ್ಯಗಾರವನ್ನು ಆಗಾಗ್ಗೆ ಏರ್ಪಡಿಸಲಾಗುತ್ತದೆ. ನಮ್ಮ ವಿಭಾಗದ ವಿದ್ಯಾರ್ಥಿಗಳು, ಪ್ರತಿವರ್ಷವೂ ಸಹ ಕುವೆಂಪು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಉತ್ತಮವಾದ ಸಾಧನೆಗಳನ್ನು ಮಾಡಿರುತ್ತಾರೆ.

ಪ್ರತಿವರ್ಷವೂ ವಿಶ್ವವಿದ್ಯಾನಿಲಯದ ರ‍್ಯಾಂಕ್‌ಗಳನ್ನು ತಮ್ಮದಾಗಿಸಿಕೊಂಡಿರುತ್ತಾರೆ. ಶೈಕ್ಷಣಿಕ ಚಟುವಟಿಕೆಯ ಹೊರತಾಗಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ IT FEST ಸ್ಪರ್ಧೆಗಳಲ್ಲಿ ಭಾಗಿಯಾಗಿ ವಿಭಾಗಕ್ಕೆ ಪ್ರಶಸ್ತಿಗಳನ್ನು ತಂದುಕೊಟ್ಟಿರುತ್ತಾರೆ.

ನಮ್ಮ ವಿಭಾಗದ ಹಲವಾರು ವಿದ್ಯಾರ್ಥಿಗಳು ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಆಯ್ಕೆಗೊಂಡು ದೇಶ–ವಿದೇಶಗಳ ಉತ್ತಮ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಭಾಗಕ್ಕೆ ಹಾಗೂ ಕಾಲೇಜಿಗೆ ಹೆಮ್ಮೆಯ ವಿಷಯವಾಗಿರುತ್ತದೆ.

ವಿಭಾಗದ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಪ್ರಜೆಯಾಗಿ ಸಮಾಜಕ್ಕೆ ಹಾಗೂ ಕಾಲೇಜಿಗೆ ಒಳ್ಳೆಯ ಹೆಸರನ್ನು ತರಲಿ ಹಾಗೂ ವಿದ್ಯಾರ್ಥಿಗಳ ಎಲ್ಲಾ ಕನಸುಗಳು ನನಸಾಗಲಿ ಎಂದು ವಿಭಾಗದ ವತಿಯಿಂದ ಹಾರೈಸುತ್ತಿದ್ದೇವೆ.

**ಅಧ್ಯಾಪಕ ವೃಂದ**
ಕಂಪ್ಯೂಟರ್ ಸೈನ್ಸ್ ವಿಭಾಗ





# DEPARTMENT OF CHEMISTRY

It was a year of immense pleasure as well as a year of change and a year of planning for change. The Golden Jubilee celebration as a whole induced many transitory responsibilities upon our department too. Our department has always been composed of a busy and productive group of people and we have always had the same goal: to educate strong and motivated students in the chemical sciences.

Despite the extra duties and responsibilities that came in the way, we as a department have made a sincere effort to serve our students as well as institution in all possible ways. The prospect of a new and exciting facility accounts for our great enthusiasm.

That said, the change that induces most of our enthusiasm this year is the enrolment of students in highest number ever. Along side, we are expecting many good ranks in the semester exams of the parallel academic year too.

Mean while, we have managed to arrange few productive seminars and few talks by renowned people of this field. We are continuously ensuring the impart of quality education from our part to all students of our core courses in all possible ways. Student's performances are all continuously monitored and sincere efforts are being put to improve them. Our department not only ensures academic development of students but also motivates them in all co-curricular activities too.

The philosophy of liberal education drives this place is in danger of being lost or diluted in today's commercial and materialistic society. Fewer and fewer people value education for the personal betterment, but rather only focus on the financial payoff. The faculty here are continuously reassured by the intellectually curious students, not to become elistists, but to receive an elite education that will help direct them down the road of life-long learning.

Thus, we as a department are and will try to create a diverse and strong applicant tool.

**H.O.D. & Staff**
Department of Chemistry

## ಸಂಸ್ಕೃತ ವಿಭಾಗ

2016–17ನೇ ಶೈಕ್ಷಣಿಕ ವರ್ಷವು ಜುಲೈ ತಿಂಗಳಿಂದ ಆರಂಭವಾಯಿತು. ಮೊದಲನೆಯ ವರ್ಷದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ವಿಭಾಗದ ವತಿಯಿಂದ ಸ್ವಾಗತಿಸಲಾಯಿತು. ಮೊದಲ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಭಾಷಾ ಮಹತ್ವವನ್ನು ತಿಳಿಸಲಾಯಿತು. ಮತ್ತು ಸಂಸ್ಕೃತ ಭಾಷೆಯಲ್ಲಿ ಅಭಿರುಚಿಯನ್ನು ಮತ್ತು ಸಾಹಿತ್ಯದಲ್ಲಿ ಆಸಕ್ತಿಯನ್ನು ಉಂಟು ಮಾಡುವ ಸಲುವಾಗಿ ಅಂತ್ಯಾಕ್ಷರಿ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವರದಿಯ ವರ್ಷದಲ್ಲಿ ಒಬ್ಬ ವಿದ್ಯಾರ್ಥಿನಿಯು ಕೇಂದ್ರೀಯ ಸಂಸ್ಕೃತ ಸಂಸ್ಥಾನವು ನೀಡುವ ವಿದ್ಯಾರ್ಥಿ ವೇತನಕ್ಕೆ ಅರ್ಹಳಾಗಿದ್ದಾಳೆ. ಈ ಸಾಧನೆಯನ್ನು ಮಾಡಿದ ವಿದ್ಯಾರ್ಥಿನಿಯನ್ನು ಕಾಲೇಜಿನ ಎಲ್ಲಾ ವಿಭಾಗಗಳು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

ವರದಿಯ ವರ್ಷದಲ್ಲಿ ಸಂಸ್ಕೃತ ವಿಭಾಗದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ನಡೆದ ಎಲ್ಲ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಗಳಿಸಿದ್ದಾರೆ. ಈ ರೀತಿಯಿಂದ ವಿಭಾಗದ ವಿದ್ಯಾರ್ಥಿಗಳು ಬಹುಮುಖ ಪ್ರತಿಭಾನ್ವಿತರಾಗಿದ್ದಾರೆ. ಅಲ್ಲದೆ ಕಳೆದ ಸಾಲಿನ ವಾರ್ಷಿಕ ಪರೀಕ್ಷಾ ಫಲಿತಾಂಶವು ನೂರಕ್ಕೆ ನೂರರಷ್ಟಿದೆ. ಇದು ಸಂಸ್ಕೃತ ವಿಭಾಗಕ್ಕೆ ಹೆಮ್ಮೆ ತಂದ ವಿಷಯವಾಗಿದೆ. ಈ ರೀತಿಯಿಂದ ಸಂಸ್ಕೃತ ವಿಭಾಗವು 2016–17ರ ಶೈಕ್ಷಣಿಕ ವರ್ಷದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಮತ್ತು ಪಠ್ಯಪಠ್ಯೇತರ ಚಟುವಟಿಕೆಗಳೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಯ ಬಗ್ಗೆ ಗಮನ ಹರಿಸಿತು.

**ಪ್ರೊ. ಜಿ.ವಿ. ಭಟ್ಟ**
ಮುಖ್ಯಸ್ಥರು, ಸಂಸ್ಕೃತ ವಿಭಾಗ.

---

## ರಾಜ್ಯಶಾಸ್ತ್ರ ವಿಭಾಗ

ರಾಜ್ಯಶಾಸ್ತ್ರ ವಿಭಾಗವು 2016–17ನೇ ಶೈಕ್ಷಣಿಕ ವರ್ಷದ ಆರಂಭದಿಂದಲೂ ಉತ್ತಮ ಚಟುವಟಿಕೆಗಳನ್ನು ನಡೆಸುತ್ತ ಬಂದಿದೆ. ನಮ್ಮ ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೆ ಸಾಮಾನ್ಯಜ್ಞಾನದ ಅರಿವನ್ನು ಮೂಡಿಸುವ ಉದ್ದೇಶ ನಮ್ಮದಾಗಿದೆ. ವಿದ್ಯಾರ್ಥಿಗಳ ಶಿಸ್ತು ಪಾಲನೆಗೆ ಆದ್ಯತೆ ನೀಡಲಾಗಿದೆ.

ವಿಭಾಗದ ಪರವಾಗಿ ರಾಷ್ಟ್ರಮಟ್ಟದ, ರಾಜ್ಯಮಟ್ಟದ ಹಲವಾರು ವಿಚಾರಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂದಿದೆ. ಕುವೆಂಪು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಅಧ್ಯಾಪಕರ ಸಂಘದ ವತಿಯಿಂದ ರಾಜ್ಯಶಾಸ್ತ್ರ ವಿಭಾಗದ ಪದವಿ ತರಗತಿಗಳ ಪಠ್ಯಕ್ರಮಗಳ ನವೀಕರಣದ ಬಗ್ಗೆ ಚರ್ಚಿಸಿ ರೂಪಿಸುವ ಅವಕಾಶ ದೊರಕಿದೆ.

ನಮ್ಮ ವಿಭಾಗದ ಉಪನ್ಯಾಸಕರಾದ ಆರ್.ಸುರೇಶ್ ಇವರು ಎನ್.ಸಿ.ಸಿ. ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಕುಶಲತೆಯನ್ನು ಹೆಚ್ಚಿಸಲು ನೈತಿಕ ಜ್ಞಾನದ ಮತ್ತು ಶಿಸ್ತಿನ ಅರಿವನ್ನು ಮೂಡಿಸುವ ಕಡೆಗೆ ಗಮನಕೊಡಲಾಗಿದೆ. ರಾಜ್ಯಶಾಸ್ತ್ರ ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರದಲ್ಲಿ ವಿಭಾಗದ ಪರವಾಗಿ ನಗದು ಪುರಸ್ಕಾರ ನೀಡುವುದರ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ.

**ಪ್ರೊ. ಟಿ.ಆರ್. ಗೋಪಾಲ್**
ರಾಜ್ಯಶಾಸ್ತ್ರ ವಿಭಾಗ





## ಅರ್ಥಶಾಸ್ತ್ರ ವಿಭಾಗ

ಅರ್ಥಶಾಸ್ತ್ರ ವಿಭಾಗವು ಶೈಕ್ಷಣಿಕ ವರ್ಷದ ಆರಂಭದಿಂದಲೂ ಉತ್ತಮ ಚಟುವಟಿಕೆ ನಡೆಸುತ್ತಿದೆ. ಪ್ರಸ್ತುತ ಸಾಲಿನಲ್ಲಿ ದಿನಾಂಕ 28–7–2017ರಂದು ಅರ್ಥಶಾಸ್ತ್ರ ವೇದಿಕೆ ವತಿಯಿಂದ "ಬೇಡಿಕೆಗಳನ್ನು ಕನಿಷ್ಠಗೊಳಿಸಿ ಸರಳ ಜೀವನ ನಡೆಸಿ", ಎಂಬ ವಿಷಯದ ಬಗ್ಗೆ ಪ್ರೊ. ಬಿ.ಎಂ. ಕುಮಾರಸ್ವಾಮಿ, ನಿವೃತ್ತ ಪ್ರಾಂಶುಪಾಲರು ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದಿನಾಂಕ 11–8–2017ರಂದು ಅರ್ಥಶಾಸ್ತ್ರ ವೇದಿಕೆ ವತಿಯಿಂದ ಆಪ್ತಸಮಲೋಚನೆಯ ಮಹತ್ವ ಎಂಬ ವಿಷಯದ ಬಗ್ಗೆ ಪ್ರೊ. ಸತ್ಯನಾರಾಯಣ, ನಿವೃತ್ತ ಪ್ರಾಂಶುಪಾಲರು, ಕಮಲಾ ನೆಹರು ಮಹಿಳಾ ಕಾಲೇಜು ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದಿನಾಂಕ 12–1–2017ರಂದು ಅರ್ಥಶಾಸ್ತ್ರ ವೇದಿಕೆ ವತಿಯಿಂದ 'ಹಣರಹಿತ ಆರ್ಥಿಕತೆ' ಎಂಬ ವಿಷಯದ ಬಗ್ಗೆ ಶ್ರೀ ರವೀಂದ್ರ ವೈ. ಹಿರಿಯ ವ್ಯವಸ್ಥಾಪಕರು, ಕಾರ್ಪೋರೇಷನ್ ಬ್ಯಾಂಕ್ ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ರಾ.ಸೇ.ಯೋ. ಘಟಕದ ಸಹಯೋಗದಲ್ಲಿ ಶಿವಮೊಗ್ಗ ತಾಲ್ಲೂಕು ಮಲೇಶಂಕರ ಗ್ರಾಮದಲ್ಲಿ ದಿನಾಂಕ 18-1-2017ರಿಂದ 24–1–2017ರ ವರೆಗೆ ನಡೆದ ವಿಶೇಷ ಶಿಬಿರದಲ್ಲಿ ಮಲೇಶಂಕರ ಗ್ರಾಮದ ಆರ್ಥಿಕ ಸಮೀಕ್ಷೆ ನಡಸಲಾಯಿತು. ಗ್ರಾಮದ ಸಾಕ್ಷರತೆಯ ಪ್ರಮಾಣ, ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಹಾಗೂ ಗ್ರಾಮದ ಮೂಲಭೂತ ಸೌಕರ್ಯಗಳ ಕೊರತೆಯನ್ನೊಳಗೊಂಡ ವರದಿಯನ್ನು ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ನೀಡಲಾಯಿತು.

2016–17ರ ಶೈಕ್ಷಣಿಕ ಅವಧಿಯಲ್ಲಿ ವಿಭಾಗದ ಅಧ್ಯಾಪಕರಾದ ಡಾ. ಎ.ಟಿ. ಪದ್ಮೇಗೌಡ ಮತ್ತು ಡಾ. ಎಂ. ವೆಂಕಟೇಶರವರು ರಾಷ್ಟ್ರೀಯ ಮಟ್ಟದ, ರಾಜ್ಯ ಮತ್ತು ಪ್ರಾದೇಶಿಕ ಮಟ್ಟದ ವಿಚಾರ ಸಂಕಿರಣ ಕಾರ್ಯಾಗಾರ ಹಾಗೂ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧವನ್ನು ಮಂಡಿಸಿದ್ದಾರೆ. ವಿಭಾಗದ ಅಧ್ಯಾಪಕರು ಹಲವಾರು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿಜ್ಞಾನ ಸಮಿತಿಗಳಲ್ಲಿ ಪದಾಧಿಕಾರಿಗಳಾಗಿ ಹಾಗೂ ಕುವೆಂಪು ವಿ.ವಿ. ಪರೀಕ್ಷಾ ಮಂಡಳಿ ಸದಸ್ಯರಾಗಿ ಹಲವಾರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ವಿದ್ಯಾರ್ಥಿಗಳಲ್ಲಿ ಕುಶಲತೆಯನ್ನು ಹೆಚ್ಚಿಸಲು ಸೆಮಿನಾರ್ ಮತ್ತು ಕೌಶಲ್ಯಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಡಾ. ಎ.ಟಿ. ಪದ್ಮೇಗೌಡ, ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ ಇವರು ಯುಜಿಸಿ ಪ್ರಾಯೋಜಿತ ಅನುದಾನದ ಕಿರು ಸಂಶೋಧನೆ (MRP)ಯಾದ ಶಿವಮೊಗ್ಗ ಜಿಲ್ಲೆಯ "ಅಂಬೇಡ್ಕರ್ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಕಾರ್ಯ ಚಟುವಟಿಕೆಗಳ ಮೌಲ್ಯಮಾಪನ"ದ ಸಂಶೋಧನೆಯನ್ನು ಪೂರ್ಣಗೊಳಿಸಿದ್ದಾರೆ.

ಪ್ರಸ್ತುತ ಸಾಲಿನಲ್ಲಿ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಸಾಧನೆಗೆ, ಅರ್ಥಶಾಸ್ತ್ರ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳಲ್ಲಿ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ವಿಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿಭಾಗದಲ್ಲಿ 500 ಪುಸ್ತಕಗಳನ್ನು ಇಡಲಾಗಿದೆ. ವಿದ್ಯಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ.

**ಡಾ. ಎ.ಟಿ. ಪದ್ಮೇಗೌಡ**
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ

# ಇತಿಹಾಸ ವಿಭಾಗ

2016–17ನೇ ಸಾಲಿನಲ್ಲಿ ಇತಿಹಾಸ ವಿಭಾಗದಿಂದ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಲು ಪ್ರಯತ್ನಿಸಿದ್ದು, ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಅರಿವನ್ನು ಮೂಡಿಸುವುದಕ್ಕಾಗಿ ಬ್ರಿಡ್ಜ್ ಕೋರ್ಸ್ ಮತ್ತು ರೆಮಿಡಿಯಲ್ ಕ್ಲಾಸ್‌ಗಳನ್ನು ಮಾಡುವುದರ ಜೊತೆಗೆ ಪ್ರತಿ ತರಗತಿಗಳಲ್ಲಿ ಸೆಮಿನಾರ್‌ಗಳನ್ನು ಮಾಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಪ್ರಯತ್ನಿಸಲಾಗುತ್ತಿದೆ. ದಿನಾಂಕ 7 ಮತ್ತು 8 ಏಪ್ರಿಲ್ 2017ರಂದು ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ನೆರವೇರಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಲಾಯಿತು. ಈ ವರ್ಷವೂ ಇನ್ನೂ ಹೆಚ್ಚಿನ ತಿಳುವಳಿಕೆ ಮೂಡಿಸಲು ಪ್ರಯತ್ನಿಸಲಾಗುತ್ತಿದೆ.

ಕುವೆಂಪು ವಿ.ವಿ. ಪ್ರಾಧ್ಯಾಪಕರಾದ ಡಾ. ರಾಜಾರಾಂ ಹೆಗಡೆ, ಡಾ. ಜಿ. ಸರ್ವಮಂಗಳ, ತೀರ್ಥಹಳ್ಳಿ ತುಂಗಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸೋಮಶೇಖರ್, ಶಿವಮೊಗ್ಗದ ಇತಿಹಾಸ ತಜ್ಞ ಡಾ. ಅಗಸಿಬಾಗಿನವರ್, ಡಾ. ಕೆ. ಪ್ರಭಾಕರರಾವ್, ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆಯ ಡಾ. ಶೆಜಸ್ ಮತ್ತು ಇತರ ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳಿಗೆ ಇತಿಹಾಸದ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಲಾಯಿತು. ಪಿಹೆಚ್‌ಡಿ ಪ್ರಬಂಧಕಾರರು ಸಹ ತಮ್ಮ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಅವಕಾಶವನ್ನು ಮಾಡಿಕೊಡಲಾಯಿತು.

**ಪ್ರೊ. ಗೋಪಾಲ್ ಟಿ.ಎಸ್.**
ಇತಿಹಾಸ ವಿಭಾಗ





# ಪತ್ಯೇತರ ವಿಭಾಗಗಳ ವರದಿ

# ವಾರ್ಷಿಕ ವರದಿ 2016–17

## ಪ್ಲೇಸ್‌ಮೆಂಟ್ ಮತ್ತು ಕರಿಯರ್ ಗೈಡೆನ್ಸ್ ಸೆಲ್

ನಮ್ಮ ಕಾಲೇಜಿನ ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಈ ಶೈಕ್ಷಣಿಕ ವರ್ಷದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 'Skill Development and youth Empowerment Skills' ಎಂಬ ವಿಷಯದ ಬಗ್ಗೆ ಮೂರು ದಿನಗಳ ಕಾರ್ಯಗಾರವನ್ನು ಜೆ.ಸಿ.ಐ ಶಿವಮೊಗ್ಗ ಇವರ ಸಹಯೋಗದಲ್ಲಿ ನಡೆಸಲಾಯಿತು. ಐ.ಟಿ. ಅಸೋಸಿಯೇಷನ್, ಶಿವಮೊಗ್ಗದ ಅಧ್ಯಕ್ಷರಾದ ಎಸ್.ಎಸ್. ಸಂತೋಷ್ ಮತ್ತು ಜೆಸಿಐ ಶಿವಮೊಗ್ಗದ ಅಧ್ಯಕ್ಷರಾದ ದಿಲೀಪ್ ನಾಡಿಗ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಬಿ.ಎ. ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ಬಗ್ಗೆ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಶಿರಿನ್ ಮೋಟಾರ್ಸ್‌ನ ಸುಮೀತ್ ಅವರು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ವಿವಿಧ ಟಿಪ್ಸ್‌ಗಳನ್ನು ತಿಳಿಸಿದರು.

" ETEN - IAS, Pearson India " ಇವರು " How to crack competitive examinations" ಎಂಬ ವಿಷಯದ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ನಡೆಸಿಕೊಟ್ಟರು. ಶ್ರೀಯುತ ರಾಮಕೃಷ್ಣನ್, ರೀಜನಲ್ ಮುಖ್ಯಸ್ಥರು, ಇಂಡಿಯಾ ಕ್ಯಾನ್, ಪಿಯರ್‌ಸನ್ ಮತ್ತು ಯಾಸಿನ್ ಖಾನ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಅವರು ಪ್ರಮುಖವಾಗಿ ಐಎಎಸ್ ಪರೀಕ್ಷೆಯನ್ನು ತೆಗೆದುಕೊಳ್ಳುವ ಬಗ್ಗೆ ಉಪಯುಕ್ತವಾದ ಮಾಹಿತಿಯನ್ನು ಕೊಟ್ಟರು. ಅಜೀಂ ಪ್ರೇಮ್‌ಜಿ ಯುನಿವರ್ಸಿಟಿಯ ಎಸ್. ಸಂತೋಷ್ ಅವರು ಈ ಹೊಸ ಯುನಿವರ್ಸಿಟಿಯಲ್ಲಿ ಇರುವ ಹೊಸ ಕೋರ್ಸ್‌ಗಳ ಬಗ್ಗೆ ಮತ್ತು ಉದ್ಯೋಗ ಅವಕಾಶದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಗಳನ್ನು ಕೊಟ್ಟರು.

" Lead Academy" ಬೆಂಗಳೂರು ಇವರಿಂದ "Job and Career Orientation" ಎಂಬ ವಿಷಯದ ಬಗ್ಗೆ ಒಂದು ದಿನದ ಸೆಮಿನಾರ್ ಏರ್ಪಡಿಸಲಾಗಿತ್ತು. ಹಾಜರಾದ ಎಲ್ಲಾ ವಿದ್ಯಾರ್ಥಿಗಳಿಗೆ "GET PLACED KIT " ಅನ್ನು ಅಕಾಡೆಮಿ ವತಿಯಿಂದ ಕೊಡಲಾಯಿತು. ಕಾರ್ತಿಕ ಗುಪ್ತ ಪಿ. ಇವರು ಬ್ಯಾಂಕಿಂಗ್ ಪರೀಕ್ಷೆಯನ್ನು ತೆಗೆದುಕೊಳ್ಳುವ ಬಗ್ಗೆ ವಿದ್ವತ್‌ಪೂರ್ಣ ಮಾಹಿತಿಯನ್ನು ಕೊಟ್ಟರು. ಅವರು "bbankersbliss.com" ವೆಬ್‌ಸೈಟ್‌ಗೆ ರಿಜಿಸ್ಟರ್ ಆಗಿ ಬ್ಯಾಂಕಿಂಗ್ ಪರೀಕ್ಷೆಗೆ ತಯಾರಾಗುವ ಬಗ್ಗೆ ತಿಳಿಸಿಕೊಟ್ಟರು. ವಿವಿಧ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಲ್ಲರಿಗೂ ನನ್ನ ವಂದನೆಗಳು.

"Triphase Technologies Bangalore" ಇವರು ನಮ್ಮ ಕಾಲೇಜಿನಲ್ಲಿ ಕ್ಯಾಂಪಸ್ ಇಂಟರ್‌ವ್ಯೂ ನಡೆಸಿಕೊಟ್ಟರು. ನಮ್ಮ ಕಾಲೇಜು ಮತ್ತು ಇತರೆ ಪದವಿ ಕಾಲೇಜು ಪಾಲಿಟೆಕ್ನಿಕ್ ಕಾಲೇಜುಗಳು, ಐಟಿಐ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ, ಹಲವಾರು ವಿದ್ಯಾರ್ಥಿಗಳು ಆಯ್ಕೆ ಆಗಿರುತ್ತಾರೆ. ಇದಲ್ಲದೆ "Tech Mahindra, TCS, Infosys, ICICI Bank" ನಡೆಸಿದ ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಹಲವಾರು ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ. ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ನನ್ನ ಅಭಿನಂದನೆಗಳು.

**ಪ್ರೊ. ಬಿ.ಎನ್. ಸುನಂದ**
ಸಂಚಾಲಕರು
ಪ್ಲೇಸ್‌ಮೆಂಟ್ ಸೆಲ್





# ರಾಷ್ಟ್ರೀಯ ಸೇವಾ ಯೋಜನೆ

## ವಾರ್ಷಿಕ ವಿಶೇಷ ಶಿಬಿರ 2016–17

ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನ 101 ವಿದ್ಯಾರ್ಥಿಗಳು ಎನ್.ಎಸ್.ಎಸ್. ವಿಶೇಷ ಶಿಬಿರಕ್ಕೆ ಶಿವಮೊಗ್ಗ ತಾಲ್ಲೂಕಿನ ಮಲೇಶಂಕರವನ್ನು 18–1–2017ರಂದು ತಲುಪಿದೆವು. ತದನಂತರ ಶ್ರೀ ಶಂಕರಮೂರ್ತಿರವರು, ತಾಲ್ಲೂಕು ಕಾರ್ಯದರ್ಶಿ, ಕರ್ನಾಟಕ ರಕ್ಷಣಾ ವೇದಿಕೆ, ಮಲೇಶಂಕರ ಇವರು ತಮ್ಮ ಮನೆಯಲ್ಲಿ ಶಿಬಿರಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿದರು. ಶಿಬಿರದ ವಿದ್ಯಾರ್ಥಿಗಳ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳಲಾಯಿತು. ಹಾಗೂ ವಿದ್ಯಾರ್ಥಿಗಳೊಂದಿಗೆ ಗ್ರಾಮದ ಬೀದಿಗಳಲ್ಲಿ ಜಾಥಾ ಹೊರಟೆವು. ಜಾಥಾ ಮುಗಿದ ನಂತರ ಸಂಜೆ 5.30ಕ್ಕೆ ಸರಿಯಾಗಿ ಉದ್ಘಾಟನಾ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಎಲ್ಲಾ ತಂಡದವರು ಸೇರಿ ಕಾರ್ಯಕ್ರಮ ನಡೆಸಿಕೊಟ್ಟರು. ಮೊದಲಿಗೆ ಪ್ರಾರ್ಥನೆಯನ್ನು ಕುಮಾರಿ ಸಂಗೀತರವರು ಹಾಡಿದರು. ನಂತರ ಸೌಜನ್ಯ ತಂಡದವರು ಎನ್.ಎಸ್.ಎಸ್. ಗೀತೆಯನ್ನು ಹಾಡಿದರು. ಕಾರ್ಯಕ್ರಮಕ್ಕೆ ಎಲ್ಲರನ್ನೂ ಶಿಬಿರದ ನಾಯಕಿ ಪೂಜಾರವರು ಸ್ವಾಗತಿಸಿದರು.

ನಂತರ ರಾ.ಸೇ.ಯೋ. ಘಟಕ 1ರ ಅಧಿಕಾರಿಗಳಾದಂತಹ ಡಾ. ಎ.ಟಿ. ಪದ್ಮೇಗೌಡರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಎಸ್ ರಾಜಶೇಖರವರು ಕಾರ್ಯದರ್ಶಿಗಳು, ದೇಶೀಯ ವಿದ್ಯಾಶಾಲಾ ಸಮಿತಿ (ರಿ), ಶಿವಮೊಗ್ಗ ಇವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ತಮ್ಮ ಉದ್ಘಾಟನಾ ನುಡಿಗಳನ್ನು ಆಡಿದರು. ಶಿಬಿರದ ಯಶಸ್ಸಿಗೆ ತಮ್ಮೆಲ್ಲರ ಸಹಕಾರ ಹಾಗೂ ನಿಮ್ಮ ನಾಯಕತ್ವ ತುಂಬಾ ಸಹಕಾರಿಯಾಗುತ್ತದೆ ಎಂದು ತಮ್ಮ ಉದ್ಘಾಟನಾ ನುಡಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಯಾದಂತಹ ಶ್ರೀಯುತ ತಮ್ಮಡಿಹಳ್ಳಿ ನಾಗರಾಜ್‌ರವರು, ಸದಸ್ಯರು, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ಇವರು ಪ್ರತಿಯೊಬ್ಬರು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಮತ್ತೋರ್ವ ಅತಿಥಿಯಾದಂತಹ ಶ್ರೀಮತಿ ರಾಧ ಚಂದ್ರಪ್ಪ, ಸದಸ್ಯರು, ಗ್ರಾಮ ಪಂಚಾಯಿತಿ, ಮಲೇಶಂಕರ ಇವರು ಶಿಬಿರದ ಯಶಸ್ಸಿಗೆ ಶುಭ ಹಾರೈಸಿದರು. ಅತಿಥಿಯಾದಂತಹ ಶ್ರೀಯುತ ನೂರುಲ್ಲಾರವರು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸ.ಹಿ.ಪ್ರಾ.ಶಾಲೆ ಮಲೇಶಂಕರ ಇವರು ಶಿಬಿರದ ಯಶಸ್ಸಿಗೆ ಶುಭ ಹಾರೈಸಿದರು. ನಮ್ಮ ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ. ಗೀತಾ ಸಾಮಕ್‌ರವರು ಶಿಬಿರವು ಯಶಸ್ವಿಯಾಗಿ ನಡೆಸಿ ಕಾಲೇಜಿನ ಗೌರವ ಘನತೆಯನ್ನು ಹೆಚ್ಚಿಸುವಂತೆ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಹೇಳಿದರು. ಕೊನೆಯದಾಗಿ ವಂದನಾರ್ಪಣೆಯನ್ನು ಶಿಬಿರದ ನಾಯಕ ರಮೇಶ್‌ರವರು ಮಾಡಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶಿಬಿರದ ನಾಯಕ ಸೋಮಶೇಖರರವರು ಯಶಸ್ವಿಯಾಗಿ ನೆರವೇರಿಸಿದರು. ಸಂಜೆ 7.30ಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ನಂತರ ಶಿಬಿರಾರ್ಥಿಗಳೊಂದಿಗೆ ಶಿಬಿರ ಸಂಸತ್ತು ಜರುಗಿಸಲಾಯಿತು.

**ಡಾ. ಎ.ಟಿ. ಪದ್ಮೇಗೌಡ ಮತ್ತು**
**ಡಾ. ಎಂ. ವೆಂಕಟೇಶ್**
ರಾ.ಸೇ.ಯೋ. ಅಧಿಕಾರಿಗಳು

# ಗ್ರಾಮದ ಆರ್ಥಿಕ ಸಮೀಕ್ಷಾ ವರದಿ

ದಿನಾಂಕ 18-1-2017 ರಿಂದ 24-1-2017ರ ವರೆಗೆ ಶಿವಮೊಗ್ಗ ತಾಲ್ಲೂಕಿನ ಮಲೇಶಂಕರ ಗ್ರಾಮದಲ್ಲಿ ಏಳು ದಿನಗಳ ಕಾಲ ಎನ್.ಎಸ್.ಎಸ್. ಶಿಬಿರ ಏರ್ಪಡಿಸಿದ್ದು ಗ್ರಾಮದಲ್ಲಿ ಆರ್ಥಿಕ ಸಮೀಕ್ಷೆಯನ್ನು ನಡೆಸಿದೆವು. ಈ ಸಮೀಕ್ಷೆಯಲ್ಲಿ 101 ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು 79 ಮನೆಗಳನ್ನು ಸಮೀಕ್ಷೆ ಮಾಡಿ ಗ್ರಾಮದ ಸಮಸ್ಯೆಗಳನ್ನು ಅರಿತುಕೊಳ್ಳಲಾಯಿತು.

ಮಲೇಶಂಕರ ಗ್ರಾಮವು 79 ಕುಟುಂಬಗಳು ನೆಲೆಸಿರುವ ಪುಟ್ಟ ಹಳ್ಳಿಯಾಗಿದ್ದು, ಗ್ರಾಮದಲ್ಲಿ ಎರಡು ಯುವಕ ಸಂಘಗಳಿದ್ದು, 7ಕ್ಕೂ ಹೆಚ್ಚು ಸ್ತ್ರೀಶಕ್ತಿ ಸಂಘಗಳು ಹಾಗೂ 5ಕ್ಕೂ ಪುರುಷರ ಸ್ವಸಹಾಯ ಸಂಘಗಳಿವೆ. ಈ ಗ್ರಾಮಕ್ಕೆ 60 ವರ್ಷದ ಇತಿಹಾಸವಿದ್ದು ಈಡಿಗರು–48, ಮುಸ್ಲಿಂ–23, ವಿಶ್ವಕರ್ಮ–1, ಲಿಂಗಾಯತ–1, ಬ್ರಾಹ್ಮಣ–2, ಭಂಡಾರಿ–5 ಒಟ್ಟು 79 ಕುಟುಂಬಗಳು ಇಲ್ಲಿ ವಾಸವಾಗಿದ್ದಾರೆ. ಗ್ರಾಮದ ಬಹುತೇಕ ಕುಟುಂಬಗಳು ಕೃಷಿ ಮತ್ತು ಕೂಲಿ ವೃತ್ತಿಯನ್ನು ಆಧರಿಸಿವೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಗ್ರಾಮದಲ್ಲಿದೆ. 1 ಲಕ್ಷಕ್ಕಿಂತ ಹೆಚ್ಚು ಆದಾಯವಿರುವವರ ಸಂಖ್ಯೆ –10, 25,000ಕ್ಕಿಂತ ಕಡಿಮೆ ಆದಾಯವಿರುವವರ ಸಂಖ್ಯೆ–69, ಸ್ವಂತ ಮನೆಗಳ ಸಂಖ್ಯೆ–79, ಟಿ.ವಿ. ಇಲ್ಲದವರ ಸಂಖ್ಯೆ–9, ವಿದ್ಯುತ್ ಸೌಲಭ್ಯ ಇಲ್ಲದಿರುವ ಮನೆಗಳು–3, ದೂರವಾಣಿ ಇಲ್ಲದವರ ಸಂಖ್ಯೆ–4, ದೂರವಾಣಿ ಹೊಂದಿರುವವರ ಸಂಖ್ಯೆ–79, ಶೌಚಾಲಯ ಇರುವ ಮನೆಗಳ ಸಂಖ್ಯೆ–77, ಶೌಚಾಲಯ ಇಲ್ಲದ ಮನೆಗಳ ಸಂಖ್ಯೆ–2. ಗ್ರಾಮದ 76 ಕುಟುಂಬಗಳು ಜಮೀನು ಹೊಂದಿದ್ದಾರೆ. 3 ಕುಟುಂಬಗಳಿಗೆ ಯಾವುದೇ ಜಮೀನು ಇರುವುದಿಲ್ಲ. 7 ಕುಟುಂಬಗಳಿಗೆ ವಾಹನ ಸೌಲಭ್ಯವಿರುವುದಿಲ್ಲ.

ಗ್ರಾಮದ ಜನರು ಪ್ರಾಮಾಣಿಕರಾಗಿದ್ದು, ದಿನಗಳ ಶಿಬಿರದಲ್ಲಿ ವಿದ್ಯಾರ್ಥಿಗಳೊಂದಿಗೆ ಪೂರ್ಣವಾಗಿ ಸಹಕರಿಸಿದ್ದಾರೆ. ಗ್ರಾಮಸ್ಥರು ಹಬ್ಬ, ಹರಿದಿನಗಳಲ್ಲಿ ಒಂದೇ ಕುಟುಂಬದವರಂತೆ ಕೆಲಸ ಕಾರ್ಯವನ್ನು ಹಂಚಿಕೊಂಡು ಗ್ರಾಮದ ಹಬ್ಬವನ್ನು ಆಚರಿಸುತ್ತಾರೆ.

ಪಕ್ಕದ ಗ್ರಾಮವಾದ ಮಂಜರಿಕೊಪ್ಪ 24 ಕುಟುಂಬದವರು ನೆಲೆಸಿರುವ ಪುಟ್ಟ ಹಳ್ಳಿಯಾಗಿದ್ದು, ಈ ಗ್ರಾಮಕ್ಕೆ 60 ವರ್ಷದ ಇತಿಹಾಸವಿದ್ದು, ಈಡಿಗರು–12, ಲಿಂಗಾಯತರು–6, ಭಂಡಾರಿ–4, ಶೆಟ್ಟರು–2, ಒಟ್ಟು 24 ಕುಟುಂಬಗಳು ಇಲ್ಲಿ ವಾಸವಾಗಿದ್ದಾರೆ. ಗ್ರಾಮದ ಬಹುತೇಕ ಕುಟುಂಬಗಳು ಕೃಷಿ ಮತ್ತು ಕೂಲಿ ವೃತ್ತಿಯನ್ನು ಆಧರಿಸಿದೆ. 1 ಲಕ್ಷಕ್ಕಿಂತ ಹೆಚ್ಚು ಆದಾಯವಿರುವವರ ಸಂಖ್ಯೆ–3, 25,000 ಕ್ಕಿಂತ ಕಡಿಮೆ ಆದಾಯವಿರುವವರ ಸಂಖ್ಯೆ–15, ಸ್ವಂತ ಮನೆಗಳ ಸಂಖ್ಯೆ–24, ಟಿ.ವಿ. ಇಲ್ಲದವರ ಸಂಖ್ಯೆ–2, ವಿದ್ಯುತ್ ಸೌಲಭ್ಯ ಇಲ್ಲದಿರುವ ಮನೆಗಳು–2, ದೂರವಾಣಿ ಇಲ್ಲದವರ ಸಂಖ್ಯೆ–3, ಶೌಚಾಲಯ ಇಲ್ಲದ ಮನೆಗಳ ಸಂಖ್ಯೆ–8, 3 ಕುಟುಂಬಗಳಿಗೆ ವಾಹನ ಸೌಲಭ್ಯವಿರುವುದಿಲ್ಲ.

"ಶ್ರಮಯೇವ ಜಯತೇ"  "ನನಗಲ್ಲ ನಿನಗೆ"  "ಜೈ ಎನ್.ಎಸ್.ಎಸ್."

– **ಡಾ. ಎ.ಟಿ. ಪದ್ಮೇಗೌಡ,** ಘಟಕ–1, ರಾ.ಸೇ.ಯೋ.

– **ಡಾ. ಎಂ. ವೆಂಕಟೇಶ್,** ಘಟಕ–2, ರಾ.ಸೇ.ಯೋ.





# 2016–17ನೇ ಸಾಲಿನ ಕ್ರೀಡಾ ವರದಿ

ಕುವೆಂಪು ವಿಶ್ವವಿದ್ಯಾನಿಲಯದ ಅಂತರಕಾಲೇಜು ಪಂದ್ಯಾವಳಿ ಮತ್ತು ಅಂತರ ವಿ.ವಿ. ತಂಡಗಳ ಆಯ್ಕೆಯಲ್ಲಿ ನಮ್ಮ ಕಾಲೇಜಿನ ಕ್ರೀಡಾಪಟುಗಳು ಸ್ಪರ್ಧಿಸಿ ಅತ್ಯುತ್ತಮ ಪ್ರದರ್ಶನ ನೀಡಿರುತ್ತಾರೆ.

2017ನೇ ಸಾಲಿನಲ್ಲಿ ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವದ ಸಂಭ್ರಮಾಚರಣೆಯ ಪ್ರಯುಕ್ತ ಕುವೆಂಪು ವಿ.ವಿ.ದ ಅಂತರ್ ಕಾಲೇಜು ಮಟ್ಟದ ಮಹಿಳಾ ಕ್ರೀಡಾ ಕೂಟವನ್ನು ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು ಮತ್ತು ಕುವೆಂಪು ವಿ.ವಿ.ದ. ಸಂಯುಕ್ತಾಶ್ರಯದಲ್ಲಿ ನಡೆಸಲಾಯಿತು.

ದಿನಾಂಕ 23–3–2017 ರಿಂದ 25–3–2017ರವರೆಗೆ ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ಕುವೆಂಪು ವಿ.ವಿ. ಅಂತರ್ ಕಾಲೇಜು ಮಟ್ಟದ ಮಹಿಳಾ ಕ್ರೀಡಾಕೂಟವನ್ನು ನಡೆಸಲಾಯಿತು. ಈ ಕ್ರೀಡಾ ಕೂಟದಲ್ಲಿ ಒಟ್ಟು 28 ಕಾಲೇಜುಗಳ 560 ವಿದ್ಯಾರ್ಥಿನಿಯರು ಭಾಗವಹಿಸಿದ್ದು, ಕುವೆಂಪು ವಿ.ವಿ.ಯ ಈ ಕ್ರೀಡಾ ಕೂಟದಲ್ಲಿ ಪ್ರಥಮ ಬಾರಿಗೆ ದಾಖಲೆಯ ಮಟ್ಟದ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಭಾಗವಹಿಸಿದ್ದು ಹೆಮ್ಮೆಯ ವಿಷಯ. ಇದು ಒಂದು ಹೊಸ ದಾಖಲೆ. ಈ ದಾಖಲೆ ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವಕ್ಕೆ ಮತ್ತೊಂದು ಗರಿಯನ್ನು ಇಟ್ಟಂತಾಗಿದೆ.

ಈ ಕ್ರೀಡಾ ಕೂಟವನ್ನು ಡಾ. ಹೆಚ್.ಎಸ್. ಭೋಜ್ಯಾನಾಯ್ಕ, ಕುಲಸಚಿವರು, ಕುವೆಂಪು ವಿ.ವಿ. ಶಂಕರಘಟ್ಟ ಹಾಗೂ ಶ್ರೀ ಕೆ.ಜಿ. ಸುಬ್ರಮಣ್ಯ, ಅಧ್ಯಕ್ಷರು, ದೇಶೀಯ ವಿದ್ಯಾಶಾಲಾ ಸಮಿತಿ (ರಿ.) ಶಿವಮೊಗ್ಗ ಇವರು ಉದ್ಘಾಟಿಸಿದರು. ಮತ್ತು ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಶೇಖರ್ ನಾಯಕ್ ಆಗಮಿಸಿದ್ದರು. ಇವರು ನಮ್ಮ ದೇಶಕ್ಕೆ ಅಂಧರ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಾಯಕರಾಗಿ ವಿಶ್ವಕಪ್ ತಂದುಕೊಟ್ಟರು. ಹಾಗೂ ಕುವೆಂಪು ವಿ.ವಿ.ಯ ಕ್ರೀಡಾ ವಿಭಾಗದ ನಿರ್ದೇಶಕರಾದ ಡಾ. ಎಸ್.ಎಂ. ಪ್ರಕಾಶ್ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ಷಡಾಕ್ಷರಿ ಮತ್ತು ಡಾ. ಗೀತಾ ಸಾಮಕ್ ಪ್ರಾಂಶುಪಾಲರು ಇವರುಗಳು ಭಾಗವಹಿಸಿ ಈ ಕ್ರೀಡಾ ಕೂಟಕ್ಕೆ ಚಾಲನೆ ನೀಡಿದರು.

ಈ ಕ್ರೀಡಾ ಕೂಟದ ಸಮಾರೋಪ ಸಮಾರಂಭದಲ್ಲಿ ದೇಶೀಯ ವಿದ್ಯಾಶಾಲಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ರಾಜಶೇಖರ್, ಸಹಕಾರ್ಯದರ್ಶಿಗಳಾದ ಶ್ರೀ ಬಿ. ಗೋಪಿನಾಥ್, ನಿರ್ದೇಶಕರಾದ ಎಸ್.ಪಿ. ದಿನೇಶ್ ಮತ್ತು ಮುಖ್ಯ ಅತಿಥಿಗಳಾಗಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹ ನಿರ್ದೇಶಕರಾದ ಶ್ರೀ ರಮೇಶ್‌ರವರು ಹಾಗೂ ಕುವೆಂಪು ವಿ.ವಿ.ದ ಬಿಪಿಎಡ್. ವಿಭಾಗದ ಸಂಯೋಜನಾಧಿಕಾರಿ ಡಾ. ಅಪ್ಪಣ್ಣ ಮಹಾದೇವ ಗಸ್ತಿರವರು ಮತ್ತು ಕಾಲೇಜಿನ ಪ್ರಾಂಶುಪಾಲರಾದ ಡಾ. ಗೀತಾ ಸಾಮಕ್‌ರವರು ಭಾಗವಹಿಸಿದ್ದರು.

**2016–17ನೇ ಸಾಲಿನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಕುವೆಂಪು ವಿ.ವಿ.ಯ ಅಂತರ್ ಕಾಲೇಜಿನ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ವಿವರ:**

ದಿನಾಂಕ 16–9–2016 ರಿಂದ 17–9–2016ರವರೆಗಿನ ಸರ್.ಎಂ.ವಿ. ವಿಜ್ಞಾನ ಕಾಲೇಜು ಭದ್ರಾವತಿಯಲ್ಲಿ ನಡೆದ ಗುಡ್ಡಗಾಡು ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ತಂಡ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ.

ದಿನಾಂಕ 21-9-2016 ರಿಂದ 24-9-2016ರವರೆಗಿನ ನಗರದ ಆಚಾರ್ಯ ತುಳಸಿ ರಾಷ್ಟ್ರೀಯ ವಾಣಿಜ್ಯ ಕಾಲೇಜಿನಲ್ಲಿ ನಡೆದ ಕುವೆಂಪು ವಿ.ವಿ.ಯ ಅಂತರ್ ಕಾಲೇಜ್ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ "ಬಾಲಕರ ತಂಡವು 5ನೇ ರ್‍ಯಾಂಕ್ ಮತ್ತು ಬಾಲಕಿಯರ ತಂಡ 9ನೇ ರ್‍ಯಾಂಕ್ ಪಡೆದಿರುತ್ತಾರೆ."

ದಿನಾಂಕ 27-9-16ರಿಂದ 29-9-17ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿಕಾರಿಪುರದಲ್ಲಿ ನಡೆದ ಕುವೆಂಪು ವಿ.ವಿ. ಅಂತರ್ ಕಾಲೇಜು ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ.

ದಿನಾಂಕ 16-10-2016ರಿಂದ 18-10-2016ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಳೆಹೊನ್ನೂರಿನಲ್ಲಿ ನಡೆದ ಕುವೆಂಪು ವಿ.ವಿ. ಅಂತರ ಕಾಲೇಜು ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಮಂಜುನಾಥ್ ಡಿ. ದ್ವಿತೀಯ ಬಿ.ಎ ಇವರು 54 ಕೆ.ಜಿ. ವಿಭಾಗದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನದೊಂದಿಗೆ ಬೆಳ್ಳಿಯ ಪದಕವನ್ನು ಪಡೆದಿರುತ್ತಾರೆ.

ದಿನಾಂಕ 26-10-2016 ರಿಂದ 28-10-2016ರ ವರೆಗೆ ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ನಡೆದ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ನಮ್ಮ ಕಾಲೇಜಿನ ತಂಡವು ಭಾಗವಹಿಸಿ, ಪ್ರಿಯಾಂಕ ಟಿ.ಎಂ. ಪ್ರಥಮ ಬಿ.ಎ. ಇವರು ಗುಂಡು ಎಸೆತದಲ್ಲಿ ಚಿನ್ನದ ಪದಕದೊಂದಿಗೆ ಪ್ರಥಮ ಸ್ಥಾನ ಗಳಿಸಿರುತ್ತಾರೆ. ಮತ್ತು ರಾಕೇಶ್ ಎಲ್.ಬಿ. ತೃತೀಯ ಬಿ.ಎ. ಇವರು 5000 ಮೀ. ಓಟದಲ್ಲಿ ತೃತೀಯ ಸ್ಥಾನದೊಂದಿಗೆ ಕಂಚಿನ ಪದಕ ಪಡೆದಿರುತ್ತಾರೆ.

ದಿನಾಂಕ 18-2-17 ರಿಂದ 19-2-2017ರವರೆಗೆ ಶರಾವತಿ ಪ್ರಥಮ ದರ್ಜೆ ಕಾಲೇಜು ಕೋಣಂದೂರಿನಲ್ಲಿ ನಡೆದ ಕುವೆಂಪು ವಿ.ವಿ. ಅಂತರ್ ಕಾಲೇಜು ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ. ಅಲ್ಲದೆ

ದಿನಾಂಕ 15-03-2017 ರಂದು ಎಲ್.ಬಿ. ಮತ್ತು ಎಸ್.ಬಿ.ಎಸ್. ಕಾಲೇಜು, ಸಾಗರ ಇವರು ಆಯೋಜಿಸಿದ್ದ ಕುವೆಂಪು ವಿ.ವಿ. ಅಂತರ್ ಕಾಲೇಜು ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ. ಅಲ್ಲದೆ ಡಿವೀನ್ ಎಲ್. ತೃತೀಯ ಬಿ.ಎಸ್ಸಿ ಇವರು ರಾಷ್ಟ್ರಮಟ್ಟದ ಅಂತರ ವಿ.ವಿ. ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುತ್ತಾರೆ.

ದಿನಾಂಕ 23-3-2017 ರಿಂದ 25-3-2017ರವರೆಗೆ ಡಿ.ವಿಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನಡೆದ ಕುವೆಂಪು ವಿ.ವಿ. ಅಂತರ್ ಕಾಲೇಜು ಮಟ್ಟದ ಮಹಿಳಾ ಕ್ರೀಡಾ ಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರ ತಂಡವು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿರುತ್ತಾರೆ.

ಈ ಎಲ್ಲಾ ಕ್ರೀಡಾ ಚಟುವಟಿಕೆಗಳು ಯಶಸ್ವಿಯಾಗಲು ನಮ್ಮ ಕಾಲೇಜಿನ ಪ್ರಾಂಶುಪಾಲರು, ದೇಶೀಯ ವಿದ್ಯಾಶಾಲಾ ಸಮಿತಿಯವರು, ಕ್ರೀಡಾ ಸಮಿತಿಯ ಸದಸ್ಯರುಗಳು, ಕಾಲೇಜಿನ ಅಧ್ಯಾಪಕ/ ಅಧ್ಯಾಪಕೇತರರು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಸಹಕರಿಸಿರುತ್ತಾರೆ. ಇವರೆಲ್ಲರಿಗೂ ಕ್ರೀಡಾ ವಿಭಾಗದಿಂದ ಧನ್ಯವಾದಗಳು.

**ದೇವೇಂದ್ರನಾಯ್ಕ ಆರ್.ಎಸ್.**
ದೈಹಿಕ ಶಿಕ್ಷಣ ನಿರ್ದೇಶಕರು





# NCC REPORT

## History of College NCC :

Our college was established in the year 1966 at SHIVAMOGGA. In order to inclucate national sprit &discipline among students, NCC Army Wing was started in College 1967. The college comprises both senior division (boys) and senior wing candets (girls). The college NCC plantoon holds a company which comes under 20 KAR BN NCC, Shivamogga Karnataka-Goa NCC Directorate.

The NCC Army Wing has been nurtured by
CAPTAIN. PANDURANGA UDUPA (1967 TO 1977)
Lt. A. THIMME GOWDA (1977 to 1980)
MAJOR. V. G. CHANDRASHEKAR (1980 to 2009)
in the past.

The senior division Boys and Girls unit is Presently commanded by Lt. R. Suresh, Asst. Professor of Political Science. He is serving as Associate NCC officer of the college from past 8 years.

## NCC VISION

Empower volunteer youth to become potential leaders and responsible citizens of the country.

## NCC MISSION

To develop leadership and character qualities, mould discipline and nurture social integration and cohesion through multi-faceted programmes conducted in a military environment.

## NCC Objectivies :

1. To train volunteer youth to become confident, committed and competent leaders in all walks of life.
2. To enhance the awareness level of cadets for being responsibile citizens of the country.
3. Provide opportunities and encourage cadets to enhance their knowledge / aware ness levels on life/ communication skills, character building / personality devel opment.

4. Conduct activities to provide value based contributions towards society in terms of social and community development.

5. Undertake adventure activities for development of leadership qualities and risk taking abilities.

6. Provide a platform to launch "good-will ambassadors" cadets to project the in age of the country overseas.

7. Provide an environment to motivate cadets to join the armed forces as a career.

**Intake Capacity :**

* Authorised strength of the Senior Division (Boys) and senior wing (Girls) is 52.

* Every year students of first year are enrolled as new cadets.

**Enrolment :**

Enrolment of the cadets is carried out as per NCC Act, in the presence of ANO, Principal and Commanding officer's nominee, in the month of July/August, once the academic admissions are over. The total authorised strength is maintained as above.

**Distinct Features :**

1. Sufficient space for office and store room.
2. Ample space of Parade Ground
3. Well experienced teaching staff ie. Associate NCC Officer, and Visiting P.I. Staff for Field training and Weapon Training.
4. Sufficient Teaching aids.
5. Availability of Audio Visual aid facility in college
6. Availability of well established Auditorium.

**Training Philosophy :**

1. Comprehensive training for 'Empowerment of Youth' to earn the 'Right to Lead'.
2. Module based training to include -
   i) Character building and competence Development.
   ii) Basic Military Training
   iii) Social Awareness and Service.
3. Innovative, interesting and safe conduct of training with high degree of visibility to inspire youth, duly supported by appropriate training infrastructure and logistics support for cadets.



**Training :**

Training programme and syllabi is framed by NCC organization at national level.

1. Training Period : 3 years
2. Parade days and Timing : 1 day in a week (Saturday)
3. Training Staff : ANO. Lt. R. SURESH
   : Visiting PI Staff (J Co's and NCO's) from Battalion

**Training :**

Both institutional and camp training imparted effectively.

**Institutional Training :**

35 parades, are conducted in college premises as well as at Bn. HQ.,ie, 20Kar/Bn/NCC B. H. Road, Shivamogga. All subjects as directed by NCC organization are taught. The lessons are delivered by ANO, PI staff of the battalion and also by senior cadets as a part of training and preparation for NCC examinations. Practical Training is given on the ground by PI staff and ANO.

**(A) Training Syllabus :**

Training Programme and syllabi is framed by NCC organization at national level. NCC Syllabus covers entire aspects to achieve aims of NCC. It includes : Drill, Map Reading, Field Engineering, Obstacle, Weapon Training, First aid and Health & Hygiene, Military Organization, National Integration, Self Defence, Posture Training and Yoga, Disaster management etc.,

**(B) Nature of training :**

1. On parade ground
2. In the class room
3. During various camps (ATC / ALC/ BLC/ NIC/ Pre. RD/ RD Group Selection/ TSC/ Trekking / Parasailing.
4. Guest lectures
5. Firing Training in Training Camp
6. Participation in social services
7. Disaster Management Training

**Camp Training :**

Cadets actively participate in the various camps organized by battalion, NCC Mangalore group & Directorate and other Director General NCC Camps.

**Our cadets participate in following camps**

1. Republic Day Parade camp (RDC), Delhi
2. Thal Sainik Camp (TSC), Delhi
3. Basic/ Advanced Leadership Camp (BLC)
4. Basic/ Advanced Mountaineering Camp
5. National Integration Camp
6. NCC, National Games Delhi
7. Parasyling camp
8. Annual Training camp (ATC)
9. Army Attachment Camp
10. Rock Climbing Camp (RCC)
11. Personality Development Camp (PDC)
12. International Yoga Day.

**Social Service :**

Apart from regular parades and camps, cadets participate in social service activities like blood donation camp, Aids rally, blood donation rally, Pulse polio, voters day rally etc., organised by college unit.

**Following are regular annual social activities organized by NCC Unit.**

1) Blood Donation Camp
2) NCC Day Celebration
3) Adventurous Trekking
4) AIDS Awareness Rally
5) Pulse Polio Campaign
6) Voters Awareness Campaign
7) Road Safety Week with RTO
8) Traffic Control Programme Volunteering
9) Tree Plantaion Programme
10) Disaster Management Programme
11) Social Awareness Rally

**Incentives :**

1. NCC organization motivates cades, by offering scholarships and giving them washing and refreshment allowance as per NCC rules of DG NCC to the eligible cadets.
2. In Annual Gathering Programme, our college offers prizes to cadets for their special achievements during various camp activities.

**Examinations :**

Two Certificate Exams are being conducted as :

1) 'B' Certificate Examination
2) 'C' Certificate Examination

**By Lt. R. Suresh**
NCC Officer.





## ಪ್ರಾಂಶುಪಾಲರ ಪರಂಪರೆ

| ಶ್ರೀಯುತರುಗಳಾದ | ಸೇವಾ ಅವಧಿ | |
|---|---|---|
| | ಯಿಂದ | ವರೆಗೆ |
| ಸಿ.ವಿ. ರಾಮಸ್ವಾಮಿ, ಬಿ.ಎ., ಬಿ.ಟಿ. | 1-6-1966 | 3-8-1966 |
| ಪ್ರೊ. ಹೆಚ್.ಎಸ್. ನಾರಾಯಣ ಭಟ್, ಎಂ.ಎ., ಬಿ.ಎಡ್., | 4-8-1966 | 15-6-1979 |
| ಎಸ್.ಎನ್. ಶಂಕರಮೂರ್ತಿ, ಎಂ.ಎ. ಬಿ.ಎಡ್., | 16-6-1979 | 15-5-1988 |
| ಪ್ರೊ. ಪಾಂಡುರಂಗ ಉಡುಪ, ಎಂ.ಎ., | 16-5-1988 | 31-5-1996 |
| ಪಿ.ವಿ. ಕೃಷ್ಣಭಟ್, ಎಂ.ಎ., | 01-6-1996 | 28-2-1997 |
| ಪ್ರೊ. ಜಿ.ವಿ. ಕೃಷ್ಣಮೂರ್ತಿ, ಎಂ.ಎ., | 1-3-1997 | 30-9-1998 |
| ಪ್ರೊ. ಹೆಚ್.ಆರ್. ಶಂಕರನಾರಾಯಣ ಶಾಸ್ತ್ರಿ, ಎಂ.ಎಸ್ಸಿ., | 1-10-1998 | 31-10-2001 |
| ಪ್ರೊ. ಬಿ.ಎಂ. ಕುಮಾರಸ್ವಾಮಿ, ಎಂ.ಎ., | 1-11-2001 | 30-6-2002 |
| ಪ್ರೊ. ಕೆ.ಎನ್. ಕಾಂತೇಶಮೂರ್ತಿ, ಎಂ.ಎ., | 1-7-2002 | 31-3-2003 |
| ಪ್ರೊ. ಎನ್. ಸತ್ಯಮೂರ್ತಿ, ಎಂ.ಎಸ್ಸಿ., | 1-4-2003 | 31-3-2005 |
| ಡಾ॥ ಸಿ.ಎಸ್. ನಂಜುಂಡಯ್ಯ, ಎಂ.ಎಸ್ಸಿ., ಪಿ.ಹೆಚ್.ಡಿ., | 1-4-2005 | 30-4-2007 |
| ಡಾ॥ ಬಿ.ಎಂ. ಹೊಸೂರ್, ಎಂ.ಎಸ್ಸಿ., ಪಿ.ಹೆಚ್.ಡಿ., | 1-5-2007 | 31-8-2012 |
| ಡಾ॥ ಜಿ.ಪಿ. ಬಸಪ್ಪ, ಎಂ.ಎಸ್ಸಿ., ಪಿ.ಹೆಚ್.ಡಿ., | 1-9-2012 | 31-12-2012 |
| ಪ್ರೊ. ಆರ್. ಮಂಜುನಾಥ, ಎಂ.ಎಸ್ಸಿ., | 1-1-2013 | 31-8-2014 |
| ಪ್ರೊ. ಎಂ.ಎಸ್. ನಾಗರಾಜರಾವ್, ಎಂ.ಎ., | 1-9-2014 | 31-10-2014 |
| ಪ್ರೊ. ಎಸ್.ಕೆ. ಚಂದ್ರಶೇಖರ್, ಎಂ.ಎಸ್ಸಿ., | 1-11-2014 | 5-11-2015 |
| ಡಾ॥ ಗೀತಾ ಸಾಮಕ್, ಎಂ.ಎಸ್ಸಿ., ಪಿ.ಹೆಚ್.ಡಿ. | 6-11-2015 | 23-4-2017 |
| ಪ್ರೊ. ಎಸ್.ಕೆ. ಚಂದ್ರಶೇಖರ, ಎಂ.ಎಸ್ಸಿ., | 24-4-2017 | |

# Our Proud Rank Holders

| Academic Year | Name | Course | Rank |
|---|---|---|---|
| 1968-69 | M.T. Nagaratna | B.Sc | 10 |
| 1968-69 | M.L. Shivaramakrishnashastry | PUC | 6 |
| 1970-71 | Rangamani | PUC | 3 |
| 1970-71 | Srirangaraju | PUC | 9 |
| 1971-72 | H.P. Rangarajan | PUC | 9 |
| 1971-72 | H.G. Devarajappa | BA | 1 |
| 1976-77 | Ravindra | B.Sc. | 1 |
| 1978-79 | Sunanda B.N. | B.Sc. | 7 |
| 1982-83 | Malini. M. G | BA | 1 (Optional Kannada Gold Medal) |
| 1982-83 | Javali Rekha | B.Sc. | 5 (Gold Medal) |
| 1982-83 | Veena L. G | B.Sc. | 7 |
| 1984-85 | Subramanya H.S. | B.Sc. | 1 |
| 1984-85 | Ramesh. A.R. | B.Sc. | 3 |
| 1985-86 | M.C. Laxmi | B.Sc. | 1 |
| 1986-87 | Keerthishree | B.Sc. | 1 (Three Gold Medals) |
| 1986-87 | Geethanjali | B.Sc. | 4 (Four Gold Medals) |
| 1986-87 | Shobha | B.Sc. | 9 (Two Gold Medals) |
| 1986-87 | Anupama. M. R. | BA | 3 (Gold Medals) |
| 1987-88 | Annapoorna. H.C. | B.Sc. | 2 (Gold Medals) |
| 1987-88 | Mamatha Subramanya | BA | 2 |
| 1990-91 | Jyothishree Udupa | B.Sc. | 3 (Gold Medals) |
| 1991-92 | Beena P. | B.Sc. | 3 |
| 1991-92 | Sundaresh | B.Sc. | 6 |
| 1992-93 | Keerthana M. | B.Sc. | 2 |
| 1992-93 | Jagannatha Batni | B.Sc. | 5 |
| 1992-93 | Lakshmi H.S. | B.Sc. | 9 |
| 1992-93 | Rajesh R. | BA | 3 |
| 1992-93 | Shalini | BA | 7 |
| 1993-94 | Rashmi S. | BA | 6 |
| 1993-94 | Rajashree Thimmoli | B.Sc. | 9 |
| 1994-95 | Lakshmi K.S. | B.Sc. | 1 |
| 1994-95 | Vasantha H.M. | B.Sc. | 8 |
| 1995-96 | Y.S. Manohar | B.Sc. | 6 |





| | | | |
|---|---|---|---|
| 1995-96 | Shubha Vijayakumar | BA | 10 |
| 1996-97 | Niveditha | BA | 3 |
| 1996-97 | Rekha Mathew | B.Sc. | 6 |
| 1997-98 | Nagaraja K.S. | B.Sc. | 1 |
| 1997-98 | Sangeetha L. Kashi | B.Sc. | 1 |
| 1997-98 | Veda P. | B.Sc. | 5 |
| 1997-98 | Shanamugappa M.C. | B.Sc. | 6 |
| 1997-98 | Jyothi S.D. | B.Sc. | 8 |
| 1997-98 | Shubha C. | BA | 3 |
| 1997-98 | Dunkin Jalaki | BA | 7 |
| 1998-99 | Chandrappa H. | BA | 5 |
| 1998-99 | Uma M.A. | B.Sc. | 7 |
| 1998-99 | Mruthyunjaya S. | B.Sc. | 9 |
| 1999-2000 | Nanditha G | B.Sc. | 3 |
| 1999-2000 | Jyothi R.A. | B.Sc. | 5 |
| 1999-2000 | Rajesh Nayak | B.Sc. | 6 |
| 1999-2000 | Shilpa V.R. | B.Sc. | 6 |
| 2000-2001 | Manjula S | B.Sc. | 7 |
| 2000-2001 | Shylaja S.L. | B.Sc. | 2 |
| 2000-2001 | Bhavya L | BA | 1 |
| 2000-2001 | Pushpa B.S. | BA | 4 |
| 2002-2003 | Divya V.D. | B.Sc. | 10 |
| 2003-2004 | Akshatha S. | B.Sc. | 4 |
| 2003-2004 | Prashanthi M.T. | B.Sc. | 8 (Two Gold Medals) |
| 2004-2005 | Lakshmi H.V. | B.Sc. | 3 |
| 2004-2005 | Sreelakshmi | B.Sc. | 8 |
| 2004-2005 | Chandrashekar | B.Sc. | 10 |
| 2006-2007 | Priyanaka M.N.K. | B.Sc. | 1 |
| 2006-2007 | Shruthi S.C. | B.Sc. | 5 |
| 2008-2009 | Sahana Taj S. | B.Sc. | 4 |
| 2008-2009 | Jyothi L. | B.Sc. | 7 |
| 2008-2009 | Vijayakumar N.S. | B.Sc. | 5 |
| 2009-2010 | Reshma V.J. | B.Sc. | 7 |
| 2010-2011 | Megha A | B.Sc. | 2 |
| 2010-2011 | Nagashree | B.C.A. | 7 |
| 2011-2012 | Mamatha E. | B.Sc. | 1 |

| | | | |
|---|---|---|---|
| 2011-2012 | Shwetha H.S. | B.Sc. | 2 |
| 2011-2012 | Chaitra B | B.Sc. | 3 |
| 2011-2012 | Roney A. D'Berta | B.Sc. | 3 |
| 2011-2012 | Priyanka S.K. | BCA | 3 |
| 2011-2012 | Godha. H.N. | BCA | 5 |
| 2011-2012 | Dhananjaya M.S. | BCA | 9 |
| 2012-2013 | Abhilasha H.A. | BA | 1 |
| 2012-2013 | Anupama A. | B.Sc. | 1 |
| 2012-2013 | Srikrishna Sagar | B.Sc. | 2 |
| 2013-2014 | Soujanya | BA | 1 |
| 2013-2014 | Rajeeva B.N. | BA | 8 |
| 2013-2014 | Sumalatha R. | B.Sc. | 3 |
| 2013-2014 | Pooja N.N. | B.Sc. | 4 |
| 2013-2014 | Surabi K.S. | B.Sc. | 7 |
| 2013-2014 | Chaitra J.G. | B.Sc. | 8 |
| 2013-2014 | Sriraksha | B.Sc. | 10 |
| 2013-2014 | Husna S. | BCA | 4 |
| 2013-2014 | Asha Chandra | BCA | 5 |
| 2013-2014 | G.M. Priyanka | BCA | 6 |
| 2013-2014 | Shivaraj T.S. | BCA | 8 |
| 2014-2015 | Raksha K.M. | B.Sc. | 5 |
| 2014-2015 | Swathi T.K. | B.Sc. | 8 |
| 2014-2015 | Suma H. N. | BCA | 7 |
| 2015-2016 | Manoj K.S. | B.Sc. | 2 |
| 2015-2016 | Vishwa Kiran | B.Sc. | 4 |
| 2015-2016 | Sahana C. | BCA | 4 |
| 2015-2016 | Sagar Kunte | BCA | 5 |
| 2015-2016 | Deepika Pawar H.S. | BCA | 8 |
| 2016-2017 | Chetan Kumar H.B | B.Sc. | 6 |
| 2016-2017 | Sanjana S. Upadhyaya | B.Sc. | 6 |
| 2016-2017 | Anusha V. | B.Sc. | 10 |
| 2016-2017 | Suresh K.S. | BCA | 3 |
| 2016-2017 | Madhan Kumar B.K. | BCA | 4 |
| 2016-2017 | Shumaila | BCA | 8 |
| 2016-2017 | Sachin S.A. | BCA | 10 |

Achievers

# University Rank Holders 2015-16



MANOJ K.S.
BSc - PME 2nd Rank



VISHWA KIRAN
BSc - CBZ 4th Rank



SAHANA S.
BCA - 4th Rank



SAGAR KUNTE
BCA - 5th Rank



DEEPIKA PAWAR
BCA - 8th Rank

# Gold Medal Winner in Athletics



# University Rank Holders 2016-17



ಸುರೇಶ್ ಕೆ.ಎಸ್
ಬಿ.ಸಿ.ಎ- ೩ನೇ ರ‍್ಯಾಂಕ್



ಮದನ್ ಕುಮಾರ್ ಬಿ.ಕೆ
ಬಿ.ಸಿ.ಎ- ೪ನೇ ರ‍್ಯಾಂಕ್



ಸಂಜನಾ ಎಸ್ ಉಪಾಧ್ಯ
ಬಿ.ಎಸ್ಸಿ-(PCM) ೬ನೇ ರ‍್ಯಾಂಕ್



ಚೇತನ್ ಕುಮಾರ್ ಹೆಚ್.ಬಿ
ಬಿ.ಎಸ್ಸಿ-(CBZ) ೬ನೇ ರ‍್ಯಾಂಕ್



ಶುಮೈಲಾ
ಬಿ.ಸಿ.ಎ- ೮ನೇ ರ‍್ಯಾಂಕ್



ಅನುಷಾ ವಿ
ಬಿ.ಎಸ್ಸಿ-(PCM) 10 ನೇ ರ‍್ಯಾಂಕ್



ಸಚಿನ್ ಎಸ್.ಎ
ಬಿ.ಸಿ.ಎ- 10 ನೇ ರ‍್ಯಾಂಕ್








D.V.S. COLLEGE OF ARTS & SCIENCE, SHIMOG



